ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೬೫
ವಿಚಾರ ಸಾಹಿತ್ಯಮಾಲೆ – ೭೮
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

ಸಂಪಾದಕರು
ಡಾ. ಎ. ವಿ. ನರಸಿಂಹಮೂರ್ತಿ

ಭಾರತೀಯ ಇತಿಹಾಸದ ನಿರ್ಣಾಯಕ ಕಾಲಾವಧಿಗಳು

ಭವನದ ಗ್ರಂಥ ವಿಶ್ವವಿದ್ಯಾನಿಲಯ

ಭಾರತೀಯ ಇತಿಹಾಸದ ನಿರ್ಣಾಯಕ ಕಾಲಾವಧಿಗಳು

ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ

(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)

–ಋಗ್ವೇದ, I ೮೯–೧

ಮೂಲ

ಕೆ. ಎಂ. ಪಣಿಕ್ಕರ್

ಅನುವಾದ

ಎಚ್. ಗಣೇಶ ಐತಾಳ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು

ಮತ್ತು

ಭಾರತೀಯ ವಿದ್ಯಾ ಭವನ, ಮೈಸೂರು

Bharatiya Itihasada Nirnayaka Kalavadigalu: Kannada translation of *Determining Periods of Indian Histroy* : **K. M. Panikkar;** Kannada translation by **H. Ganesh Aithal;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp. xxii + 64. Price : Rs. 10/-

ಮುದ್ರಣ : ೨೦೧೩
ಪುಟಗಳು : xxii + ೬೪
ಬೆಲೆ : ರೂ. ೧೦/-

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
ಮೆ॥ ಮಯೂರ ಪ್ರಿಂಟ್ ಆಡ್ಸ್
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೬೨೪

ಕರ್ನಾಟಕ ಸರ್ಕಾರ

ಸಿದ್ದರಾಮಯ್ಯ
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ–ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ–ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ, ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ,

'ಕನಕದಾಸರ ಕೃತಿ'ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು 'ಸಂಶೋಧನ ಕೇಂದ್ರ' ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ

ಉಮಾಶ್ರೀ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ 'ಕಾವೇರಿ ನ್ಯಾಯಾಧಿಕರಣದ ತೀರ್ಪಿ'ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ 'ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ' ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

ಬಸವರಾಜು, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

16/12/11
(ಬಸವರಾಜು)

ಕರ್ನಾಟಕ ಸರ್ಕಾರ

ಕೆ.ಆರ್. ರಾಮಕೃಷ್ಣ, ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.



(ಕೆ. ಆರ್. ರಾಮಕೃಷ್ಣ)

ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು

ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ–ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

ಪ್ರಧಾನ್ ಗುರುದತ್ತ
ಅಧ್ಯಕ್ಷ

ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಇದು ಕೆ.ಎಂ. ಪಣಿಕ್ಕರ್ ಅವರ *Determining Periods of Indian Histroy* ಪುಸ್ತಕದ ಕನ್ನಡ ಅನುವಾದ. 'ಭಾರತೀಯ ಇತಿಹಾಸದ ನಿರ್ಣಾಯಕ ಕಾಲಾವಧಿಗಳು' ಎಂಬ ಹೆಸರಿನಲ್ಲಿ ಶ್ರೀ ಎಚ್. ಎಸ್. ಗಣೇಶ ಐತಾಳ ಅವರು ಇದನ್ನು ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿ ಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

ಎನ್. ರಾಮಾನುಜ
ಅಧ್ಯಕ್ಷರು
ವಿದ್ಯಾಭವನ, ಕರ್ನಾಟಕ

ಎ. ವಿ. ನರಸಿಂಹಮೂರ್ತಿ
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ

ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೯೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ನಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ–ಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

ಕೆ. ಎಂ. ಮುನ್ಷಿ

ಪ್ರಕಾಶಕರ ನುಡಿ

ಡಿಸೆಂಬರ್ ೧೯೬೧ಲ್ಲಿ ನಡೆದ ಭಾರತೀಯ ವಿದ್ಯಾಭವನದ ೨೪ನೆಯ ಸಂಸ್ಥಾಪನಾ ದಿನದ ಸಮಾರಂಭದ ಸಮಯದಲ್ಲಿ, ಭವನದ ವಾರ್ಷಿಕ ಬಿರ್ಲಾ ದತ್ತಿ ಯೋಜನೆಯ ಅನುಸಾರ, ಸರ್ದಾರ್ ಕೆ.ಎಂ. ಪಣಿಕ್ಕರ್ ಅವರು ಭಾರತೀಯ ಇತಿಹಾಸವನ್ನು ಕುರಿತಂತೆ ಮೂರು ಉಪನ್ಯಾಸಗಳನ್ನು ನೀಡಿದರು. "ಭಾರತೀಯ ಇತಿಹಾಸದ ನಿರ್ಣಾಯಕ ಕಾಲವಧಿಗಳು" ಎಂಬ ಹೆಸರಿನ ಈ ಸರಣಿ ಉಪನ್ಯಾಸಗಳಲ್ಲಿ ಅವರು ಭಾರತೀಯ ಇತಿಹಸದ ಬಗ್ಗೆ ಹೊಸ ದೃಷ್ಟಿಯಲ್ಲಿ ಮರುಪರಿಶೀಲನೆ ನಡೆಸಿದರು. ತಲಾ ನೂರು ವರ್ಷಗಳ ಮೂರು ವಿಭಿನ್ನ ಕಾಲಾವಧಿಗಳನ್ನು (ಕ್ರಿ. ಪೂ. ೩೫೦ರಿಂದ ೨೫೦ರ ವರೆಗೆ, ಕ್ರಿ.ಶ. ೧೩೩೦ರಿಂದ ೧೪೩೦ರವರೆಗೆ ಮತ್ತು ಕ್ರಿ.ಶ. ೧೮೧೮ರಿಂದ ೧೯೧೮ರವರೆಗೆ ಗಮನದಲ್ಲಿರಿಸಿಕೊಂಡು ಆಯಾ ಅವಧಿಗಳಲ್ಲಿ ಸಂಭವಿಸಿದ ಘಟನೆಗಳು ಹಾಗೂ ಭಾರತೀಯರ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರವಾಹದ ಉಬ್ಬರ ಇಳಿತಗಳ ಕಥೆಯನ್ನು ವಿಸ್ತಾರವಾಗಿ ನಿರೂಪಿಸಿದ್ದಾರೆ. ಮೊದಲನೆಯ ಕಾಲಾವಧಿಯಲ್ಲಿ (ಕ್ರಿ. ಪೂ. ೨೩೦–೨೫೦) ಸಂಸ್ಕೃತ ಭಾಷೆ ಮತ್ತು ಸಾಹಿತ್ಯಗಳ ಮೂಲಕ ಜನರಲ್ಲಿ ಮೂಡಿದ ಒಗ್ಗಟ್ಟು, ಎರಡನೆಯ ಕಾಲವಧಿಯಲ್ಲಿ (ಕ್ರಿ.ಶ. ೧೩೩೦–೧೪೩೦) ಹಿಂದೂ ಧಾರ್ಮಿಕ ಪುನರುತ್ಥಾನಕ್ಕೆ ಕಾರಣವಾದ ಇಸ್ಲಾಮ್ ವಿರೋಧಿ ಪ್ರತಿಭಟನೆಗಳು ಹಾಗೂ ಮೂರನೆಯ ಕಾಲಾವಧಿಯಲ್ಲಿ (ಕ್ರಿ.ಶ. ೧೮೧೮–೧೯೧೮) ಭಾರತೀಯರ ಮೇಲೆ ಪ್ರಭಾವ ಬೀರಿದ ವಿದೇಶೀ ನಾಗರಿಕತೆ ಮತ್ತು ಇಂಗ್ಲಿಷ್ ಭಾಷೆ– ಇವು "ನಮ್ಮ ಪ್ರಾಚೀನ ಸಮಾಜವನ್ನು ಉತ್ಸಾಹ ಹಾಗೂ ದೂರದರ್ಶಿತ್ವಗಳಿಂದ ಕೂಡಿದ ಆಧುನಿಕ ರಾಷ್ಟ್ರವನ್ನಾಗಿ ಹೇಗೆ ರೂಪಾಂತರಗೊಳಿಸಿದವು" ಎಂಬುದನ್ನು ಸೋದಾಹರಣವಾಗಿ ಅವರು ತಿಳಿಸಿದ್ದಾರೆ.

ತಮ್ಮ ಅಗಾಧ ಪಾಂಡಿತ್ಯ ಮತ್ತು ವಿಮರ್ಶಾತ್ಮಕ ದೃಷ್ಟಿಕೋನಗಳಿಂದ ಸರ್ದಾರ್ ಪಣಿಕ್ಕರ್ ಅವರು, ಭಾರತದ ಪುನರಾನ್ವೇಷಣೆ ಹಾಗೂ ಪುನರುತ್ಥಾನಕ್ಕೆ ಕಾರಣವಾದ ಮಹಾ ಚಳವಳಿಗಳತ್ತ ಹೊಸ ಬೆಳಕನ್ನು ಚೆಲ್ಲಿದ್ದಾರೆ.

Blank

ಪರಿವಿಡಿ

Blank

ಭಾರತೀಯ ಇತಿಹಾಸದ ನಿರ್ಣಾಯಕ ಕಾಲಾವಧಿಗಳು

೧. ಭಾರತೀಯರ ಒಗ್ಗಟ್ಟು

ಇತಿಹಾಸವು ಜನಸಮುದಾಯಗಳ ನಿರಂತರ ಚಲನೆಯನ್ನು ಕಾಲಾನುಕ್ರಮವಾಗಿ ನಿರೂಪಿಸುತ್ತದೆ. ಆದುದರಿಂದ ಬೇರೆ ಬೇರೆ ಶತಕಗಳಾಗಿ ಇತಿಹಾಸವನ್ನು ವಿಭಾಗಿಸಿರುವುದು ಅನುಕೂಲಕ್ಕಾಗಿಯೇ ಹೊರತು ಈ ವಿಂಗಡಣೆಗೂ ಐತಿಹಾಸಿಕ ಸ್ವರೂಪಕ್ಕೂ ಯಾವುದೇ ಸಂಬಂಧವಿಲ್ಲ. ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕವೆಂಬ ಕಾಲಾವಧಿಗಳನ್ನು ರೂಪಿಸಿರುವುದೂ ಅಧ್ಯಯನದ ಸೌಲಭ್ಯಕ್ಕಾಗಿಯೇ ಹೊರತು ಇಂತಹ ವಿಂಗಡಣೆಗೆ ನಿರ್ದಿಷ್ಟವಾದ ಮಹತ್ತ್ವವೇನೂ ಇಲ್ಲ. ಆದರೆ ದೇಶಗಳು, ಧರ್ಮಗಳು ಹಾಗೂ ಸಂಸ್ಕೃತಿಗಳ ಇತಿಹಾಸದ ದೃಷ್ಟಿಯಿಂದ, ಸಾಮಾನ್ಯವಾಗಿ ಹೇಳುವುದಾದರೆ, ಇತಿಹಾಸವನ್ನು ಕಾಲಾವಧಿಗಳಾಗಿ ವಿಂಗಡಿಸುವುದು ಅನಿವಾರ್ಯವಾಗಿದೆ. ಇಂತಹ ಕಾಲಾವಧಿಗಳು, ಇತರ ವಿಷಯಗಳಿಗಿಂತ ಹೆಚ್ಚಾಗಿ, ಭವಿಷ್ಯದ ಗತಿಯನ್ನು ರೂಪಿಸುತ್ತವೆ. ದೂರ–ವ್ಯಾಪಿ ಮಹತ್ತ್ವದಿಂದ ಕೂಡಿದ ಕಾರ್ಯಚಟುವಟಿಕೆಗಳು ಜೊತೆಜೊತೆಗೆ ಸಂಭವಿಸಿದಾಗ, ಅವು ಮುಂದಿನ ಕಾಲಾವಧಿಯಲ್ಲಿ ಪರಿಣಾಮ ಬೀರತೊಡಗಿ ತಾರ್ಕಿಕವಾದ ಒಂದು ರೀತಿಯಲ್ಲಿ ಏಳುಬೀಳುಗಳು ಉಂಟಾಗಲು ಪ್ರಾರಂಭವಾಗುತ್ತವೆ. ಹಾಗೆಯೇ, ವಿಷಮ ಸನ್ನಿವೇಶವೊಂದರಲ್ಲಿ ನಡೆದ ಅನ್ವೇಷಣೆಗಳು, ಸಾಧನೆಗಳು ಅಥವಾ ಆಗ ತೆಗೆದುಕೊಳ್ಳಲಾದ ನಿರ್ಧಾರಗಳು, ಮುಂದಿನ ನಿರ್ದಿಷ್ಟ ಬದಲಾವಣೆಗಳಿಗೆ ಕಾರಣವಾಗಬಹುದು. ಇಂತಹ ವಿಶೇಷ ಕಾಲಾವಧಿಗಳು ಒಂದು ದೇಶದ, ಧರ್ಮದ ಅಥವಾ ಸಂಸ್ಕೃತಿಯ ಇತಿಹಾಸದ ದೃಷ್ಟಿಯಿಂದ ನಿರ್ಣಾಯಕವೆನಿಸುತ್ತವೆ. ನನ್ನ ಈ ಅಭಿಪ್ರಾಯವನ್ನು ಸ್ಪಷ್ಟೀಕರಿಸಲು ನೆರವಾಗುವ ಕೆಲವು ನಿದರ್ಶನಗಳು ಇಲ್ಲಿವೆ.

ಕ್ರಿ.ಪೂ. ಮೂರನೆಯ ಶತಮಾನದಲ್ಲಿ, ಮೆಡಿಟರೇನಿಯನ್ ಪ್ರದೇಶದಲ್ಲಿ, ಒಂದೇ ಪ್ರಭುತ್ವದ ಅಡಿಯಲ್ಲಿ ಜನರಲ್ಲಿ ಒಗ್ಗಟ್ಟು ಮೂಡಿತು. ಇದಕ್ಕೆ ಕಾರಣವಾದ ಪ್ರಮುಖ ಸನ್ನಿವೇಶಗಳನ್ನು ನಾವು ನಿರ್ಲಕ್ಷಿಸುವಂತಿಲ್ಲ. ಈ ಕಾಲದಲ್ಲಿ ಪಶ್ಚಿಮ ಯೂರೋಪಿನಲ್ಲಿ ಒಗ್ಗಟ್ಟು ಮೂಡಿದುದಷ್ಟೇ ಅಲ್ಲದೆ, ಕ್ರೈಸ್ತ ಧರ್ಮವು ಏಕಮಾತ್ರ ಅಧಿಕೃತ ಧರ್ಮವಾಗಿ ನಿಗದಿತ ಪ್ರದೇಶವೊಂದರಲ್ಲಿ ವಿಸ್ತರಿಸಲೂ ಸಾಧ್ಯವಾಯಿತು. ಕಳೆದ ಎರಡು ಸಾವಿರ ವರ್ಷಗಳ ಯೂರೋಪಿನ ಇತಿಹಾಸವು, ಬಹುಮಟ್ಟಿಗೆ, ಈ ವಾಸ್ತವ ಸಂಗತಿಯಿಂದಲೇ ರೂಪುಗೊಂಡಿದೆ. ಕ್ರೈಸ್ತ ಧರ್ಮದ ಇಂತಹ

ಪ್ರಭಾವವು ಇಲ್ಲದೆ ಹೋಗಿದ್ದರೆ, ಸ್ಪೆಯಿನ್, ಗಾಲ್ ಹಾಗೂ ಬ್ರಿಟನ್‌ಗಳ ಮೇಲೆ ರೋಮನರು ಪ್ರಭುತ್ವ ನಡೆಸಲು ಅಥವಾ ಪಾಶ್ಚಾತ್ಯ ಸಂಸ್ಕೃತಿಯ ತಳಹದಿಯನ್ನು ಸ್ಥಾಪಿಸಲು ಸಾಧ್ಯವಾಗುತ್ತಿರಲಿಲ್ಲ. ರೋಮನ್ ಸಾಮ್ರಾಜ್ಯದಲ್ಲಿ ಕ್ರೈಸ್ತ ಧರ್ಮವು ಪಸರಿಸುತ್ತಿದ್ದಂತೆ, ಪ್ರತ್ಯೇಕ ಮೆಡಿಟರೇನಿಯನ್ ಪ್ರದೇಶವು ಉದಯಿಸಲು ಸಾಧ್ಯವಾಯಿತು. ಆಗಲೇ ಪಾಶ್ಚಾತ್ಯ ನಾಗರಿಕತೆಯು ಭದ್ರ ಸ್ಥಾಪನೆಗೊಂಡಿತು ಎಂದು ಹೇಳಬಹುದು.

ಇಂತಹದೇ ನಿರ್ಣಾಯಕ ಸ್ವರೂಪವನ್ನು ಹೊಂದಿದ್ದ ಎರಡನೆಯ ಕಾಲಾವಧಿಯನ್ನು ಅನ್ವೇಷಣಾ ಯುಗವೆಂದು ಕರೆಯಲಾಗಿದೆ. ಈ ಅವಧಿಯ ಮೊದಲನೆಯ ಐವತ್ತು ವರ್ಷಗಳಲ್ಲಿ ಅನೇಕ ಪ್ರಮುಖ ಘಟನೆಗಳು ಸಂಭವಿಸಿವೆ. ಉದಾಹರಣೆಗೆ, ಕೊಲಂಬಸನಿಂದ, ಅಮೆರಿಕದ ಅನ್ವೇಷಣೆ, ಪ್ರಾಚ್ಯ ರಾಷ್ಟ್ರಗಳಿಗೆ ವಾಸ್ಕೋಡಗಾಮನು ಸಮುದ್ರಮಾರ್ಗ ಕಂಡುಹಿಡಿದದ್ದು, ಕ್ಯಾಬಟ್‌ನ ಸಮುದ್ರ ಯಾನ ಹಾಗೂ ಅಮೆರಿಕ ಸಂಸ್ಥಾನಗಳ ಅಭಿವೃದ್ಧಿಗೆ ಕಾರಣವಾದಂತಹ ಉತ್ತರ ಅಮೆರಿಕದ ಪ್ರದೇಶಗಳ ಎಲ್ಲೆಗಳನ್ನು ಬ್ರಿಟಿಷರು ಗುರುತಿಸಿದ್ದು, ಸ್ಪೆಯ್ನ್‌ನ ವಿಜಯಿಗಳು ಮೆಕ್ಸಿಕೊ ಮತ್ತು ಪೆರುಗಳ ಪ್ರಾಚೀನ ಸಾಮ್ರಾಜ್ಯಗಳನ್ನು ಗೆದ್ದದ್ದು ಹಾಗೂ ಪೂರ್ವದ ಸಮುದ್ರಗಳ ಮೇಲೆ ಯೂರೋಪಿಯನ್ ಪ್ರಭುತ್ವದ ಸ್ಥಾಪನೆ. ಈ ಐವತ್ತು ವರ್ಷಗಳಲ್ಲಿ ಸಂಭವಿಸಿದ ಘಟನೆಗಳು ಪ್ರಪಂಚದ ಭವಿಷ್ಯದ ರೂಪರೇಷೆಗಳನ್ನೇ ಬದಲಾಯಿಸಿದವು ಎಂದರೆ ಅದೇನೂ ಅತಿಶಯೋಕ್ತಿಯೆನಿಸದು. ಉತ್ತರ ಅಮೆರಿಕ ಮತ್ತು ದಕ್ಷಿಣ ಅಮೆರಿಕ – ಇವೆರಡೂ ಭೂಖಂಡಗಳು ತಮ್ಮ ಜನಾಂಗ ಹಾಗೂ ಸಂಸ್ಕೃತಿಯಲ್ಲಿ ಮುಖ್ಯವಾಗಿ ಯೂರೋಪಿಯನ್ ಎನಿಸಿದುವು. ಆಸ್ಟ್ರೇಲಿಯ, ನ್ಯೂಜಿಲ್ಯಾಂಡ್ ಹಾಗೂ ದಕ್ಷಿಣ ಆಫ್ರಿಕಗಳಂತಹ ಜಗತ್ತಿನ ಇತರ ಭಾಗಗಳೂ ಯೂರೋಪಿಯನ್ ಜೀವನಕ್ಕೆ ಹೊಂದಿಕೊಳ್ಳುವಂತೆ ಬದಲಾವಣೆಯನ್ನು ಉಂಟುಮಾಡಿದ ಅನೇಕ ಚಳವಳಿಗಳು ಕೂಡ ಈ ಕಾಲದಲ್ಲಿಯೇ ಪ್ರಾರಂಭವಾದವು. ಆದರೆ ಈ ಬದಲಾವಣೆ ಪೂರ್ಣರೂಪವನ್ನು ತಾಳಲು ಕೆಲವು ಶತಮಾನಗಳು ಬೇಕಾದವು. ಇದೇ ಕಾಲದಲ್ಲಿ ವಾಣಿಜ್ಯದ ಮೂಲಕ ಮತ್ತು ಕೆಲವು ಪ್ರದೇಶಗಳಲ್ಲಿ ನೇರವಾಗಿ ಪ್ರಭುತ್ವ ನಡೆಸುವುದರ ಮೂಲಕ ಯೂರೋಪ್ ಖಂಡವು ಜಗತ್ತಿನ ಆರ್ಥಿಕ ಸಂಪನ್ಮೂಲಗಳ ಮೇಲೆ ನಿಯಂತ್ರಣವನ್ನು ಸಾಧಿಸತೊಡಗಿತು. ಅಷ್ಟೇ ಅಲ್ಲ, ಈ ಕಾಲದಲ್ಲಿ ನಡೆದ ಘಟನೆಗಳ ಪರಿಣಾಮವಾಗಿ, ಯೂರೋಪಿಯನ್ ಮತ್ತು ಯೂರೋಪಿಯನೇತರ ಜನಾಂಗಗಳು ಹಾಗೂ ಅವುಗಳ ಪ್ರಭುತ್ವದಲ್ಲಿರುವ ಜನಸಂಖ್ಯೆಯ ಪ್ರಮಾಣದಲ್ಲಿ ಕೂಡ ಮೂಲಭೂತ ಪರಿವರ್ತನೆ ಉಂಟಾಯಿತು. ಕಳೆದ ಐನೂರು ವರ್ಷಗಳ ಇತಿಹಾಸದ ಮೇಲೆ ದೃಷ್ಟಿ ಹಾಯಿಸಿದ ಯಾವ ವ್ಯಕ್ತಿಯೂ, ಕ್ರಿ.ಶ. ೧೪೯೦ರಿಂದ ೧೫೪೦ರವರೆಗಿನ ೫೦ ವರ್ಷಗಳ ಈ ಅಲ್ಪ ಕಾಲಾವಧಿಯ ಪ್ರಪಂಚದ

ಸರ್ವತೋಮುಖ ಅಭಿವೃದ್ಧಿಗೆ ಬಹುಮಟ್ಟಿಗೆ ಕಾರಣವಾಯಿತು ಎಂಬುದನ್ನು ಅಲ್ಲಗಳೆಯಲಾರ.

ಪ್ರತಿಯೊಂದು ದೇಶದ ಇತಿಹಾಸದಲ್ಲಿಯೂ ಇಂತಹ ಕೆಲವು ಪ್ರಮುಖ ನಿರ್ಣಾಯಕ ಕಾಲಾವಧಿಗಳಿವೆ. ಇಂಗ್ಲೆಂಡಿನಲ್ಲಿ ಎಲಿಜಬೆಥನ್ ಯುಗದ ದೂರದರ್ಶಿ ಮಹತ್ತ್ವವನ್ನು ಎತ್ತಿಹೇಳಬೇಕಾಗಿಲ್ಲ. ಇದೇ ರೀತಿಯಲ್ಲಿ ಎರಡನ್ನು ಮಾತ್ರ ಉಲ್ಲೇಖಿಸುವುದಾದರೆ ಫ್ರಾನ್ಸಿನ ಹದಿನಾಲ್ಕನೆಯ ಲೂಯಿ ದೊರೆಯ ಕಾಲದಲ್ಲಿ ಹಾಗೂ ರಷ್ಯಾದ ಪೀಟರ್ ಮಹಾಪ್ರಭುವಿನ ಕಾಲದಲ್ಲಿ ಇಡಿಕಿರಿದಂತೆ ಸಂಭವಿಸಿದ ಅನೇಕ ಘಟನೆಗಳು ಮುಂದಿನ ಶತಮಾನಗಳ ಘಟನೆಗಳನ್ನು ರೂಪಿಸಿದವು; ನಿರ್ಧರಿಸಿದವು ಮತ್ತು ನಿರ್ದೇಶಿಸಿದವು ಕೂಡ.

ಭಾರತದಲ್ಲಿಯೂ ಇದೇ ರೀತಿಯ ಕೆಲವು ನಿರ್ಣಾಯಕ ಕಾಲಾವಧಿಗಳು ನಮ್ಮ ಸಂಸ್ಕೃತಿಯ ಐಕ್ಯ ಹಾಗೂ ನಮ್ಮ ಜನಸಮುದಾಯಗಳ ವಿಕಸನಗಳಿಗೆ ಕಾರಣವಾದವು.

ಭಾರತೀಯ ಇತಿಹಾಸಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಹಿಂದೂ ಜನರು ತಾವು ಪ್ರಥಮತಃ ಒಗ್ಗೂಡಿದ ಕಾಲದಿಂದಲೂ ಒಗ್ಗಟ್ಟಾಗಿಯೇ ಮುಂದುವರಿದರೆಂಬುದರಲ್ಲಿ ಸಂದೇಹವಿಲ್ಲ. ಈ ನಿರಂತರತೆ ಇತಿಹಾಸದ ಅದ್ಭುತ ನಿದರ್ಶನಗಳಲ್ಲಿ ಒಂದೆನಿಸಿದೆ. ಚೀನಾ ಮತ್ತು ಕೆಲಮಟ್ಟಿಗೆ ಪರ್ಷಿಯಾ– ಇವೆರಡನ್ನು ಬಿಟ್ಟರೆ, ಇತರ ಯಾವುದೇ ದೇಶದಲ್ಲಿಯೂ ಜನರ ಐಕ್ಯಕ್ಕೆ ಯಾವುದೇ ಭಂಗ ಬಂದಿಲ್ಲ. ಅಲ್ಲದೆ, ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ಕಲಾಸಂಬಂಧಿ ರಂಗಗಳಲ್ಲಿ ಗಮನಾರ್ಹವಾದ ಐಕ್ಯವು ಯಶಸ್ವಿಯಾಗಿ ಮುಂದುವರಿದಿದೆ. ಈ ಪ್ರತಿಯೊಂದು ರಂಗದಲ್ಲಿಯೂ, ಒಂದು ಅಖಂಡ ಸಮುದಾಯವಾಗಿ ಹಿಂದೂಗಳು ಮೊದಲು ಹೇಗೆ ಒಗ್ಗೂಡಿದ್ದರೋ ಅದೇ ರೀತಿಯಲ್ಲಿ ಇಂದಿನವರೆಗೂ ಮುಂದುವರಿದು ಅಭಿವೃದ್ಧಿಯನ್ನು ಸಾಧಿಸಿದ್ದಾರೆ.

ಭಾರತದ ಜನಜೀವನದತ್ತ ದೃಷ್ಟಿ ಹರಿಸಿದಾಗ, ವಿವಿಧ ಕಾಲಾವಧಿಗಳಲ್ಲಿ ತಮ್ಮ ಸಮಾಜವನ್ನು ಬೆದರಿಸಿದ ವಿಷಯ ಪರಿಸ್ಥಿತಿಗಳನ್ನು ಭಾರತೀಯರು ಎದುರಿಸಿದ ರೀತಿಯೇ ಅವರ ನಿರಂತರ ಒಗ್ಗಟ್ಟಿಗೆ ಕಾರಣವೆಂಬ ವಾಸ್ತವ ಸಂಗತಿ ತಿಳಿದು ಬರುತ್ತದೆ. ಭಾರತದ ಭೌಗೋಳಿಕ ವಿಸ್ತಾರ ಹಾಗೂ ಅಪಾರ ಜನಸಂಖ್ಯೆ ಇರುವಂತಹ ಯಾವುದೇ ದೇಶವಿರಲಿ, ಅದು ತನ್ನ ಸಾಮಾಜಿಕ, ರಾಜಕೀಯ ಮತ್ತು ಬೌದ್ಧಿಕ ಜೀವನಕ್ಕೆ ಅಪಾಯಕರವಾದ ವಿಷಮ ಸನ್ನಿವೇಶಗಳನ್ನು ಬಾಹ್ಯ ಒತ್ತಡಗಳಿಂದಷ್ಟೇ ಅಲ್ಲದೆ, ಆಂತರಿಕ ಶೈಥಿಲ್ಯದಿಂದ ಕೂಡ ಎದುರಿಸಲೇಬೇಕಾಗುತ್ತದೆ. ಇಂತಹ ವಿಷಮ ಪರಿಸ್ಥಿತಿಗಳನ್ನು ಎದುರಿಸಿ, ಜಯಿಸಲು ಸಮರ್ಥರಾದ ಜನರು ಮಾತ್ರ ಒಗ್ಗಟ್ಟಾಗಿ ಮುಂದೆ ಸಾಗಲು ಸಾಧ್ಯ. ಇಂತಹ ಅನೇಕ ನಿದರ್ಶನಗಳನ್ನು ಇತಿಹಾಸದಲ್ಲಿ

ನಾವು ಕಾಣಬಹುದು. ಪ್ರಾಚೀನ ಈಜಿಪ್ತಿನಲ್ಲಿ ನಡೆದಂತೆ ಸಾಂಸ್ಕೃತಿಕ ಹಾಗೂ ರಾಜಕೀಯ ಜೀವನದಲ್ಲಿ ಯಾವುದೇ ಒಡಕು ಉಂಟಾಗದಿದ್ದರೆ, ಅಥವಾ ಪೆರುವಿನಲ್ಲಿ ನಡೆದಂತೆ ಜನರಲ್ಲಿ ಮಹತ್ತ್ವದ ಸ್ಥಳಾಂತರಗಳಾಗದೆ ಇದ್ದರೆ ಅಥವಾ ಬ್ಯಾಬಿಲೋನ್, ಮೆಕ್ಸಿಕೋ ಮುಂತಾದ ದೇಶಗಳಲ್ಲಿ ನಡೆದಂತೆ ಸಾಮಾಜಿಕ ಜೀವನ, ಭಾಷೆ ಅಥವಾ ಆರ್ಥಿಕ ಸಂರಚನೆಗಳಲ್ಲಿ ಯಾವುದೇ ಬದಲಾವಣೆಗಳಾಗದೆ ಇದ್ದರೆ, ಆಗ ವಿದೇಶೀಯರ ವಿಜಯಗಳಿಂದ ಜನರ ನಾಗರಿಕತೆಯ ಮೇಲೆ ಮಾತ್ರ ಪರಿಣಾಮವುಂಟಾಗಬಹುದು; ಆದರೆ ಈ ನಾಗರಿಕತೆ ಸ್ಥಳಾಂತರಗೊಳ್ಳುವುದಿಲ್ಲ. ಇಂತಹ ವಿದೇಶೀ ವಿಜಯಗಳು ಸಂಘಟಿತ ಜನಸಮುದಾಯಕ್ಕೆ ಸವಾಲುಗಳನ್ನು ಒಡ್ಡುತ್ತವೆ. ಈ ಸವಾಲುಗಳಿಗೆ ತೋರಿಸಲಾದ ಪ್ರತಿಕ್ರಿಯೆಗಳೂ, ಐತಿಹಾಸಿಕ ವಿಕಸನದ ಬಗೆಯನ್ನು ನಿರ್ಧರಿಸುತ್ತವೆ. ಭಾರತ ಮತ್ತು ಚೀನಾಗಳೆರಡರಲ್ಲಿಯೂ ಬಾಹ್ಯ ಒತ್ತಡಗಳು, ಜನಾಂಗಸ್ಥಿತಿ ವಿವರಣೆಗೆ ಸಂಬಂಧಪಟ್ಟಂತೆ, ಗಂಭೀರ ಸ್ವರೂಪದ ವಲಸೆ ಅಥವಾ ಜನರ ಸ್ಥಳಾಂತರಗಳಿಗೆ ಕಾರಣವಾಗಿಲ್ಲ. ಆದುದರಿಂದ, ಈ ದೇಶಗಳ ಜನರ ಅನನ್ಯತೆಯ ಮೇಲೆ ವಿದೇಶೀ ವಿಜಯಗಳಿಂದ ಯಾವುದೇ ತೀವ್ರ ಪರಿನಾಮವುಂಟಾಗಿಲ್ಲ. ಬದಲಾಗಿ ಅವರ ಒಗ್ಗಟ್ಟು ಇನ್ನಷ್ಟು ಬಲಗೊಂಡಿತು. ಈ ಕಾಲಾವಧಿಗಳಲ್ಲಿ ಅವರು ತಮ್ಮ ಐಕ್ಯವನ್ನು ಪ್ರಬಲಗೊಳಿಸಲು, ತಮ್ಮ ಭಾವನೆಗಳನ್ನು ಪುನಃ ಸಂಘಟಿಸಲು ಹಾಗೂ ತಮ್ಮ ಅನನ್ಯತೆಯನ್ನು ಪ್ರತಿಪಾದಿಸಲು ಸಮರ್ಥರಾದರು. ಹೀಗೆ ಅವರ ಇತಿಹಾಸದಲ್ಲಿ ಈ ಕಾಲಾವಧಿಗಳು ನಿರ್ಣಾಯಕವೆನಿಸಿವೆ.

ಭಾರತದ ಇತಿಹಾಸದಲ್ಲಿ ಇಂತಹ ಮೂರು ಪ್ರಮುಖ ಕಾಲಾವಧಿಗಳನ್ನು ಗುರುತಿಸಬಹುದು: (೧) ಕ್ರಿ.ಪೂ. ನಾಲ್ಕನೆಯ ಶತಮಾನದ ಮಧ್ಯಭಾಗದಿಂದ ಕ್ರಿ.ಪೂ. ಮೂರನೆಯ ಶತಮಾನದ ಮಧ್ಯಭಾಗದವರೆಗೆ; (೨) ಕ್ರಿ.ಶ. ೧೩೩೦ರಿಂದ ೧೪೩೦ರವರೆಗಿನ ನೂರು ವರ್ಷಗಳು; ಮತ್ತು (೩) ೧೯ನೆಯ ಶತಮಾನ. ಸಾಂದರ್ಭಿಕ ಪರಿಶೀಲನೆ ನಡೆಸಿದರೂ ಸಾಕು, ಈ ಕಾಲಾವಧಿಗಳಲ್ಲಿ ಹಿಂದೂಗಳು ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ಅಡಿಪಾಯವನ್ನು ಸ್ಥಾಪಿಸಿದರೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ, ತಮಗೆ ಎದುರಾದ ಅಪಾಯಗಳನ್ನು ಜಯಿಸಿ, ತಮ್ಮ ಸ್ವಂತ ಜೀವನವನ್ನು ಸಮರ್ಥವಾಗಿ ಮುಂದೆ ಸಾಗಿಸುವಷ್ಟು ಪ್ರಬಲರಾದರು.

ಕ್ರಿ.ಪೂ. ೩೫೦ ಮತ್ತು ೨೫೦ರ ನಡುವಣ ಕಾಲವೇ ನಮ್ಮ ಇತಿಹಾಸದ ಒಂದು ನಿರ್ಣಾಯಕ ಕಾಲಾವಧಿಯೆಂದು ನಾನು ಭಾವಿಸಿದ ಮೊದಲನೆಯ ಕಾಲ. ಈ ಕಾಲದಲ್ಲಿ ಭಾರತದ ಜನರಲ್ಲಿ ಒಗ್ಗಟ್ಟು ಹಾಗೂ ರಾಜಕೀಯ ಅರಿವುಗಳು ಮೂಡಿದವು. ಈ ಮಹಾಸಾಧನೆಯ ಕೀರ್ತಿಯು ನಿಸ್ಸಂದೇಹವಾಗಿ ಆಗ ಭಾರತವನ್ನು ಆಳಿದ್ದ ನಂದರಿಗೂ ಅವರ ತರುವಾಯದ ಮೌರ್ಯರಿಗೂ ಸಲ್ಲುತ್ತದೆ.

ಮೈಸೂರಿನವರೆಗೂ ವಿಸ್ತರಿಸಿದ್ದ ಈ ಸಾಮ್ರಾಜ್ಯವು ದಕ್ಷಿಣದ ತುದಿಯೊಂದನ್ನು ಬಿಟ್ಟುಳಿದಂತೆ, ಇಡೀ ಪರ್ಯಾಯದ್ವೀಪವನ್ನೇ ಒಳಗೊಂಡಿತ್ತು. ಮೌರ್ಯರ ಶಾಸನಗಳ ಮೂಲಕ ಈ ಸಾಧನೆ ತಿಳಿದುಬಂದಿದೆ. ಆದರೂ ಮೌರ್ಯರ ಪರಂಪರಾಗತ ಸಾಮ್ರಾಜ್ಯದ ಉನ್ನತಿಗೆ, ಹಿಂದೆ ಸಮರ್ಥ ಸೈನ್ಯವನ್ನು ಕಟ್ಟಿ ಸಶಕ್ತ ಪೌರಸೇವೆಗೆ ನಾಂದಿಹಾಡಿದ್ದ ನಂದರೇ ಕಾರಣರೆಂಬುದನ್ನು ನಾವು ಒತ್ತಿಹೇಳಬೇಕು. ಈ ಸತ್ಯಾಂಶವನ್ನು ನಾವು ಮರೆಯಕೂಡದು. ನಂದರ ಸಾಮ್ರಾಜ್ಯವನ್ನು ಮೌರ್ಯ ಚಂದ್ರಗುಪ್ತನು ವಶಪಡಿಸಿಕೊಂಡನೆಂದು ಭಾವಿಸಲಾಗಿದೆ. ಆದರೆ ನಂದರನ್ನುಳಿದ ಯಾವುದೇ ಸೇನಾವಿಜಯನ ಪರಂಪರೆಯನ್ನು ಮೌರ್ಯರು ಹೊಂದಿರಲಿಲ್ಲ. ಮೌರ್ಯ ಸಾಮ್ರಾಜ್ಯವು ಮೈಸೂರಿನವರೆಗೂ ವಿಸ್ತರಿಸಿತ್ತು ಎಂಬುದು ಎಲ್ಲರಿಗೂ ತಿಳಿದ ವಿಷಯ. ಅದನ್ನು ಅವರು ನಂದರಿಂದಲೇ ಪಡೆದರು ಎಂಬುದು ಶ್ರೇಷ್ಠ ಇತಿಹಾಸಲೇಖಕರ ಅಭಿಪ್ರಾಯವೂ ಆಗಿರುತ್ತದೆ. ಇಷ್ಟೇ ಅಲ್ಲದೆ, 'ಚಕ್ರವರ್ತಿಪಥ'ವು, ಎಂದರೆ ಸಾಮ್ರಾಜ್ಯದ ವಿಸ್ತಾರವು, ಹಿಮಾಲಯದಿಂದ ದಕ್ಷಿಣದವರೆಗೂ ವ್ಯಾಪಿಸಿತ್ತೆಂದು ಇತಿಹಾಸ ಮೀಮಾಂಸಕರು ಸ್ಪಷ್ಟಪಡಿಸಿರುವಂತೆ ಕಂಡುಬರುತ್ತದೆ. ಈಗ ನಾವು ಭಾರತವೆಂದು ಕರೆಯುತ್ತಿರುವ 'ಭರತವರ್ಷ'ದ ರಾಜಕೀಯ ಪರಿಕಲ್ಪನೆಯನ್ನು ಒಂದೇ ಒಂದು ಪ್ರತ್ಯೇಕ ಸಾಮ್ರಾಜ್ಯವನ್ನಾಗಿ, ಮೊತ್ತಮೊದಲಾಗಿ ಕಲ್ಪಿಸಿಕೊಂಡದ್ದೂ ಇದೇ ಕಾಲಾವಧಿಯಲ್ಲಿ. ಮೈಸೂರಿನಷ್ಟು ದಕ್ಷಿಣದವರೆಗೂ ವಿಸ್ತರಿಸಿದ್ದ ಈ ಸಾಮ್ರಾಜ್ಯವು ವಿಸ್ತಾರವಾಗಿದ್ದರೂ ಒಂದೇ ರಾಜಪ್ರಭುತ್ವದ ಅಡಿಯಲ್ಲಿತ್ತು. ಆಗ ಮೂಡಿದ ಭಾರತ ಎಂಬ ಈ ರಾಜಕೀಯ ಪರಿಕಲ್ಪನೆಯು ಮುಂದೆಂದೂ ನಶಿಸಿಹೋಗದೆ, ಭಾರತದ ರಾಜಕೀಯ ಚಿಂತನೆಯ ಕ್ಷೇತ್ರದಲ್ಲಿ ಒಂದು ಪ್ರಮುಖ ಅಂಶವಾಗಿ ಉಳಿದುಕೊಂಡುಬಂದಿತು. ಗುಪ್ತ ಚಕ್ರವರ್ತಿಗಳ ಆಡಳಿತ ಕಾಲದಲ್ಲಿ ರಚಿತವಾದುದೆಂದು ಭಾವಿಸಲಾಗಿರುವ ಮಹಾಕಾವ್ಯ 'ಮಹಾಭಾರತ'ದ ಕೊನೆಯ ಪರ್ವವು, ಸಮಗ್ರ ಭಾರತವನ್ನು ವ್ಯಾಪಿಸಿದ್ದ ಈ 'ಸಾಮ್ರಾಜ್ಯ'ವೆಂಬ ಪರಿಕಲ್ಪನೆಯ ಮುಂದೆ ಭಾರತೀಯರ ಮನಸ್ಸಿನ ಮೇಲೆ ಎಂಥ ಗಾಢ ಪ್ರಭಾವವನ್ನು ಬೀರಿತು ಎಂಬುದನ್ನು ತೋರಿಸುತ್ತದೆ. 'ಮಹಾಭಾರತ'ದ ಕಥೆಯ ಪ್ರತಿಯೊಂದು ಹಂತದಲ್ಲಿಯೂ ಭಾರತದ ಐಕ್ಯದ ಬಗ್ಗೆ ಒತ್ತಿ ಹೇಳಲಾಗಿದೆ. ದಕ್ಷಿಣದ ಪಾಂಡ್ಯರ ರಾಜರುಗಳನ್ನೂ ಒಳಗೊಂಡಂತೆ, ಭಾರತದ ಎಲ್ಲ ದೊರೆಗಳೂ ವಿವಿಧ ಯುದ್ಧಗಳಲ್ಲಿ ಭಾಗಿಗಳಾಗಿದ್ದರು. 'ಅಶ್ವಮೇಧ ಪರ್ವ'ದಲ್ಲಿ ಅರ್ಜುನನು ತನ್ನ ಸೈನ್ಯಗಳನ್ನು ತಾಮ್ರಪರ್ಣಿ ನದೀತೀರದವರೆಗೆ ಮುನ್ನಡೆಸಿದಂತೆ ಸಿಂಧೂ ನದಿಯ ಕರಾವಳಿಯವರೆಗೆ ಕೂಡ ಮುನ್ನಡೆಸಿದ್ದಾನೆ. ವಿವಿಧ ದೊರೆಗಳ ಆಳ್ವಿಕೆಯಲ್ಲಿ ಉತ್ತರದ ಹಿಮಾಲಯದಿಂದ, ದಕ್ಷಿಣದ ರಾಮೇಶ್ವರದವರೆಗೆ ಒಂದೇ ಒಂದೆನಿಸಿದ ಮಹಾಸಮುದಾಯವಿತ್ತು ಎಂಬುದೇ 'ಮಹಾಭಾರತ'ದ ಹಿಂದಿರುವ ರಾಜಕೀಯ

ಪರಿಕಲ್ಪನೆಯಾಗಿರುತ್ತದೆ. ಆದುದರಿಂದ 'ಚಕ್ರವರ್ತಿ'ಯೊಬ್ಬನನ್ನು ಅಧಿಕೃತವಾಗಿ ಗುರುತಿಸುವ ತತ್ತ್ವವು ರೂಪಿಸಲ್ಪಟ್ಟಿದ್ದು ಮೌರ್ಯರ ಕಾಲದಲ್ಲಿಯೇ ಎಂಬುದರಲ್ಲಿ ಸಂಶಯವಿಲ್ಲ.

ಭಾರತ ಅಥವಾ 'ಭರತವರ್ಷ'ವು ಒಂದು ಒಕ್ಕೂಟ ಎಂಬ ಪರಿಕಲ್ಪನೆಯೊಂದೇ ನಂದರು ಹಾಗೂ ಮೌರ್ಯರ ಆಡಳಿತದ ಕಾಲದಿಂದ ಮೂಡಿಬಂದ ರಾಜಕೀಯ ಪರಿಕಲ್ಪನೆಯಲ್ಲ. ಮಗಧದಲ್ಲಿ ವಿಕಸನಗೊಂಡ ರಾಜಕೀಯ ಹಾಗೂ ಆಡಳಿತ ಪದ್ಧತಿಗಳು ಮುಂದೆ ಭಾರತೀಯ ಸಂಪ್ರದಾಯದ ಒಂದು ಭಾಗವೇ ಆಗಿ ಮಾರ್ಪಟ್ಟವು. ಕೌಟಿಲ್ಯನ 'ಅರ್ಥಶಾಸ್ತ್ರ'ವು ಚಂದ್ರಗುಪ್ತನ ಪ್ರಧಾನಮಂತ್ರಿಯ ಕೃತಿಯೆಂಬುದರ ಪರವಾಗಿ ಇರುವ ಆಧಾರವನ್ನು ಕುರಿತಂತೆ ನಾನಿಲ್ಲಿ ಚರ್ಚಿಸಬೇಕಾದ ಅಗತ್ಯವಿಲ್ಲ. ಆದರೆ ಕೌಟಿಲ್ಯನು ವರ್ಣಿಸಿದ 'ರಾಷ್ಟ್ರ'ವು ಮೌರ್ಯರ ಪ್ರಭುತ್ವದ ಕಾಲದಲ್ಲಿ ಭಾರತದಲ್ಲಿದ್ದ ಒಂದು ಪ್ರದೇಶ ಎಂಬುದರಲ್ಲಿ ಸಂದೇಹವಿಲ್ಲ. ಮೌರ್ಯರ ಕಾಲದಿಂದಲೂ ಭಾರತದ ರಾಜಕೀಯ ಚಿಂತನೆಯ ಮೇಲೆ 'ಅರ್ಥಶಾಸ್ತ್ರ'ವು ಪ್ರಭಾವ ಬೀರುತ್ತ ಬಂದಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಅನಂತರ ಇದೇ ವಿಷಯವನ್ನು ಕುರಿತಂತೆ ಕೃತಿ ರಚನೆ ಮಾಡಿದ, ವಿಜಯನಗರದ ಕೃಷ್ಣದೇವರಾಯನವರೆಗಿನ ಎಲ್ಲ ಲೇಖಕರ ಮೇಲೆ ಕೂಡ, ಕೌಟಿಲ್ಯನ ಬರಹಗಳು ಬೀರಿದ ಪ್ರಭಾವವನ್ನು ಗಮನಿಸಬಹುದು. ಸಂಘಟನಾತ್ಮಕವಾಗಿ ಕೂಡ, ಮೌರ್ಯರಿಂದ ಪ್ರಾರಂಭವಾದ ರಾಷ್ಟ್ರ ರಚನಾ ಪದ್ಧತಿಯನ್ನೇ ಮೊಗಲರಿಂದ ಹಿಡಿದು ಬ್ರಿಟಿಷರವರೆಗಿನ ಮುಂದಿನ ಎಲ್ಲ ದೊರೆಗಳೂ ಮುಂದುವರಿಸಿದರು. ಜಿಲ್ಲಾ ಕೇಂದ್ರವನ್ನು ಆಧಾರವಾಗಿ ಹೊಂದಿದ, ಪೌರಸೇವೆಯ ವಿಸ್ತಾರವಾದ ಸಂಘಟನೆಯ ನಿಯಂತ್ರಣದಲ್ಲಿರುವ ರಾಷ್ಟ್ರಾಡಳಿತ ಕೂಡ ಕೌಟಿಲ್ಯನ ರಾಜಕೀಯ ವ್ಯವಸ್ಥೆಯ ಪರಿಕಲ್ಪನೆಯೇ ಆಗಿದ್ದು, ಪ್ರಸ್ತುತ ಭಾರತದ ಆಡಳಿತ ವ್ಯವಸ್ಥೆಯಲ್ಲಿ ಕೂಡ ಈ ಪರಿಕಲ್ಪನೆ ಮುಂದುವರಿದುಬಂದಿದೆ.

ಮಗಧದ ದೊರೆಗಳ ಆಡಳಿತವು ದಕ್ಷಿಣದವರೆಗೆ ವಿಸ್ತರಿಸಿತ್ತು ಎಂಬುದೇನೂ ಮುಖ್ಯವಲ್ಲ. ಇದಕ್ಕೆ ಅವರ ವಿಜಯಗಳೇ ಕಾರಣ. ಆದರೆ ಆ ವಿಜಯವನ್ನು ಅನುಸರಿಸಿ, ಒಕ್ಕೂಟದ ಪರಿಕಲ್ಪನೆ ಮುಂದುವರಿದು ಬಂದದ್ದು ಮಾತ್ರ ವಿಶೇಷ. ಆರ್ಯನ್ನರ ಧಾರ್ಮಿಕ, ಸಾಮಾಜಿಕ, ಶಾಸನಸಂಬಂಧಿ ಮತ್ತು ದೇಶೀಯ ಸಂಘಸಂಸ್ಥೆಗಳು ದಕ್ಷಿಣ ಭಾರತದಲ್ಲಿ ಕೂಡ ಪ್ರಾರಂಭವಾದವು. ಹೀಗೆ ಒಕ್ಕೂಟದ ಈ ಪ್ರಮುಖ ಪರಿಕಲ್ಪನೆಯಿಂದಾಗಿಯೇ ಭಾರತೀಯ ಇತಿಹಾಸದಲ್ಲಿ ಕ್ರಿ.ಪೂ. ೩೫೦ರಿಂದ ೨೫೦ರವರೆಗಿನ ಈ ಕಾಲವು, ಮುಖ್ಯ ನಿರ್ಣಾಯಕ ಕಾಲಾವಧಿಗಳಲ್ಲಿ ಒಂದೆನಿಸಿತು. ಹಿಂದೂಗಳ 'ಧರ್ಮಶಾಸ್ತ್ರ' ಮತ್ತು 'ಗೃಹ್ಯಸೂತ್ರ'ಗಳನ್ನು ಅನುಸರಿಸುವ ಪ್ರಮುಖ ಸಾಮಾಜಿಕ ಪಂಗಡಗಳು ದಕ್ಷಿಣ ಭಾರತದಲ್ಲಿಯೂ ಕಾಣಿಸಿಕೊಳ್ಳ

ತೊಡಗಿದವು. ಇದಕ್ಕಿಂತಲೂ ಮಹತ್ತ್ವದ ಸಂಗತಿಯೆಂದರೆ, ದಕ್ಷಿಣ ಭಾರತದಲ್ಲಿ ದೊಡ್ಡ ದೊಡ್ಡ ಕೆರೆಗಳಿಗೆ 'ಸರಸ್' ಎಂಬ ಪದವನ್ನು ಬಳಸಲಾಗುತ್ತದೆ ಎಂಬ ಪತಂಜಲಿಯ ಹೇಳಿಕೆಯಿಂದ, ದಕ್ಷಿಣದಲ್ಲಿ ವಿದ್ವಾಂಸರು ಸಂಸ್ಕೃತ ಭಾಷೆಯ ಅಧ್ಯಯನದಲ್ಲಿ ತೊಡಗಿದ್ದರು ಎಂದು ನಮಗೆ ತಿಳಿದುಬರುತ್ತದೆ.

ಪ್ರಾಯಶಃ ಈ ಕಾಲದಲ್ಲಿ ಆರ್ಯನ್ ಸಂದೇಶವನ್ನು ದಕ್ಷಿಣ ಭಾರತದ ಜನರಿಗೆ ತಿಳಿಸಿದ್ದು ಜೈನ ಹಾಗೂ ಬೌದ್ಧ ಮತ ಪ್ರಚಾರಕರೆಂದು ತೋರುತ್ತದೆ. ಜೈನ ಸಂನ್ಯಾಸಿಯಾಗಿ ಮಾರ್ಪಟ್ಟ ಚಂದ್ರಗುಪ್ತ ಮೌರ್ಯನು, ದಕ್ಷಿಣ ಭಾರತದ ಮೈಸೂರಿನ ಶ್ರವಣಬೆಳಗೊಳದಲ್ಲಿರುವ ಒಂದು ಮಠದಲ್ಲಿ ಆಚಾರ್ಯ ಭದ್ರ ಬಾಹುವಿನೊಂದಿಗೆ ವಿಶ್ರಾಂತಿ ತೆಗೆದುಕೊಂಡನೆಂದು ಪ್ರಾಚೀನ ಜೈನ ದಾಖಲೆಯೊಂದರಿಂದ ನಮಗೆ ತಿಳಿದುಬರುತ್ತದೆ. ಅಲ್ಲಿ ಅವನು 'ಸಲ್ಲೇಖನ'ದ ಮೂಲಕ ಪ್ರಾಣತ್ಯಾಗ ಮಾಡಿದನೆಂದೂ ಹೇಳಲಾಗಿದೆ. 'ಪ್ರಾಯೋಪವೇಶ'ದ ಮುಖೇನ ನಿಧನ ಹೊಂದುವ ಈ ಸಂಪ್ರದಾಯವನ್ನು ಜೈನ ಸಂನ್ಯಾಸಿಗಳು ಪಾಲಿಸುತ್ತಿದ್ದುದನ್ನು ಶ್ರವಣಬೆಳಗೊಳದಲ್ಲಿ ಮತ್ತು ಅದರ ಸಮೀಪದಲ್ಲಿ ಸಿಕ್ಕಿದಂತಹ ಅನೇಕ ಶಾಸನಗಳು ದೃಢಪಡಿಸಿವೆ. ಇದರಲ್ಲಿ ಅಸಂಭವನೀಯವಾದುದೇನೂ ಇಲ್ಲ. ಮತ್ತೆ ಕನಿಷ್ಠ ಪಕ್ಷ ಕ್ರಿ.ಶ. ಒಂದನೆಯ ಶತಮಾನದಷ್ಟು ಹಿಂದೆಯೇ ಮಧುರಾ ಮತ್ತು ಕೇರಳಗಳಲ್ಲಿ ಜೈನಧರ್ಮವು ಪ್ರವರ್ಧಮಾನಕ್ಕೆ ಬರತೊಡಗಿತ್ತು ಎಂದು ನಮಗೆ 'ಶಿಲಪ್ಪದಿಕಾರಮ್' ಹಾಗೂ 'ಮಣಿಮೇಖಲೈ'ಗಳಿಂದ ತಿಳಿದುಬರುತ್ತದೆ.

ಆದುದರಿಂದ, ಕನಿಷ್ಠ ಪಕ್ಷ ಮೌರ್ಯರ ರಾಜ್ಯಭಾರದ ಅವಧಿಯಲ್ಲಿ ಸಂಚಾರಿ ಬೌದ್ಧ ಹಾಗೂ ಜೈನ ಸಂನ್ಯಾಸಿಗಳು, ದಕ್ಷಿಣ ಭಾರತದ ಆದ್ಯಂತ, ತಮ್ಮ ಗುರುಗಳ ಉಪದೇಶಗಳನ್ನು ಬೋಧಿಸುತ್ತಿದ್ದರು ಎಂಬುದರಲ್ಲಿ ಅನುಮಾನವಿಲ್ಲ. ಅಂತಿಮವಾಗಿ ದಕ್ಷಿಣಭಾರತವನ್ನು ಹಿಂದೂಗಳ ಸಂಪ್ರದಾಯಬದ್ಧತೆಯ ಸುಭದ್ರ ಕೋಟೆಯನ್ನಾಗಿ ಪರಿವರ್ತಿಸಿದ ಈ ಮಹಾಚಳವಳಿಯು ರೂಪುಗೊಳ್ಳಲು ಪ್ರಾರಂಭವಾಯಿತು. ಈ ಕಾರ್ಯಕ್ಕೆ ಬುನಾದಿ ಹಾಕಿದ್ದು ಸಂಪ್ರದಾಯಬಾಹಿರ ಮತಪ್ರಚಾರಕರ ಚಟುವಟಿಕೆಗಳೇ ಎಂಬುದು ನಿಜವಾದರೂ ಇದು ಕೆಲಮಟ್ಟಿಗೆ ವ್ಯಂಗ್ಯವಾಗಿ ಕಂಡುಬರುತ್ತದೆ. ನಿಜ! ಈ ಕಾಲಾವಧಿಯಲ್ಲಿ ನಡೆದದ್ದು ಕೇವಲ ಅಡಿಪಾಯದ ಕೆಲಸ ಮಾತ್ರ. ಆದರೆ ಶಾತವಾಹನರು ಮತ್ತು ಅವರ ಅನಂತರದ ದೊರೆಗಳು ಹಾಗೂ ಕೊನೆಯಲ್ಲಿ ಪಲ್ಲವರು ಕೂಡ, ಆರ್ಯನ್ ಚಿಂತನೆಯನ್ನು ರೂಪಿಸುವಲ್ಲಿ ಮತ್ತು ದಕ್ಷಿಣ ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಮಾಡುವಲ್ಲಿ ನಡೆಸಿದ ಸಾಧನೆಯು, ಈ ನಿಗದಿತ ಕಾಲಾವಧಿಯಲ್ಲಿ ಇದಕ್ಕೆ ಅನುಕೂಲಕರವಾದ ಭದ್ರ ಬುನಾದಿಯು ಸ್ಥಾಪಿತವಾಗದೆ ಇದ್ದಿದ್ದರೆ, ಖಂಡಿತವಾಗಿ ಯಶಸ್ವಿಯಾಗುತ್ತ ಇರಲಿಲ್ಲವೆಂದೇ ಹೇಳಬೇಕು.

ಅಲ್ಲದೆ, ಈ ಕಾಲದಲ್ಲಿ ನಂದ ಹಾಗೂ ಮೌರ್ಯ ಚಕ್ರವರ್ತಿಗಳು ಸ್ಥಾಪಿಸಿದ ಆಂತರಿಕ ಶಾಂತಿಯ ಪರಿಣಾಮವಾಗಿ, ಶ್ರೇಷ್ಠ ಗುಣಮಟ್ಟದ ವ್ಯಾಪಾರೀ ಮಾರ್ಗಯೋಜನೆಗಳು ರೂಪಿಸಲ್ಪಟ್ಟವು. ಉತ್ತರ ಭಾರತದಲ್ಲಿ ವ್ಯಾಪಾರಿಗಳು ಬಳಸುತ್ತಿದ್ದ ಮಾರ್ಗಗಳು ಅತಿ ಹೆಚ್ಚು ಲಾಭಕರವಾಗಿದ್ದವು ಎಂಬ ತನ್ನ ಸ್ವಂತ ಆಚಾರ್ಯನ ಅಭಿಪ್ರಾಯಕ್ಕೆ ವಿರುದ್ಧವಾಗಿ, ಕೌಟಿಲ್ಯನು 'ಅರ್ಥಶಾಸ್ತ್ರ'ದಲ್ಲಿ ಹೀಗೆ ಹೇಳಿದ್ದಾನೆ: "ಉಣ್ಣೆಬಟ್ಟೆ, ಚರ್ಮ ಮತ್ತು ಕುದುರೆಗಳ ಕೊರತೆಯಿದ್ದರೂ, 'ದಕ್ಷಿಣಾಪಥ'ದಲ್ಲಿ ಶಂಖದ ಚಿಪ್ಪುಗಳು, ವಜ್ರಗಳು, ಎಲ್ಲ ಬಗೆಯ ಅಮೂಲ್ಯ ಮುತ್ತುರತ್ನಗಳು, ಚಿನ್ನ ಬೆಳ್ಳಿ ಮುಂತಾದವು ಅತ್ಯಂತ ಸಮೃದ್ಧವಾಗಿ ದೊರೆಯುತ್ತಿದ್ದವು. ಇಷ್ಟೇ ಅಲ್ಲ, 'ದಕ್ಷಿಣಾಪಥ'ವನ್ನು ಅಡ್ಡ ಹಾಯುವ ಪ್ರದೇಶಗಳಲ್ಲಿ ಅನೇಕ ವ್ಯಾಪಾರಿಗಳು ಗಣಿಗಳಿಂದ ಹಾಗೂ ಇತರ ಅಮೂಲ್ಯ ವ್ಯಾಪಾರದ ಸರಕುಗಳಿಂದ ಸಮೃದ್ಧವಾದ ಪ್ರದೇಶಗಳನ್ನು ಪದೇಪದೇ ಗುರುತಿಸುತ್ತಿದ್ದರು. ಆ ಪ್ರದೇಶಗಳಲ್ಲಿ ಸಂಚಾರ ನಡೆಸುವುದು ಕೂಡ ಸುಲಭವಾಗಿತ್ತು. ಅದು ಅಷ್ಟು ಉತ್ತಮವಾದ ಮಾರ್ಗವಾಗಿತ್ತು." ಕೌಟಿಲ್ಯನ ಆಚಾರ್ಯ ಮತ್ತು ಸ್ವತಃ ಕೌಟಿಲ್ಯ– ಇವರ ನಡುವಣ ಕಾಲದಲ್ಲಿ ವ್ಯಾಪಾರದ ಸ್ಥಿತಿಗತಿಗಳಲ್ಲಿ ತುಂಬ ಬದಲಾವಣೆಗಳು ಉಂಟಾಗಿದ್ದವು. ದಕ್ಷಿಣ ಭಾರತದಲ್ಲಿ ವಾಣಿಜ್ಯಕ್ಷೇತ್ರಗಳ ಬೆಳವಣಿಗೆಯುಂಟಾಗಲು ಮೌರ್ಯರ ಕಾಲದಲ್ಲಿ ನೆಲಸಿದ್ದ ಆಂತರಿಕ ಶಾಂತಿ ಸಹಾಯಕವಾದದ್ದೂ ಸ್ಪಷ್ಟವಾಗಿದೆ.

ಭಾರತೀಯ ಇತಿಹಾಸದ ವಿಕಾಸಕ್ಕೆ ಸಂಬಂಧಿಸಿದಂತೆ, ನಿರ್ಣಾಯಕವಾದ ಈ ಕಾಲದ ಒಂದು ವಿಶೇಷವಾದ ಘಟನೆಯೆಂದರೆ ಸಂಸ್ಕೃತ ಮತ್ತು ಪ್ರಾಕೃತಗಳ ನಡುವಣ ಹೋರಾಟ. ಇದು ಸಂಸ್ಕೃತದ ಮಹಾವಿಜಯದಲ್ಲಿ ಕೊನೆಗೊಂಡಿತು. ಚೆನ್ನಾಗಿ ತಿಳಿದಿರುವಂತೆ, ಬೌದ್ಧ ಮತ್ತು ಜೈನ– ಇವೆರಡೂ ಚಳವಳಿಗಳು ಮಗಧದ ಪ್ರಾಂತೀಯಭಾಷೆಯನ್ನೇ ಆಧರಿಸಿದ್ದವು. ಪ್ರಾಚೀನ ಕಾಲದಲ್ಲಿ ಬೌದ್ಧ ಧರ್ಮ ಹಾಗೂ ಜೈನ ಧರ್ಮಗಳ ಪವಿತ್ರ ಭಾಷೆಯೇ ಮಗಧದ ಜನರು ಮಾತನಾಡುವ ಪ್ರಾಕೃತ ಭಾಷೆಯಾಗಿತ್ತು. ಪ್ರಾಕೃತ ಭಾಷೆಯಲ್ಲಿ ಸಾಕಷ್ಟು ಗಮನಾರ್ಹವಾದ ಸಾಹಿತ್ಯದ ರಚನೆಯಾಗಿತ್ತು; ಅಲ್ಲದೆ, ರಾಜಕೀಯ ಹಾಗೂ ಆಡಳಿತ ಕ್ಷೇತ್ರಗಳಲ್ಲಿ ಕೂಡ ಅದು ಮುಖ್ಯವಾಗಿತ್ತೆಂದು ಅಶೋಕನ ಪ್ರಾಕೃತ ಶಾಸನಗಳಿಂದ ತಿಳಿದುಬರುತ್ತದೆ. ಕೆಲಕಾಲ ಪ್ರಾಕೃತ ಭಾಷೆಯು ಚಿಂತನೆ ಹಾಗೂ ಸಂಪರ್ಕಗಳ ಭಾಷೆಯಾಗಿ ಸಂಸ್ಕೃತದ ಸ್ಥಾನವನ್ನು ತೆಗೆದುಕೊಂಡಿರಬಹುದೆಂದು ಕಂಡುಬರುತ್ತದೆ. ಹಾಗೆ ಆಗಿದ್ದ ಪಕ್ಷದಲ್ಲಿ, ಭಾರತದ ಸಾಂಸ್ಕೃತಿಕ ಇತಿಹಾಸವೇ ಭಿನ್ನವಾಗುತ್ತಿತ್ತು. ಅಷ್ಟೇ ಅಲ್ಲದೆ, ಭಾರತೀಯರಿಗೆ ಒಗ್ಗೂಡಲು ಎಂದೂ ಸಾಧ್ಯವಾಗುತ್ತಿರಲಿಲ್ಲ. ಜನಪ್ರಿಯವಾದ ಎಲ್ಲ ಸ್ಥಳೀಯ ಭಾಷೆಗಳಂತೆಯೇ, ಪ್ರಾಕೃತ ಭಾಷೆ ಕೂಡ, ಪ್ರತಿಯೊಂದು ಕಾಲದಲ್ಲಿ ಹಾಗೂ ಪ್ರತಿಯೊಂದು ಹಂತದಲ್ಲಿ ಬದಲಾಗುತ್ತ ಹೋಗುವ ಅಸ್ಥಿರವಾದ ಮತ್ತು ಬೆಳವಣಿಗೆಯ

ಹಂತದಲ್ಲಿರುವ ಒಂದು ಭಾಷೆಯಾಗಿತ್ತು. ಆ ಭಾಷೆಯ ಸ್ಥಳೀಯ ಪ್ರಭೇದಗಳು ಗಮನಾರ್ಹವಾಗಿದ್ದವು. ಮಗಧದ ಸ್ಥಳೀಯ ಭಾಷೆಯು ದೋ–ಆಬ್ ಅಥವಾ ಮಹಾರಾಷ್ಟ್ರದ ಜನರು ಆಡುವ ಭಾಷೆಯಾಗಿರಲಿಲ್ಲ. ಒಂದು ಕಾಲದಲ್ಲಿ ಸಾಧ್ಯವಾಗಿದ್ದಂತೆ ಕಂಡುಬರುವ ಹಾಗೆ, ಸಂಸ್ಕೃತ ಭಾಷೆಯನ್ನು ಪಾಲಿ ಅಥವಾ ಮಗಧದ ಪ್ರಾಕೃತ ಭಾಷೆಯ ಸ್ಥಾನಪಲ್ಲಟಗೊಳಿಸಿದ್ದರೆ, ಆಗ ಭಾರತದ ಸಾಂಸ್ಕೃತಿಕ ಒಕ್ಕೂಟ ಎಂದೂ ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ, ಪ್ರಾಕೃತದ ಪ್ರತಿಯೊಂದು ಪ್ರಭೇದಗಳೂ, ಅನಂತರ ಸಂಭವಿಸಿದಂತೆ, ಪರಸ್ಪರ ಅಂತರ್ಸಂಪರ್ಕಕ್ಕೆ ಅವಕಾಶವಿಲ್ಲದಂತಹ, ಪ್ರತ್ಯೇಕ ಸ್ಥಳೀಯ ಭಾಷೆಗಳಾಗಿ ಅಭಿವೃದ್ಧಿ ಹೊಂದುತ್ತಿದ್ದವು. ನಾಲ್ಕನೆಯ ಶತಮಾನದಲ್ಲಿ ಭಾರತವನ್ನು ಬೆದರಿಸಿದ ಈ ಅಪಾಯದಿಂದ ಪಾರಾಗಲು, ಸಂಸ್ಕೃತವು ಅಂತಿಮ ವಿಜಯವನ್ನು ಪಡೆಯಲು ಸಮರ್ಥವಾದುದೇ ಕಾರಣವೆನ್ನಬಹುದು. ಕಠಿಣವಾದ ಹಾಗೂ ಬಹುಮಟ್ಟಿಗೆ ಪರಿಪೂರ್ಣವಾದ ವ್ಯಾಕರಣ ಪದ್ಧತಿಯ ಅನುಸಾರವಾಗಿ, ಸಂಸ್ಕೃತವು ಶಾಸ್ತ್ರೀಯ ಭಾಷೆಯಾಗಿ ರೂಪುಗೊಂಡಿತು. ಈ ಕಾಲದಲ್ಲಿ ಪಾಣಿನಿ ಹಾಗೂ ಅವರ ತರುವಾಯದವರು ಕ್ರಿ.ಪೂ. ಮೂರನೆಯ ಶತಮಾನದ ಮಧ್ಯಭಾಗದಲ್ಲಿ ಕಾತ್ಯಾಯನ ಮತ್ತು ಕ್ರಿ.ಪೂ. ಎರಡನೆಯ ಶತಮಾನದಲ್ಲಿ ಪತಂಜಲಿ– ಇವರ ನೆರವಿನಿಂದ ಸಂಸ್ಕೃತ ಭಾಷೆಯು ಪರಿಪೂರ್ಣವಾಗಿ ವಿಕಸನಗೊಂಡದ್ದು, ಭಾರತದ ವಿಕಾಸದ ಗತಿಯನ್ನೇ ನಿರ್ಧರಿಸಿದ ಭಾರತೀಯ ಇತಿಹಾಸದ ಅತ್ಯಂತ ನಿರ್ಣಾಯಕವೆನಿಸಿದ ಅಂಶವಾಗಿದೆ. ಪಾಣಿನಿಯು ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ ಜೀವಿಸಿದ್ದ ಎನ್ನಲಾಗಿದೆ. ಅವನು ಒಂದು ಶತಮಾನದ ಮೊದಲು ಜೀವಿಸಿದ್ದರೂ ಕೂಡ, 'ಅಷ್ಟಾಧ್ಯಾಯಿ'ಯನ್ನು ಜಾಗತಿಕವಾಗಿ ಅಂಗೀಕರಿಸಲಾದದ್ದು ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ ಅಥವಾ ಕನಿಷ್ಠ ಪಕ್ಷ ಕ್ರಿ.ಪೂ. ಮೂರನೆಯ ಶತಮಾನದ ಪೂರ್ವಾರ್ಧಭಾಗದಲ್ಲಿ. ಅನಂತರ ಕಾತ್ಯಾಯನನ ಪಂಥ ಉದಯಿಸಿತು ಹಾಗೂ ಅವನ 'ವಾರ್ತಿಕ'ಗಳು ರಚನೆಯಾದವು. ಕಾತ್ಯಾಯನನು ಈ ಕಾಲದಲ್ಲಿ ಮಾತ್ರ ಮುಖ್ಯ ಪ್ರಭಾವ ಬೀರಿದನೆಂದೂ ಕೆಲವರು ಅಭಿಪ್ರಾಯಪಡುತ್ತಾರೆ.

ಪಾಣಿನಿ ಮತ್ತು ಅವನ ಅನುಯಾಯಿಗಳು ಸಾಧಿಸಿದುದಾದರೂ ಏನು? ಆ ಕಾಲದ ಜನರು ಮಾತನಾಡುತ್ತಿದ್ದ ಭಾಷೆಯಿಂದಲೇ ಅವರು ಪರಿಶುದ್ಧವಾದ 'ಸಂಸ್ಕೃತ' ಭಾಷೆಯನ್ನು ವಿಕಸನಗೊಳಿಸಿದರು. ವ್ಯಾಕರಣ ಹಾಗೂ ಪದವಿನ್ಯಾಸಗಳಿಗೆ ಸಂಬಂಧಿಸಿರುವಷ್ಟರಮಟ್ಟಿಗೆ ಸಂಸ್ಕೃತ ಭಾಷೆಯನ್ನು ಕಟ್ಟುನಿಟ್ಟಾದ ನಿಯಮ ನಿಬಂಧನೆಗಳ ನಿರ್ಬಂಧಕ್ಕೆ ಒಳಪಡಿಸಿದರು. ಅಲ್ಲದೆ ಪ್ರಾಯೋಗಿಕವಾದ ಎಲ್ಲ ಅಗತ್ಯಗಳನ್ನು ಪೂರೈಸಬಲ್ಲ ರೀತಿಯಲ್ಲಿ ಸಂಸ್ಕೃತ ಪದಕೋಶವನ್ನು ಅತ್ಯಂತ ವಿಸ್ತಾರಗೊಳಿಸಿದರು. ಹೀಗೆ ಸಂಸ್ಕೃತ ಭಾಷೆ, ಬದಲಾವಣೆಗೆ ಅವಕಾಶವೇ ಇಲ್ಲದಂತಹ,

ಸುಸ್ಥಿರವಾದ ರೂಪವನ್ನು ಪಡೆಯಿತು. ಪಾಣಿನಿಯು ಪ್ರಾರಂಭಿಸಿದ ಕಾರ್ಯವನ್ನು ಅವನ ತರುವಾಯದದವರು ಮುಖ್ಯವಾಗಿ ಕಾತ್ಯಾಯನ ಮತ್ತು ಪತಂಜಲಿ ಮುಂದುವರಿಸಿದರು. ಅಭಿವ್ಯಕ್ತಿಗೊಳಿಸುವ ವಿಷಯಕ್ಕೆ ಬಂದಾಗ ದೊಡ್ಡ, ಸಂಸ್ಕೃತದ ವಿಸ್ತೃತ ಪದಕೋಶದ ಅರಿವುಂಟಾಗುತ್ತದೆ. ಅಪಾರ ವಿಸ್ತರಣೆಗೊಳ್ಳಲು ಸಮರ್ಥವಾದ ಹಾಗೂ ಎಂದೆಂದೂ ಬದಲಾವಣೆಗೊಳ್ಳದ ಭಾಷೆಯನ್ನಾಗಿ ಸಂಸ್ಕೃತವನ್ನು ವಿಕಸನಗೊಳಿಸಿದ್ದು, ಸಂಸ್ಕೃತ ವ್ಯಾಕರಣವನ್ನು ರೂಪಿಸಿದ್ದು ಪಾಣಿನಿ, ಕಾತ್ಯಾಯನ ಮತ್ತು ಪತಂಜಲಿಗಳೇ ಎಂಬುದರಲ್ಲಿ ಅನುಮಾನವಿಲ್ಲ. ಈ ಮಹಾ'ತ್ರಯ'ರು ಹಾಕಿದ ಬುನಾದಿಯಿಂದಾಗಿ ಭಾರತದ ಸಾಂಸ್ಕೃತಿಕ ಏಕತೆ ಸಾಧ್ಯವಾಯಿತು. ಸಂಸ್ಕೃತವೂ ಈ ಮಹನೀಯರ ಪರಿಶ್ರಮದಿಂದ ಅಭಿವೃದ್ಧಿಯನ್ನು ಹೊಂದಿತು. ಆದುದರಿಂದ ಈಗ ಕೂಡ ಈ ತ್ರಯರನ್ನು ಋಷಿಗಳಂತೆ ಗೌರವಿಸಲಾಗುತ್ತಿದೆ. ಯಾವುದೇ ಒಂದು ಕ್ಷೇತ್ರದ, ಅಥವಾ ಜಾನಾಂಗಿಕ ಪಂಗಡದ ಅಥವಾ ಧರ್ಮದ ಸೀಮೆಗೆ ಒಳಪಡದ ಆದರ್ಶ ಸಂವಹನ ಮಾಧ್ಯಮವಾಗಿ ಸಂಸ್ಕೃತ ಭಾಷೆ ಬೆಳವಣಿಗೆ ಹೊಂದಿತು. ಅಶೋಕನ ಶಾಸನಗಳಿಂದ ತಿಳಿದುಬರುವಂತೆ, ಮೌರ್ಯರ ಸಾಮ್ರಾಜ್ಯದ ಅಧಿಕೃತ ಭಾಷೆಯನ್ನಾಗಿ ಪ್ರಾಕೃತವನ್ನು ಬಳಸುವ ಸಮರ್ಥ ಸರ್ಕಾರದ ಕಾರ್ಯಚಟುವಟಿಕೆಗಳು ನಡೆಯುತ್ತಿದ್ದಾಗ್ಯೂ, ಸಂಸ್ಕೃತವು ಮುಖ್ಯ ಭಾಷೆಯಾದದ್ದು ಒಂದು ಮಹಾವಿಜಯವೆಂದೇ ಪರಿಗಣಿಸಬೇಕು. ಭಾರತದಾದ್ಯಂತ ಪ್ರಾಕೃತ ಭಾಷೆ ವಿಸ್ತರಿಸುವಂತೆ ಮಾಡುವ ಚಕ್ರವರ್ತಿಯ ಪ್ರಯತ್ನ ವಿಫಲವಾಯಿತು. ಆದರೆ ರಾಜನ ಆಸ್ಥಾನ, ಇಲಾಖಾಕಚೇರಿ ಮತ್ತು ಬೌದ್ಧ ಮಠಗಳನ್ನು ಬಿಟ್ಟುಳಿದಂತೆ, ಉಳಿದೆಡೆ ಪಾಣಿನಿಯ ಭಾಷಾಕ್ರಾಂತಿಯಿಂದ ಭಾರತದ ಸಾಂಸ್ಕೃತಿಕ ಹಿನ್ನೆಲೆಯೇ ಬದಲಾವಣೆ ಹೊಂದಿತು. ಶ್ರೀಮಂತಿಕೆ, ವೈವಿಧ್ಯ ಮತ್ತು ಏಕರೂಪತೆಗಳಿಗೆ ಸಂಬಂಧಿಸಿದಂತೆ ಸಂಸ್ಕೃತ ಭಾಷೆಯು ಪ್ರಾಕೃತ ಭಾಷೆಯ ಮೇಲೆ ವಿಜಯವನ್ನು ಸಾಧಿಸಿತು.

ಮುಂದೆ, ಚಿಂತನೆ ಹಾಗೂ ಅಭಿವ್ಯಕ್ತಿಗಳ ಅತ್ಯಂತ ಸೂಕ್ತ ಮಾಧ್ಯಮವಾಗಿ, ಸಾಂಪ್ರದಾಯಿಕ ಪಾಲಿ ಭಾಷೆಗಿಂತ ಸಂಸ್ಕೃತವೇ ಉತ್ತಮವೆಂದು ಬೌದ್ಧಧರ್ಮ ಕೂಡ ಭಾವಿಸಿತು. ಇದರಿಂದ ಸಂಸ್ಕೃತ ಭಾಷೆಯ ಉತ್ಕೃಷ್ಟತೆ ಸ್ಪಷ್ಟವಾಗುತ್ತದೆ. ಪ್ರಥಮ ಮಹಾಯಾನ ಪಂಥವು ಸಂಸ್ಕೃತದ ಒಂದು ರೂಪವಾದ 'ಅಪಭ್ರಂಶ'ವನ್ನು ಬಳಸಿತ್ತು. ಆದರೆ ಪಾಣಿನಿಯು ಕೂಡಲೇ ಭಾಷಾ ಮಾಧ್ಯಮದ ಮೇಲೆ ನಿಯಂತ್ರಣವನ್ನು ಸಾಧಿಸಿದ. ಅಶ್ವಘೋಷ ಮತ್ತಿತರರು ಪರಿಶುದ್ಧ ಶಾಸ್ತ್ರೀಯ ಭಾಷೆಯಾಗಿ ಸಂಸ್ಕೃತವನ್ನೇ ಬಳಸಿದರು. ಸಂಸ್ಕೃತ ಭಾಷೆಯನ್ನು ಬಳಸುವ ವಿಚಾರದಲ್ಲಿ ಜೈನಧರ್ಮವು ಸ್ವಲ್ಪ ಹೆಚ್ಚು ಸಮಯವನ್ನು ತೆಗೆದುಕೊಂಡಿತಾದರೂ ಅನಂತರ ಅದೂ ಸಂಸ್ಕೃತದ ಒತ್ತಡಕ್ಕೆ ತುತ್ತಾಯಿತು.

ಕ್ರಿ.ಪೂ. ನಾಲ್ಕು ಮತ್ತು ಮೂರನೆಯ ಶತಮಾನಗಳಲ್ಲಿ ಈ ಮಹಾ ಭಾಷಾ ಕ್ರಾಂತಿಯ ಸಂಭವಿಸಿದುದನ್ನು ಸುಲಭವಾಗಿ ಸಾಬೀತುಪಡಿಸಬಹುದು. ಕ್ರಿ.ಪೂ. ಎರಡನೆಯ ಶತಮಾನದ ಮಧ್ಯಭಾಗದಲ್ಲಿ ಜೀವಿಸಿದ್ದ ಪತಂಜಲಿಯು 'ಕಾವ್ಯ' ಶೈಲಿಯ ನಿದರ್ಶನಗಳನ್ನು ನೀಡಿ ವರರುಚಿ ಎಂಬ ಕವಿಯೊಬ್ಬನನ್ನು ಉಲ್ಲೇಖಿಸಿದ್ದಾನೆ. ಕ್ರಿ.ಶ. ಮೊದಲನೆಯ ಶತಮಾನದ ಬೌದ್ಧ ಕವಿಯಾದ ಅಶ್ವಘೋಷನು, ಬುದ್ಧನು, ಇಕ್ಷ್ವಾಕು ವಂಶದಿಂದ ಬಂದ ತನ್ನ ಮೂಲಭಾಷೆಯಲ್ಲಿ ಮಾತನಾಡುವಂತೆ ಮಾಡಿದ್ದಾನೆ. ಅಲ್ಲದೆ, ಆದರ್ಶಪುರುಷನಾಗಿ ಶ್ರೀರಾಮನ ಗುಣ ಸ್ವಭಾವಗಳನ್ನು ಉಲ್ಲೇಖಿಸುತ್ತ, ಗುಪ್ತರು ಮಹಾಕಾವ್ಯಗಳನ್ನು ಪರಿಷ್ಕರಿಸುವ ಮೊದಲೇ 'ರಾಮಾಯಣ'ದ ಕಥೆಯು ಹಿಂದೂಗಳಿಗೆ ಹೇಗೋ ಹಾಗೆಯೇ ಬೌದ್ಧರಿಗೂ ತಿಳಿದಿತ್ತು ಎಂದು ಹೇಳಿದ್ದಾನೆ. ವಾಸ್ತವವಾಗಿ ಹೇಳುವುದಾದರೆ, 'ಮಹಾಭಾರತ'ದ ಅಂತಿಮ ಸ್ವರೂಪದ ರಚನೆ ಕೊನೆಗೊಂಡದ್ದು ತುಂಬ ಅನಂತರವೇ ಆದರೂ, ಅದರ ಮುಖ್ಯಭಾಗಗಳನ್ನು ಕ್ರಿ.ಪೂ. ನಾಲ್ಕು ಹಾಗೂ ಮೂರನೆಯ ಶತಮಾನಗಳಲ್ಲಿಯೇ ಭಾರತದ ಆದ್ಯಂತ ಜನರು ಪಾರಾಯಣ ಮಾಡುತ್ತಿದ್ದರು ಎಂದು ಆ ಮಹಾಕಾವ್ಯದ ಭಾಷೆಯ ಸ್ವರೂಪದಿಂದಲೇ ಸ್ಪಷ್ಟವಾಗುತ್ತದೆ. ಗುಪ್ತರ ಆಡಳಿತಾವಧಿಯಲ್ಲಿ ನಡೆದ 'ಮಹಾಭಾರತ'ದ ಅಂತಿಮ ಪರಿಷ್ಕರಣಕ್ಕೂ ಅದರ ಭಾಷಾಸ್ವರೂಪಕ್ಕೂ ಯಾವುದೇ ಸಂಬಂಧವಿಲ್ಲ. ಆದರೆ 'ಮಹಾಭಾರತ'ದ ಪಠ್ಯದಲ್ಲಿ ಸೇರಿರುವ 'ಉಪಾಖ್ಯಾನ'ಗಳಲ್ಲಿ (ಕಥೆಗಳಲ್ಲಿ) ಗುಪ್ತರ ಕಾಲದ 'ಮಹಾಭಾರತ' ಸಂಪಾದಕರು ಮಾಡಿದ ಮಧ್ಯಪ್ರವೇಶವನ್ನು ದೃಷ್ಟಿಯಿಂದ ನೋಡಬಹುದು.

ಭಾರತೀಯ ಸಂಸ್ಕೃತಿಯ ಅಭಿವೃದ್ಧಿಯಲ್ಲಿ ನಿರ್ಣಾಯಕ ಅಂಶವೆನಿಸಿದ ಸಂಸ್ಕೃತವು ಸಂಪೂರ್ಣ ಗೆಲುವನ್ನು ಸಾಧಿಸಿತೆಂಬುದು ಮುಂದಿನ ಶತಮಾನಗಳಲ್ಲಿ ರಚಿತವಾದಂತಹ ಅಶ್ವಘೋಷನ ಬೌದ್ಧ ಕಾವ್ಯಗಳು, ರುದ್ರದಾಮನ್‌ನ ಪ್ರಕಟಣೆ (ಘೋಷಣೆ)ಗಳು ಹಾಗೂ ಬೌದ್ಧಧರ್ಮಕ್ಕೆ ಸಂಬಂಧಿಸಿದ ಪ್ರಾರಂಭದ ಅನೇಕ ಸಾಹಿತ್ಯ ಕೃತಿಗಳಿಂದ ಸಾಬೀತಾಗುತ್ತದೆ. ಮಹಾ ಬೌದ್ಧ ಕವಿಯಾದ ಅಶ್ವಘೋಷನು ಸಂಸ್ಕೃತದಲ್ಲಿ ಕೃತಿರಚನೆ ಮಾಡಿದ. ಸಂಸ್ಕೃತದಲ್ಲಷ್ಟೇ ಅಲ್ಲದೆ, ಪರಿಶುದ್ಧ ಪಾಣಿನೀಯ ಭಾಷೆಯಲ್ಲಿ ಕೂಡ ಅವನು ಬರೆದಿದ್ದಾನೆ. ಸಂಸ್ಕೃತ ಭಾಷೆಯನ್ನು ಕುರಿತಂತೆ, ಉತ್ಕೃಷ್ಟ ಗ್ರಂಥವನ್ನು ಬರೆದಿರುವ ಬರ್ರೊ ಅವರು ಹೇಳುವಂತೆ, ಪೂರ್ವದ ಬೌದ್ಧ ಲೇಖಕರಿಗೆ ಜಟಿಲತೆಯಿಂದ ಕೂಡಿದ ಪಾಣಿನೀಯ ಸಂಸ್ಕೃತದ ಮೇಲೆ ಪ್ರಭುತ್ವ ಸಾಧಿಸುವುದು ಕಷ್ಟಕರವಾಗಿತ್ತು. ಅವರ ದೃಷ್ಟಿಯಲ್ಲಿ 'ಬುದ್ಧಚರಿತ' ಮತ್ತು 'ಸೌಂದರನಂದ'– ಇವೆರಡೂ ಕೃತಿಗಳನ್ನು ಶಾಸ್ತ್ರೀಯ ಸಂಸ್ಕೃತ ಭಾಷೆಯಲ್ಲಿಯೇ ಬರೆಯಲಾಗಿದ್ದು, ಈ ಭಾಷೆಯ ಕೆಲಕಾಲದ ಅನಂತರ, ಕಾಳಿದಾಸನ ಕಾವ್ಯಗಳಲ್ಲಿ ಪರಿಪೂರ್ಣತೆಯನ್ನು ಕಂಡುಕೊಂಡಿತು.

ಈವರೆಗಿನ ಸಂಶೋಧನೆಗಳಿಂದ ತಿಳಿದುಬರುವಂತೆ ಸಂಸ್ಕೃತದ ಪ್ರಪ್ರಥಮ ಶಾಸನವೆನ್ನಲಾದ ರುದ್ರದಾಮನ್‌ನ ಶಾಸನವು ಅತ್ಯಂತ ಮುಖ್ಯವಾಗಿದೆ. ರುದ್ರದಾಮನ್ ಒಬ್ಬ ಶಕ ಸತ್ರಪ್ (ಕ್ಷೇತ್ರಪ) ಮತ್ತು ವಿದೇಶೀ ಸೇನಾನಾಯಕ. ಭಾರತಕ್ಕೆ ಬಂದು ನೆಲಸಿದ ಅವನು ಪಶ್ಚಿಮಭಾರತದಲ್ಲಿ ಶಾತವಾಹನರೊಂದಿಗೆ ಭೀಕರ ಯುದ್ಧವನ್ನು ನಡೆಸುತ್ತಿದ್ದ. ಆದರೂ ವಿದೇಶೀಮೂಲದ ಈ ಅರಸನು, ತನ್ನ ವಿಜಯಗಳನ್ನು ಘೋಷಿಸಲು ನಿರ್ಧರಿಸಿ, ಜನರಾಡುವ ಭಾಷೆಯಲ್ಲಿಯೇ ಶಾಸನಗಳನ್ನು ರಚಿಸಿದ ಅಶೋಕನಂತಲ್ಲದೆ, ಸಂಸ್ಕೃತದಲ್ಲಿ ಶಾಸನ ರಚನೆಯನ್ನು ಮಾಡಿದ. ಆ ಕಾಲದ ಉತ್ತರ ಭಾರತದ ಎಲ್ಲ ಚಕ್ರವರ್ತಿಗಳೂ ತಮ್ಮ 'ಪ್ರಶಸ್ತಿ'ಗಳ ಪ್ರಕಟಣೆಗಾಗಿ ಸಂಸ್ಕೃತ ಭಾಷೆಯನ್ನು ಮಾತ್ರ ಬಳಸಿದ್ದರೆಂಬ ವಾಸ್ತವ ಸಂಗತಿಯೆ ಸಾಕು, ಸಂಸ್ಕೃತದ ಪರಿಪೂರ್ಣ ವಿಜಯಕ್ಕೆ ಸಾಕ್ಷ್ಯ ನೀಡಲು ಇನ್ನಾವ ಅಂಶಗಳೂ ಬೇಕಾಗಿಲ್ಲ. ರುದ್ರದಾಮನ್‌ನ ಶಾಸನಕ್ಕೆ ಸಂಬಂಧಿಸಿದಂತೆ ಒತ್ತಿ ಹೇಳಬೇಕಾದ ಇನ್ನೊಂದು ವೈಶಿಷ್ಟ್ಯವಿದೆ. ಕಾಳಿದಾಸನ ಕೃತಿಗಳ ಪರಿಪೂರ್ಣತೆಯನ್ನು ಮೊದಲೇ ಪ್ರಕಟಪಡಿಸುವಂತಹ ಸಂಸ್ಕೃತ ಭಾಷೆಯ ಕಾವ್ಯಸ್ವರೂಪದ ಸಂಪೂರ್ಣ ಸೊಬಗು ಮತ್ತು ಲಾವಣ್ಯಗಳನ್ನು ರುದ್ರದಾಮನ್‌ನ ಶಾಸನಗಳಲ್ಲಿ ಗುರುತಿಸಬಹುದು. ವೈಯಾಕರಣಿಯಾಗಿದ್ದ ಪತಂಜಲಿಯ ಕೃತಿಯಲ್ಲಿ ಸಂಸ್ಕೃತದಲ್ಲಿ 'ಕಾವ್ಯ' ಶೈಲಿಯ ಬೆಳವಣಿಗೆಯನ್ನು ಸೂಚಿಸುವ ಉದ್ಧೃತ ಭಾಗಗಳಿವೆ. ಹಾಗೂ ಅವನು ವರರುಚಿಯೆಂಬ ಹೆಸರಿನ ಒಬ್ಬ ಕವಿಯನ್ನು ಉಲ್ಲೇಖಿಸಿದ್ದಾನೆ ಎಂಬುದನ್ನು ನಾವು ಈಗಾಗಲೇ ನೋಡಿದ್ದೇವೆ.

ರುದ್ರದಾಮನ್‌ನ ಶಾಸನಕ್ಕೆ ಸಂಬಂಧಪಟ್ಟಂತೆ ಉಲ್ಲೇಖಿಸಲೇಬೇಕಾದ ಇನ್ನೊಂದು ಅಂಶವಿದೆ. ಬೇರೆ ಬೇರೆ ಕಾಲಗಳಲ್ಲಿ ಭಾರತಕ್ಕೆ ಬಂದ ವಿದೇಶೀಯರ ಪಂಗಡಗಳು, ಸ್ಥಳೀಯ ಭಾಷೆಗಳಿಗಿಂತ ಹೆಚ್ಚಾಗಿ ಸಂಸ್ಕೃತವನ್ನೇ ಬಳಸಬಯಸಿದಂತೆ ತೋರುತ್ತದೆ. 'ಮಿಲಿಂದಪನ್ಹ'ವನ್ನು ಬಿಟ್ಟುಳಿದಂತೆ, ಭಾರತದ ವಾಯವ್ಯ ಸರಹದ್ದು ಪ್ರದೇಶಗಳಲ್ಲಿ ಅಭಿವೃದ್ಧಿಯನ್ನು ಸಾಧಿಸಿದ ಮಹಾಯಾನ ಪಂಥದ ಉತ್ಕೃಷ್ಟ ಹಾಗೂ ವಿಸ್ತೃತ ಸಾಹಿತ್ಯ ಕೃತಿಗಳೆಲ್ಲ ಸಂಸ್ಕೃತ ಭಾಷೆಯಲ್ಲಿಯೇ ರಚಿತವಾಗಿವೆ. ವಾಯವ್ಯ ಭಾರತದ ಗಡಿನಾಡುಗಳಲ್ಲಿ ಮತ್ತು ಭಾರತದ ಗಡಿಯ ಹೊರಗಿರುವ ಕೆಲವು ಪ್ರದೇಶಗಳಲ್ಲಿ ಕೂಡ, ಬೌದ್ಧಧರ್ಮದ ಜೊತೆಜೊತೆಗೆ ಸಂಸ್ಕೃತ ಭಾಷೆ ಹಾಗೂ ಸಾಹಿತ್ಯಗಳ ಪರಿಚಯವನ್ನು ಮಾಡಿಕೊಡಲಾಗಿದೆ. ಬೌದ್ಧಧರ್ಮದ ಮೇಲೆ ಮೊದಲು ಪ್ರಭಾವ ಬೀರಿದ್ದು ಮಹಾಯಾನ ಪಂಥದವರಲ್ಲ. ಮೂಲತಃ ಬೌದ್ಧಧರ್ಮವು ಹೀನಯಾನದ 'ಸವಾಸ್ತಿ' ಪಂಥವನ್ನೇ ಆಧರಿಸಿದೆ. ಆದರೂ ಈ ಪಂಥಕ್ಕೆ ಸೇರಿದ ಸಾಹಿತ್ಯಕೃತಿಗಳು ಕೂಡ, ಶಾಸ್ತ್ರೀಯ ಸಂಸ್ಕೃತ ಭಾಷೆಯಲ್ಲಿಯೇ ರಚಿತವಾಗಿವೆ. ಕುಮಾರ ಜೀವನು ಚೀನೀ ಭಾಷೆಗೆ ಅನುವಾದಿಸಲು ಆಯ್ದುಕೊಂಡ ಮಹಾಕೃತಿ ಕೂಡ ಶಾಸ್ತ್ರೀಯ ಸಂಸ್ಕೃತದಲ್ಲಿ ಬರೆಯಲಾದ ಗ್ರಂಥವೇ ಆಗಿತ್ತು.

ಇದಕ್ಕೂ ಮಿಗಿಲಾದ ಇನ್ನೊಂದು ಕುತೂಹಲಕರವಾದ ವಾಸ್ತವ ಸಂಗತಿಯನ್ನು ಇಲ್ಲಿ ಹೇಳಬೇಕು. ಇಂಡೋನೇಷ್ಯಾದಲ್ಲಿರುವ ಹಿಂದೂ ಸಾಮ್ರಾಜ್ಯಗಳಲ್ಲಿ ಚಂಪಾ, ಫ್ಯುನಾನ್ ಹಾಗೂ ಕಾಂಬೋಡಿಯ (ಕಂಬುಜ)ಗಳಲ್ಲಿ ಮತ್ತು ಮೆಕಾಂಗ್ ಕಣಿವೆ ಪ್ರದೇಶದ ಇತರ ರಾಷ್ಟ್ರಗಳಲ್ಲಿ ಹೀನಯಾನನೇ ಜನಪ್ರಿಯವಾಗಿದ್ದರೂ, ಅಧಿಕೃತ ಭಾಷೆಯನ್ನಾಗಿ ಬಳಸಿದ್ದು ಸಂಸ್ಕೃತವನ್ನೇ. ಜಾನಾದಲ್ಲಿರುವ ಹಿಂದೂ ಸಾಮ್ರಾಜ್ಯಗಳಿಗೆ ಸಂಬಂಧಪಟ್ಟ ದಫ್ತರಗಳನ್ನು ಬಿಟ್ಟುಳಿದಂತೆ, ಪ್ರೊ. ಸೀಡಸ್ ಅವರು ಪ್ರಕಟಿಸಿದ್ದ ಕಾಂಬೋಜ ಶಾಸನಗಳ ಅನೇಕ ಸಂಪುಟಗಳು ಭಾರತದ ಹೊರಗಿರುವ ಪ್ರದೇಶಗಳಿಗೆ ಸಂಬಂಧಿಸಿರುಷ್ಟರಮಟ್ಟಿಗೆ, ಭಾರತೀಯ ಸಂಸ್ಕೃತಿಯ ಏಕಮಾತ್ರ ವಾಹಕವಾಗಿ ಸಂಸ್ಕೃತವನ್ನು ಬಳಸುವ ರೂಢಿಯು ಸುಸ್ಥಾಪಿತವಾಗಿತ್ತು ಎಂಬುದನ್ನು ತೋರಿಸುತ್ತವೆ. ಮೌರ್ಯರ ರಾಜ್ಯಭಾರ ಕಾಲದಲ್ಲಿದ್ದ ಲೇಖಕರೂ ವೈಯಾಕರಣಿಗಳೂ ಮಹಾಕೃತಿಗಳನ್ನು ರಚಿಸಿದ್ದು, ಸಂಸ್ಕೃತದ ಈ ವಿಜಯಕ್ಕೆ ಕಾರಣವೆನ್ನುವುದರಲ್ಲಿ ಸಂದೇಹವಿಲ್ಲ.

ಗುಪ್ತರ ಕಾಲದಲ್ಲಿ ಸಂಸ್ಕೃತದ ಮಹತ್ತ್ವ ತಿಳಿದುಬಂತು ಹಾಗೂ ಅದು ಭಾರತೀಯ ಸಂಸ್ಕೃತಿಯ ಸಮರ್ಥವಾರ್ಹಕವಾಯಿತು ಎಂದೂ ವಾದಿಸಬಹುದು. ಕಾಳಿದಾಸನು ಎರಡನೆಯ ಚಂದ್ರಗುಪ್ತನ ಆಸ್ಥಾನದಲ್ಲಿದ್ದ ಎಂಬ ಈ ದೃಷ್ಟಿಕೋನವನ್ನು ನಾವು ಒಪ್ಪಿಕೊಂಡರೂ (ನನ್ನ ಅಭಿಪ್ರಾಯದಲ್ಲಿ ಇದಕ್ಕಿರುವ ಸಪ್ರಮಾಣವಾದ ಸಾಕ್ಷ್ಯಾಧಾರ ಅತ್ಯಂತ ಕಡಮೆ) ಸಂಸ್ಕೃತವು ಭಾರತದ ಶಾಸ್ತ್ರೀಯ ಭಾಷೆಯಾಗಿ ಉಗಮಿಸಿತು ಎಂಬ ಅಭಿಪ್ರಾಯವನ್ನು ಮಾತ್ರ ಒಪ್ಪಲು ಸಾಧ್ಯವಾಗದು. ಏಕೆಂದರೆ ಕ್ರಿ.ಶ. ಮೂರನೆಯ ಹಾಗೂ ನಾಲ್ಕನೆಯ ಶತಮಾನಗಳಲ್ಲಿ ಸಂಸ್ಕೃತವೇ ಆಲೋಚನೆ ಮತ್ತು ಅಭಿವ್ಯಕ್ತಿಗಳ ಅಪೂರ್ವ ವಾಹಕವಾಗಿತ್ತು. ಮಹಾಕಾವ್ಯಗಳು ಮಾತ್ರವಲ್ಲದೆ, ಕಾವ್ಯಗಳು ಹಾಗೂ ನಾಟಕಗಳು ಕೂಡ ಗುಪ್ತರ ಕಾಲಕ್ಕಿಂತ ತುಂಬ ಹಿಂದೆಯೇ ರಚಿತವಾಗಿದ್ದವು. 'ಮಹಾಭಾಷ್ಯ'ದಲ್ಲಿ 'ಕಂಸವಧ' ಕಾವ್ಯದ ಬಗ್ಗೆ ಹೇಳಲಾಗಿದೆ. ಮಹಾಭಾರತದ ಮುಂದಿನ ಪಾಠಾಂತರಗಳಲ್ಲಿ ಕಾಣಬರುವುದಿಲ್ಲವಾದರೂ, ಪಾಣಿನಿಯ ಕೃತಿಯಲ್ಲಿ ಅವನಿಗೆ ಆ ಕಾವ್ಯದ ಪರಿಚಯವಿದ್ದುದನ್ನು, ತೋರಿಸುವ ಅನೇಕ ಉಲ್ಲೇಖಗಳಿವೆ. 'ಅಷ್ಟಾಧ್ಯಾಯಿ'ಯಲ್ಲಿ ಪದೇಪದೇ ಬರುವ "ನಟಸೂತ್ರ" ಎಂಬ ಪದವನ್ನು, ಪಾಣಿನಿಯ ಕಾಲದಲ್ಲಿ ನಾಟಕಸಾಹಿತ್ಯ ಇದ್ದಿತೆನ್ನುವುದಕ್ಕೆ ನಿರ್ಣಾಯಕ ಸಾಕ್ಷ್ಯಾಧಾರವಾಗಿ ಪರಿಗಣಿಸಲು ಸಾಧ್ಯವಿಲ್ಲ. ಆದರೆ 'ಪತಂಜಲಿ'ಯ ಕೃತಿಯಲ್ಲಿ ಬರುವ ಪ್ರಸ್ತಾವಗಳಿಂದಷ್ಟೇ ಅಲ್ಲದೆ, 'ಸಾರಿಪುತ್ರ ಪ್ರಕರಣ' ಎಂಬ ಅಶ್ವಘೋಷನ ನಾಟಕ ಕೃತಿಯೊಂದು ಮಧ್ಯ ಏಷ್ಯಾದಲ್ಲಿ ವಾಸ್ತವವಾಗಿ ಸಿಕ್ಕಿದ್ದರಿಂದ ಕೂಡ, ಗುಪ್ತರ ಕಾಲಕ್ಕಿಂತ ತುಂಬ ಹಿಂದೆಯೇ, ನಾಟಕಗಳು ರಚನೆಯಾಗಿದ್ದವು ಎಂದು ನಿಸ್ಸಂದಿಗ್ಧವಾಗಿ ತಿಳಿದುಬರುತ್ತದೆ. ನಾಟಕ ಸಾಹಿತ್ಯದ ವರ್ಗೀಕರಣ

ಮಾಡುವಾಗ, ಅಧಿಕೃತವಾಗಿ ಬಳಸಲಾಗುವಂತಹ 'ಪ್ರಕರಣ'ವೆಂಬ ಪ್ರಕಾರದ ಹೆಸರೇ ಆ ಕಾಲದಲ್ಲಿ ನಾಟಕದ ವಿವಿಧ ರೂಪಗಳು ಇದ್ದುದನ್ನು ಸೂಚಿಸುತ್ತದೆ. ಅಲ್ಲದೆ, ಭಾಸನು ಗುಪ್ತರ ಕಾಲಕ್ಕಿಂತ ಹಿಂದೆ ಇದ್ದ ಏಕಮಾತ್ರ ಕವಿಯೇನೂ ಅಲ್ಲ. ಕಾಳಿದಾಸನು ಸೌಮಿಲ್ಲ ಮತ್ತು ಇತರರ ಪ್ರಸ್ತಾಪವನ್ನು ಮಾಡಿರುವುದರಿಂದ, ಅವನ ಕಾಲಕ್ಕಿಂತಲೂ ಹಿಂದೆ ಸಮೃದ್ಧ ನಾಟಕ ಸಾಹಿತ್ಯವಿತ್ತೆಂದು ತಿಳಿಯಬಹುದು. ಗುಪ್ತರ ಕಾಲದಲ್ಲಿ ಶಾಸ್ತ್ರೀಯ ಸಂಸ್ಕೃತದ ಭಾಷೆಯ ವಿಕಸನಗೊಂಡಿತ್ತು ಎಂಬುದು ನಿಸ್ಸಂದೇಹವಾಗಿ ಮುಖ್ಯವಾದ ಒಂದು ಅಂಶ. ದೀರ್ಘಕಾಲದ ಬೆಳವಣಿಗೆಯ ಅನಂತರ ಸಂಸ್ಕೃತವು ಪರಿಪೂರ್ಣತೆ ಹೊಂದಿದ್ದು, ಗುಪ್ತರ ಕಾಲದಲ್ಲಿಯೇ. ಹೀಗೆ ಆ ಕಾಲದಲ್ಲಿ ಸಂಸ್ಕೃತ ಭಾಷೆ ಮತ್ತು ಸಾಹಿತ್ಯಗಳ ಬೆಳವಣಿಗೆಗೆ ಕೇವಲ ಅಡಿಪಾಯ ನಿರ್ಮಾಣವಾದುದಷ್ಟೇ ಅಲ್ಲ. ಕ್ರಿಪೂ. ನಾಲ್ಕನೆಯ ಶತಮಾನದ ಮಧ್ಯಭಾಗ ಹಾಗೂ ಕ್ರಿ.ಪೂ. ಮೂರನೆಯ ಶತಮಾನಗಳ ನಡುವಣ ಅವಧಿಯಲ್ಲಿ ಸಂಸ್ಕೃತ ಭಾಷೆಗೆ ನಿರ್ದಿಷ್ಟವಾದ ಪರಿಪೂರ್ಣ ಸ್ವರೂಪವು ಲಭ್ಯವಾಯಿತು.

ಆಲೋಚನೆ ಹಾಗೂ ವ್ಯವಹಾರಗಳ ಏಕಮಾತ್ರ ರಾಷ್ಟ್ರೀಯ ಮಾಧ್ಯಮವಾಗಿ ಸಂಸ್ಕೃತವು ಉಗಮವಾದುದರ ಜೊತೆಜೊತೆಗೆ ಹಿಂದೂ ಧರ್ಮ ಮತ್ತು ಧರ್ಮಾಚರಣೆಗಳನ್ನು ಪುನರ್ರೂಪಿಸುವ ಕೆಲಸವೂ ನಡೆಯಿತು. ಯೂರೋಪಿನ ಒಂದು ಪಂಥದ ಇತಿಹಾಸಲೇಖಕರು ಹಾಗೂ ಅವರನ್ನು ಅನುಸರಿಸಿದ ಭಾರತದ ಪಠ್ಯಪುಸ್ತಕ ಲೇಖಕರು ಮೌರ್ಯರ ಕಾಲವನ್ನು, ಅದರಲ್ಲೂ ವಿಶೇಷವಾಗಿ ಅಶೋಕ ಮತ್ತು ಅವನ ಉತ್ತರಾಧಿಕಾರಿಗಳ ರಾಜ್ಯಭಾರದ ಅವಧಿಯನ್ನು, ಬೌದ್ಧಧರ್ಮದ ಯುಗವೆಂದು ವರ್ಣಿಸಿದ್ದಾರೆ. ವಾಸ್ತವವಾಗಿ ಹೇಳುವುದಾದರೆ, ಭಾರತೀಯ ಇತಿಹಾಸದಲ್ಲಿ ಅಂತಹ ಒಂದು ಯುಗವೇ ಇಲ್ಲ. ಅಶೋಕನೊಬ್ಬ ಬೌದ್ಧ; ಆದರೆ, ಅವನ ಶಾಸನಗಳು ಬ್ರಾಹ್ಮಣರನ್ನೂ ಶ್ರಮಣರನ್ನೂ ಉದ್ದೇಶಿಸಿವೆ. ಇದು ನಿಜ. ಅಲ್ಲದೆ ಅವನ ಉತ್ತರಾಧಿಕಾರಿಗಳು ಬೌದ್ಧ ಧರ್ಮದ ಪ್ರಚಾರವನ್ನು ಮಾಡಿದರು ಎಂಬ ಬಗ್ಗೆ ಯಾವ ಸಾಕ್ಷ್ಯಾಧಾರವೂ ಇಲ್ಲ.

ಚಕ್ರವರ್ತಿಗಳು ಬೌದ್ಧರೇ ಆಗಿದ್ದರೂ ಅವರ ಕಾಲವು, ಬ್ರಿಟಿಷರ ಆಡಳಿತಾವಧಿಯಲ್ಲಿ ನಡೆದ ಕ್ರೈಸ್ತಮತ ಪ್ರಚಾರಕ್ಕೆ ಹೋಲಿಸಿದಂತೆ ಹೇಳುವುದಾದರೆ, ಒಂದು ಯುಗವೆನಿಸಿರಲಿಲ್ಲ. ಬ್ರಿಟಿಷರು ಕ್ರೈಸ್ತರಾಗಿದ್ದರು. ಭಾರತಕ್ಕೆ ಬಂದು ಅಧಿಕಾರದ ಚುಕ್ಕಾಣಿ ಹಿಡಿದೊಡನೆ, ಬ್ರಿಟಿಷ್ ದೊರೆಗಳು ಕ್ರೈಸ್ತಮತ ಪ್ರಚಾರಕ್ಕೆ ತೊಡಗಿದರು; ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದೆಡೆಗಳಲ್ಲಿ ಚರ್ಚ್‌ಗಳನ್ನು ಸ್ಥಾಪಿಸಿದರು. ಆದರೆ ಇಂತಹ ಕಾರ್ಯಚಟುವಟಿಕೆಗಳನ್ನೇನೂ ಬೌದ್ಧ ಸಂನ್ಯಾಸಿಗಳು ಮೌರ್ಯರ ಕಾಲದಲ್ಲಿ ನಡೆಸಲಿಲ್ಲ. ವಾಸ್ತವವಾಗಿ ಹೇಳುವುದಾದರೆ, ಕ್ರಿ.ಪೂ. ೩೫೦ ಮತ್ತು ೨೫೦ರ ನಡುವಣ ಕಾಲವು ಹಿಂದೂ ಧಾರ್ಮಿಕ ಚಿಂತನೆಗಳು ಸಕ್ರಿಯ

ಸಂಘಟನೆಗೊಂಡ ಅವಧಿಯಾಗಿತ್ತು, ಅಷ್ಟೇ! ಹಿಂದೂ ಧರ್ಮಾಚರಣೆಯ ವೈಷ್ಣವ ಮತ್ತು ಶೈವ ಪೂಜಾ ರೂಪಗಳೆರಡೂ ರಾಷ್ಟ್ರೀಯ ಪ್ರಾಮುಖ್ಯವನ್ನು ಪಡೆಯಲು ಪ್ರಾರಂಭಿಸಿದ್ದವು. ಪಾಣಿನಿಯು ಭಕ್ತಿಯ ಉದ್ದೇಶವನ್ನು ಹೊಂದಿದವನೇ ವಸುದೇವ ಎಂಬ 'ವಾಸುದೇವಕ' ಹೆಸರಿನ ರೂಪವೊಂದನ್ನು ವಿಶದವಾಗಿ ನಿರೂಪಿಸಿದ್ದಾನೆ. ನಮ್ಮ ಕಾಲದ ಪ್ರಾರಂಭದಿಂದಲೂ ವಸುದೇವನ ಆರಾಧನೆ ಚಾಲ್ತಿಯಲ್ಲಿತ್ತು ಎಂದು ಇದರಿಂದ ತಿಳಿದುಬರುತ್ತದೆ. ಕ್ರಿ.ಪೂ. ಎರಡನೆಯ ಶತಮಾನದ ಮಧ್ಯಭಾಗದಲ್ಲಿ ಗ್ರೀಕ್ ರಾಯಭಾರಿಯಾದ ಹೆಲಿಯೊಡೊರಸ್ ನಿರ್ಮಿಸಿ, ವಸ್ತುದೇವನಿಗೆ ಸಮರ್ಪಿಸಿದ 'ಗರುಡಧ್ವಜ'ದಿಂದ, ಆಗ 'ಭಾಗವತಾಸ್' ಎಂಬ ಹೆಸರಿದ್ದ, ಕೃಷ್ಣಪಂಥವು ಎಷ್ಟೊಂದು ಜನಪ್ರಿಯವಾಗಿತ್ತು ಎಂದೂ ತಿಳಿದುಬರುತ್ತದೆ. ಕ್ರಿ.ಪೂ. ಒಂದನೆಯ ಶತಮಾನದ 'ಮಹಾನಿದೇಸ' ಮತ್ತು 'ಚುಲ್ಲಿನಿದ್ದೇಸ'ಗಳಲ್ಲಿ ಕಾಣಬರುವ ವಸುದೇವನ ಆರಾಧಕರ ಪ್ರಸ್ತಾಪಗಳೂ ಈ ಅಭಿಪ್ರಾಯವನ್ನು ಬೆಂಬಲಿಸುತ್ತವೆ. ಕೃಷ್ಣನು ಮಾತ್ರವಲ್ಲದೆ, ಸಂಕರ್ಷಣ (ಅಥವಾ ಬಲರಾಮ) ಪ್ರದ್ಯುಮ್ನ, ಅನಿರುದ್ಧ ಮತ್ತು ಸಾಂದರ್ಭಿಕವಾಗಿ ಸಾಂಬ– ಇವರನ್ನು ಪೂಜಾರ್ಹರನ್ನಾಗಿ ಪ್ರಸ್ತಾಪಿಸುವ ವೈಷ್ಣವರ 'ಚತುರ್ವ್ಯೂಹ'ವೂ ಆ ಕಾಲದ ಒಂದು ವೈಶಿಷ್ಟ್ಯವಾಗಿದೆ. ಹೀಗೆ ಈ ಪ್ರಾಚೀನ ಕಾಲದಲ್ಲಿ ವೈಷ್ಣವ ಸಿದ್ಧಾಂತವು ವಿಕಸನಗೊಳ್ಳುತ್ತಿತ್ತು ಹಾಗೂ ಕೃಷ್ಣನನ್ನು ಮಾತ್ರವೇ ಅಲ್ಲದೆ, ಇತರ 'ವೃಷ್ಣೀ' ನಾಯಕರನ್ನೂ ಪೂಜಿಸಲಾಗುತ್ತಿತ್ತು ಎಂದು ಇದರಿಂದ ಸ್ಪಷ್ಟವಾಗುತ್ತದೆ. ಈ ಕಾಲಾವಧಿಯು ವಿಶೇಷ ಪ್ರಾಮುಖ್ಯವನ್ನು ಪಡೆದಿದೆ. ಏಕೆಂದರೆ ಈ ಕಾಲದ ಕೊನೆಯಲ್ಲಿಯೇ ಹಿಂದೂ ಧರ್ಮದ ಭಾಗವತ ಸ್ವರೂಪವು ತನ್ನೆಲ್ಲ ಪರಿಪೂರ್ಣತೆಗಳೊಂದಿಗೆ ವಿಕಸನಗೊಂಡದ್ದು. ಶೈವ ಸಿದ್ಧಾಂತ ಕೂಡ ಕೆಲಮಟ್ಟಿಗೆ ಇದೇ ಪರಿಸ್ಥಿತಿಯಲ್ಲಿತ್ತು. 'ಶ್ವೇತಾಶ್ವತರ ಉಪನಿಷತ್ತಿ'ನಲ್ಲಿ ಶಿವನನ್ನು ಮಹಾದೇವನೆಂದು ಚಿತ್ರಿಸಲಾಗಿದೆ; 'ಕೇನೋಪನಿಷತ್'ನಲ್ಲಿ ಹೈಮವತಿಯ ಉಲ್ಲೇಖವಿದೆ.

ಸಿದ್ಧಾಂತಗಳು ಮತ್ತು ಪೂಜಾವಿಧಾನಗಲು ಅತಿ ಮುಖ್ಯವಾಗಿವೆ, ನಿಜ. ಆದರೆ, ನ್ಯಾಯಶಾಸ್ತ್ರ ಹಾಗೂ ಗೃಹಕೃತ್ಯಕ್ಕೆ ಸಂಬಂಧಿಸಿದ ಮತಕ್ರಿಯಾವಿಧಿಗಳು ಸಮಾಜದ ತಳಹದಿಯಾಗಿರಬೇಕು. ಹಿಂದೂ ಸಮಾಜದ ಆಧಾರವಾಗಿರುವುದು ಧಾರ್ಮಿಕ ನಂಬಿಕೆಗಳ ಸಂಗ್ರಹವಲ್ಲ; ಬದಲಾಗಿ ಸಮುದಾಯಕ್ಕೆ ಚೌಕಟ್ಟನ್ನು ನೀಡುವಂತಹ 'ಧರ್ಮಶಾಸ್ತ್ರ'ಗಳು ಹಾಗೂ 'ಗೃಹ್ಯಸೂತ್ರ'ಗಳೇ ಸಮಾಜಕ್ಕೆ ಮೂಲಾಧಾರ. ಇವು ಬಹುಮಟ್ಟಿಗೆ ಅಭಿವೃದ್ಧಿಗೊಂಡದ್ದು ಇದೇ ಕಾಲದಲ್ಲಿ. ಈ ಕಾಲಕ್ಕೆ ಸೇರಿದ 'ಧರ್ಮಶಾಸ್ತ್ರ'ಗಳಲ್ಲಿ 'ಮನುಸ್ಮೃತಿ'ಯೇ ಆಧಾರಗ್ರಂಥ. ನೂರಾರು ಮಂದಿ ನ್ಯಾಯಶಾಸ್ತ್ರ ಪಂಡಿತರೂ, ನಾರದರಿಂದ ಹಿಡಿದು ಆಧುನಿಕ ಕಾಲದವರೆಗಿನ 'ಧರ್ಮಶಾಸ್ತ್ರ' ಲೇಖಕರೂ ಈ ಪಠ್ಯಗ್ರಂಥದ ಮೇಲೆ ವ್ಯಾಖ್ಯಾನಗಳನ್ನು ಬರೆದಿದ್ದಾರೆ. 'ನಿಬಂಧ'ಗಳನ್ನೂ ನ್ಯಾಯಸಂಹಿತೆಗಳನ್ನೂ ರಚಿಸಿದ್ದಾರೆ. ಆದರೂ ಮನುವಿನ

ಹೆಸರು ಭಾರತದ ನ್ಯಾಯಶಾಸ್ತ್ರ ಚರಿತ್ರೆಯಲ್ಲಿಯೇ ಅತ್ಯುತ್ಕೃಷ್ಟವಾಗಿದ್ದು, ಈಗಲೂ ಅವನನ್ನು ಪೂಜ್ಯಭಾವದಿಂದ ನೋಡಲಾಗುತ್ತಿದೆ; ಗೌರವಿಸಲಾಗುತ್ತಿದೆ. ಯಾಜ್ಞವಲ್ಕ್ಯ ಕೂಡ ಶಿಸ್ತುಬದ್ಧ ಕೃತಿಕಾರ; ನಾರದ, ನಿಷ್ಕ ಮತ್ತಿತರ ನ್ಯಾಯಶಾಸ್ತ್ರ ಪಂಡಿತರು ಕೆಲವು ಕ್ಷೇತ್ರಗಳಲ್ಲಿ ಹೊಚ್ಚ ಹೊಸ ಹಾದಿಯನ್ನು ತುಳಿದಿದ್ದಾರೆ. ಆದರೂ ಐತಿಹಾಸಿಕವಾಗಿ ಅನೇಕ ಶತಮಾನಗಳ ಕಾಲ ಹಿಂದೂಗಳ ಸಾಮಾಜಿಕ ಸಂಘಟನೆಗೆ ಕಿಂಚಿತ್ತೂ ಹಾನಿಯುಂಟಾಗದಂತೆ, ನಿಯಮನಿಬಂಧನೆಗಳನ್ನು ರೂಪಿಸಿದ್ದು, ಮನುವೇ ಎಂಬುದನ್ನು ಯಾರೂ ಅಲ್ಲಗಲೆಯಲಾರರು. ಹೀಗೆ ಆ ಕಾಲದಲ್ಲಿ ಹಿಂದೂ ನ್ಯಾಯಶಾಸ್ತ್ರದ ತಳಹದಿಯನ್ನು ಹಾಕಲಾಯಿತು.

'ಗೃಹ್ಯಸೂತ್ರ'ಗಳು ಮತ್ತು ಗೃಹಕೃತ್ಯಕ್ಕೆ ಸಂಬಂಧಿಸಿದ ನಿಯಮನಿಬಂಧನೆಗಳಿಂದಾಗಿ ಹಿಂದೂಗಳೆಲ್ಲ ಒಂದೇ ಸಮುದಾಯವಾಗಿ ಒಗ್ಗೂಡಿದ್ದೇನೂ ಕಡಿಮೆ ಪ್ರಾಮುಖ್ಯದ ಸಂಗತಿಯಲ್ಲ. ಹೆಸರೇ ಸೂಚಿಸುವಂತೆ ಗೃಹ್ಯಸೂತ್ರಗಳು ಮನೆಯ ಯಜಮಾನನು ಆಚರಿಸಬೇಕಾದ ಮತಕ್ರಿಯಾವಿಧಿಗಳನ್ನು ಅಧಿಕೃತವಾಗಿ ನಿರೂಪಿಸುತ್ತವೆ. ಪ್ರೊ. ಮೆಹಂದಳೆ ಅವರು ಹೇಳಿದಂತೆ, "ಹೆಚ್ಚಿನ 'ಗೃಹ್ಯಸೂತ್ರ'ಗಳು ವಿವಾಹ ಸಮಾರಂಭದಿಂದ ಪ್ರಾರಂಭವಾಗಿ ಅನಂತರ ಮುಂದುವರಿಯುತ್ತ, ಗರ್ಭಧಾರಣೆಯ ಕಾಲದಲ್ಲಿ ಆಚರಿಸಬೇಕಾದ ವಿಧಿವಿಹಿತ ಕರ್ಮಗಳೂ ಸೇರಿದಂತೆ, ಶಿಶುಜನನಕ್ಕೆ ಸಂಬಂಧಪಟ್ಟ ಎಲ್ಲ ಮತಕ್ರಿಯಾವಿಧಿಗಳನ್ನು ವಿವರಿಸುತ್ತವೆ. 'ಅನ್ನಪ್ರಾಶನ', 'ಚೌಲಕರ್ಮ', 'ಉಪನಯನ' ಮುಂತಾದವುಗಳಂತಹ ಇತರ ಎಲ್ಲ ಸಮಾರಂಭಗಳ ಬಗ್ಗೆ, ಅವು ಸಹಜವಾಗಿ ಸಂಭವಿಸುವ ಕಾಲಾನುಕ್ರಮಣಿಕೆಯ ಅನುಸಾರ, ಒಂದರ ಅನಂತರ ಇನ್ನೊಂದರಂತೆ, ಕ್ರಮಬದ್ಧವಾಗಿ ವಿವರಿಸಿ, ಮರಣಕ್ಕೆ ಸಂಬಂಧಿಸಿದ ಅಂತ್ಯಕ್ರಿಯಾ ವಿಧಿಯನ್ನು ಕೊನೆಯಲ್ಲಿ ನಿರೂಪಿಸುತ್ತವೆ." ಹೀಗೆ ಶಿಶುವಿನ ಪ್ರಪ್ರಥಮ ಗರ್ಭಧಾರಣೆಯಿಂದ ಹಿಡಿದು ಅಂತ್ಯಸಂಸ್ಕಾರದವರೆಗಿನ ಮತಕ್ರಿಯಾವಿಧಿಗಳನ್ನು ಕುರಿತ ವಿಸ್ತೃತ ಅರ್ಥವ್ಯಾಖ್ಯಾನವನ್ನು ನೀಡುವ 'ಗೃಹ್ಯಸೂತ್ರ'ಗಳು, ಹಿಂದೂ ಸಮಾಜದ ಸುಭದ್ರ ಅಡಿಪಾಯವನ್ನು ನಿರ್ಮಿಸಿವೆ. ಹೀಗೆ ಇವು ಮನೆಯ ಯಜಮಾನನ ಜೀವನವನ್ನು ರೂಪಿಸುವ, ಪ್ರತಿಯೊಂದು ಸೂಕ್ಷ್ಮ ಅಂಶಗಳನ್ನು ವ್ಯಾಪಿಸಿವೆ. ವಾಸ್ತವವಾಗಿ, 'ಗೃಹ್ಯಸೂತ್ರ'ಗಳಲ್ಲಿ ಗೊತ್ತುಪಡಿಸಲಾಗಿರುವ ಸಮಾರಂಭಗಳನ್ನೆಲ್ಲ ಸ್ಥೂಲವಾಗಿ ನಡೆಸಿಕೊಂಡು ಬರುವವನನ್ನು ಹಿಂದೂ ಎಂದೂ ಅಂಗೀಕರಿಸಬಹುದು. ಭಾರತದ ಆದ್ಯಂತ ಈಗಲೂ ಅನುಸರಿಸುತ್ತಿರುವ ಈ 'ಗೃಹಸೂತ್ರ'ಗಳ ಅಧಿಕೃತತೆಯ ಪರಿಣಾಮವಾಗಿಯೇ ಒಂದು ಸಮುದಾಯವಾಗಿ ಹಿಂದೂಗಳ ಐಕಮತ್ಯವು ಸಾಧ್ಯವಾಗಿದೆ.

ಪ್ರಧಾನ ಗೃಹ್ಯಸೂತ್ರಗಳು (ಆಶ್ವಲಾಯನ, ಆಪಸ್ತಂಭ ಇತ್ಯಾದಿ) ಕ್ರಿ.ಪೂ. ೭೦೦ ಮತ್ತು ೩೦೦ರ ನಡುವಣ ಅವಧಿಯಲ್ಲಿ ರಚಿತವಾದವು ಎಂದು

ಭಾವಿಸಲಾಗಿದೆ. ಇವುಗಳ ರಚನೆ ಈ ಕಾಲದಲ್ಲಾಗಿದ್ದರೂ, ನಂದರು ಮತ್ತು ಮೌರ್ಯರ ಆಳ್ವಿಕೆಯ ಕಾಲದಲ್ಲಿ ಉತ್ತರ ಭಾರತದಲ್ಲಿ ಇವುಗಳಿಗೆ ಸಾರ್ವತ್ರಿಕ ಅಧಿಕೃತತೆ ಲಭ್ಯವಾಗಿ, ಮುಂದೆ ಕ್ರಮೇಣ ಇದು ದಕ್ಷಿಣ ಭಾರತಕ್ಕೂ ವಿಸ್ತರಿಸಿತು ಎಂಬುದು ಸ್ಪಷ್ಟ. 'ಧರ್ಮಶಾಸ್ತ್ರ' ಹಾಗೂ 'ಗೃಹ್ಯಸೂತ್ರ'ಗಳೆರಡರ ಮೂಲಕ ಹಿಂದೂಗಳು ಕ್ರಿ.ಪೂ. ೩೫೦ ಮತ್ತು ೨೫೦ರ ನಡುವಣ ಈ ಕಾಲಾವಧಿಯಲ್ಲಿ ಒಂದು ಸಮುದಾಯವಾಗಿ ಒಗ್ಗಟ್ಟಾದರು.

ಹೀಗೆ ಈ ಕಾಲದಲ್ಲಿ ತಳಹದಿಯನ್ನು ಮಾತ್ರ ಹಾಕಲಾಯಿತು; ಮುಂದಿನ ಶತಮಾನಗಳಲ್ಲಿ ನಡೆದ ಕಾರ್ಯಚಟುವಟಿಕೆಗಳಿಂದ ಕೆಲಸವು ಪೂರ್ಣಗೊಂಡಿತು ಎಂಬುದರಲ್ಲಿ ಸಂದೇಹವಿಲ್ಲ. ಉತ್ತರಭಾರತದ ಸಂಸ್ಕೃತಿಯು ವ್ಯವಸ್ಥಿತವಾಗಿ ದಕ್ಷಿಣ ಭಾರತದೊಳಗೂ ನುಗ್ಗಿದುದರ ಪರಿಣಾಮವಾಗಿ ಪ್ರಾರಂಭವಾದ ಭಾರತದ ಸಾಂಸ್ಕೃತಿಕ ಐಕಮತ್ಯವು (ಕ್ರಿ.ಪೂ. ೨೩೦ರಿಂದ ಆಳ್ವಿಕೆ ನಡೆಸತೊಡಗಿದೆ) ಶಾತವಾಹನರ ಅವಧಿಯಲ್ಲಿ ಇನ್ನಷ್ಟು ವೇಗವನ್ನು ಪಡೆಯಿತು. ಶಾತವಾಹನರು ಪ್ರಾಕೃತ ಭಾಷೆಯ ಬೆಂಬಲಿಗರಾಗಿ ರಾಜ್ಯಭಾರ ಮಾಡಲು ತೊಡಗಿದ್ದರೂ, ಕೆಲಕಾಲಾನಂತರ, ಅವರು ಸಂಸ್ಕೃತ ಸಂಸ್ಕೃತಿಯ ಸಮರ್ಥಕರಾಗಿ ದಕ್ಷಿಣ ಭಾರತದಲ್ಲಿ ಸಂಸ್ಕೃತದ ಪ್ರಚಾರ ನಡೆಸಿದರು. ಇದೇ ರೀತಿಯಲ್ಲಿ ಶುಂಗರು, ಭರಶಿವರು ಹಾಗೂ ಮೌರ್ಯರ ಉತ್ತರಾಧಿಕಾರಿಗಳಾಗಿ ಉತ್ತರ ಭಾರತದ ಆಳ್ವಿಕೆ ನಡೆಸಿದ ಇತರ ರಾಜಮನೆತನಗಳವರು ಹಿಂದೂಗಳನ್ನು ಒಗ್ಗೂಡಿಸುವ ಕೆಲಸವನ್ನು ಮುಂದುವರಿಸಿದರು. ಹೀಗೆ ಮೌರ್ಯರ ಕಾಲದಲ್ಲಿ ಪ್ರಾರಂಭವಾದ ಕೆಲಸವು, ಸಂಪ್ರದಾಯಬಾಹಿರ ಪಂಥಗಳು ಅಧಿಕಾರ ವಹಿಸಿಕೊಂಡಾಗ ಕೂಡ, ಯಾವುದೇ ತೊಂದರೆಯಿಲ್ಲದೆ ಮುಂದುವರಿಯಿತು. ಕ್ರಿ.ಪೂ. ಎರಡನೆಯ ಶತಮಾನದ ಪ್ರಾರಂಭದ ಇಪ್ಪತ್ತೈದು ವರ್ಷಗಳಲ್ಲಿ ಪುಷ್ಯಮಿತ್ರನು ಅಶ್ವಮೇಧಯಾಗವನ್ನು ನಡೆಸಿದಾಗ, ಹಿಂದೂಗಳ ಪುನಃ ಸಂಘಟನೆಗೆ ರಾಜಾಶ್ರಯ ಹಾಗೂ ಅಧಿಕೃತತೆಗಳು ಲಭಿಸಿದವು. ಶಾಸನಗಳಲ್ಲಿ ತಮ್ಮನ್ನು ತಾವೇ 'ದಶಾಶ್ವಮೇಧ ಅವಭೃತ ಸ್ನಾನಾನಾಮ್ ಭರಶಿವಾನಾಂ' ಎಂದು ವರ್ಣಿಸಿಕೊಂಡ ಭರಶಿವರಿಂದ ಮತ್ತೆ ಈ ಪುನಃ ಸಂಘಟನಾ ಕಾರ್ಯವು ಮುಂದುವರಿಯಿತು. ಮುಂದೆ ಗುಪ್ತರ ಕಾಲದಲ್ಲಿ ಈ ಮಹಾ ಚಳವಳಿಯು ತುತ್ತತುದಿಯನ್ನು ತಲಪಿತು. ಇದೇರೀತಿ ಭಾಷೆ ಹಾಗೂ ಸಾಹಿತ್ಯಗಳ ಸಂದರ್ಭದಲ್ಲಿ ಕೂಡ, ಇತರ ದೇಶೀಯ ಭಾಷೆಗಳ ಮೇಲೆ ಸಂಸ್ಕೃತವು ನಿರ್ಣಾಯಕ ವಿಜಯವನ್ನು ಸಾಧಿಸಿತು. ನಮ್ಮ ಕಾಲದಲ್ಲಿ ಸಾಧಿಸಲಾಗಿರುವ ಉನ್ನತ ಚಿಂತನೆಯ ಸಮರ್ಥ ವಾಹಕವಾಗಿ, ಸಾಂಸ್ಕೃತಿಕ ಭಾಷೆಯಾಗಿ ಸಂಸ್ಕೃತವು ರೂಪುಗೊಂಡಿತು. ಪ್ರಮಾಣಗ್ರಂಥಗಳೆಂದು ಅಂಗೀಕರಿಸಬಹುದಾದ ಬೌದ್ಧ ಹಾಗೂ ಜೈನಕೃತಿಗಳನ್ನು ಸಂಸ್ಕೃತ ಭಾಷೆಯಲ್ಲಿಯೇ ರಚಿಸುವುದು ಮುಂದೆ ಸಾಧ್ಯವಾಯಿತು. ನಿಜವಾಗಿ ಇದೊಂದು ಮಹಾಸಾಧನೆಯೇ. ಕಾತ್ಯಾಯನ ಮತ್ತು ಪರಂಜಲಿ ಇವರ

ನಡುವಣ ಕಾಲದಲ್ಲಿ ಸುಭದ್ರ ಬುನಾದಿಯನ್ನು ಹಾಕಿದ್ದರಿಂದಾಗಿ, ಗುಪ್ತರ ಆಳ್ವಿಕೆಯ ಸಮಯದಲ್ಲಿ ಮಹಾಕಾವ್ಯಗಳು ಹಾಗೂ ಪುರಾಣಗಳ ಪರಿಷ್ಕರಣ ಮತ್ತು ಸಾಹಿತ್ಯದ ಪುನರುಜ್ಜೀವನಗಳು ಸಾಧ್ಯವಾದವು.

ಈ ಅರ್ಥದಲ್ಲಿ ದಕ್ಷಿಣದ ರಾಜ್ಯಗಳು ಮತ್ತು ಕಂಚಿಯ ಪಲ್ಲವ ಸಾಮ್ರಾಜ್ಯ– ಇವು ಕೂಡ ಶಾತವಾಹನರ ಉತ್ತರಾಧಿಕಾರಿ ರಾಜ್ಯಗಳಾಗಿರುವಂತೆ ಮೌರ್ಯರ ಅವನತಿ ಹಾಗೂ ಹರ್ಷನ ಮರಣ – ಇವುಗಳ ನಡುವಣ ಕಾಲದಲ್ಲಿ ಉತ್ತರಭಾರತದಲ್ಲಿ ಉದಯಿಸಿದ ಮತ್ತು ಉರುಳಿಹೋದ ಸಾಮ್ರಾಜ್ಯಗಳು ಹಾಗೂ ಚಕ್ರಾಧಿಪತ್ಯಗಳೆಲ್ಲ ಮೌರ್ಯರ ಉತ್ತರಾಧಿಕಾರಿ ರಾಜ್ಯಗಳೇ ಆಗಿವೆ ಎನ್ನಬಹುದು.

ಕೊನೆಯದಾಗಿ, ಈ ಕಾಲದಲ್ಲಿ ಪ್ರಾರಂಭವಾದ ಭಾರತದ ಕಲಾ ಸಂಪ್ರದಾಯಗಳ ಬಗ್ಗೆ ಕೂಡ ಇಲ್ಲಿ ಪ್ರಸ್ತಾಪಿಸಬೇಕು. ಗಂಗಾನದೀ ಕಣಿವೆ ಪ್ರದೇಶದ ಪ್ರಾರಂಭಕಾಲದ ಚಕ್ರವರ್ತಿಗಳು ಕಲೆ, ಸಂಗೀತ ಮತ್ತು ವಾಸ್ತುಶಿಲ್ಪ ಸಂಪ್ರದಾಯಗಳನ್ನು ಅಭಿವೃದ್ಧಿಗೊಳಿಸಿದರೆಂಬುದರಲ್ಲಿ ಸಂಶಯವಿಲ್ಲ. ಉದಾಹರಣೆಗೆ, ಬುದ್ಧನ ಕಾಲಾವಧಿಯಲಿ ಜೀವಿಸಿದ್ದ ಕೌಶಾಂಬಿಯ ಉದಯನನು 'ವೀಣಾ'ವಾದನದಲ್ಲಿ ನಿಪುಣನಾಗಿದ್ದ; ಬೌದ್ಧ ಕೃತಿಗಳಲ್ಲಿ ಉದ್ಯಾನಗಳು, ಅರಮನೆಗಳು ಹಾಗೂ 'ಚೈತ್ಯ'ಗಳಿಗೆ ಸಂಬಂಧಪಟ್ಟ ಅನೇಕ ಪ್ರಸ್ತಾಪಗಳಿವೆ. ಆದರೆ ಈ ಸಂಪ್ರದಾಯಗಳು ನಮ್ಮ ಕಾಲದವರೆಗೂ ಉಳಿದುಬಾರದಿರುವುದು ಮಾತ್ರ ದುರದೃಷ್ಟಕರ. ಈವರೆಗೆ ಮುಂದುವರಿದುಕೊಂಡು ಬಂದಿತೆಂದು ಗುರುತಿಸಬಹುದಾದ ವಾಸ್ತುಶಿಲ್ಪ ಸಂಪ್ರದಾಯದ ಪ್ರಾಚೀನ ಸ್ಮಾರಕಗಳು ಮೌರ್ಯರ ಕಾಲಾವಧಿಗೇ ಸೇರಿವೆ. ಶಿಲ್ಪಶಾಸ್ತ್ರಕ್ಕೆ ಸಂಬಂಧಿಸಿದಂತೆ ಕೂಡ ಇದೇ ಮಾತು ಅನ್ವಯಿಸುತ್ತದೆ. ಅಶೋಕನ ಸಿಂಹಗಳು, ಸಾಂಚಿಯಲ್ಲಿರುವ ಶಿಲ್ಪಾಲಂಕೃತ 'ಕಟಾಂಜನ'ಗಳು ಮತ್ತು ಮೌರ್ಯರ ಕಲೆಯ ಇತರ ಅವಶೇಷಗಳು ಭಾರತೀಯ ಕಲಾ ಸಂಪ್ರದಾಯದ ನಿಜವಾದ ಮೂಲಕೃತಿಗಳಾಗಿವೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಕ್ರಿ.ಪೂ. ೩೫೦ ಮತ್ತು ೨೫೦ರ ನಡುವಣ ಕಾಲದಲ್ಲಿ, ತಮ್ಮ ಸಾಮ್ರಾಜ್ಯವನ್ನು ದಕ್ಷಿಣದ ಮೈಸೂರಿನವರೆಗೂ ವಿಸ್ತರಿಸಿದ ನಂದರು ಹಾಗೂ ಮೌರ್ಯರ ಮೂಲಕ, ಭಾರತದಲ್ಲಿ ಐಕಮತ್ಯದ ಪರಿಕಲ್ಪನೆಯು ಉಗಮಿಸಿತು ಎನ್ನಬಹುದು. ಬೇರೆ ಬೇರೆ ಕಾಲಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳು ಉಂಟಾದರೂ, ಅವರು ಪ್ರಾರಂಭಿಸಿದ ಆಡಳಿತ ವ್ಯವಸ್ಥೆಯು ಇಂದಿನವರೆಗೂ ಉಳಿದುಬಂದಿದೆ. ಸಾಮಾನ್ಯವಾದ ಧಾರ್ಮಿಕ ನಂಬಿಕೆಗಳು, ನ್ಯಾಯಶಾಸ್ತ್ರದ ವಿಸ್ತೃತ ಪದ್ಧತಿ ಹಾಗೂ 'ಗೃಹ್ಯಸೂತ್ರ'ಗಳಲ್ಲಿ ನಿರೂಪಿಸಲಾದ ಮತಕ್ರಿಯಾವಿಧಿಗಳನ್ನು ಆಧರಿಸಿದ ಒಂದು ಸಮುದಾಯವಾಗಿ ಭಾರತೀಯರು ಒಗ್ಗೂಡಿದ್ದು ಇದೇ

ಕಾಲದಲ್ಲಿ. ಈ ಪದ್ಧತಿಗಳನ್ನು ಭಾರತದ ಆದ್ಯಂತ ಈಗಲೂ ಅನುಸರಿಸಲಾಗುತ್ತಿದೆ. ಸಂಸ್ಕೃತ ಭಾಷೆಯ ಉದಯವು ಭಾರತದ ಭವಿಷ್ಯದ ಸ್ವರೂಪವನ್ನೇ ನಿರ್ಣಯಿಸುವ ಮುಖ್ಯ ಅಂಶವೆನಿಸಿತು. ಸಂಸ್ಕೃತಿ, ಚಿಂತನೆ ಹಾಗೂ ತತ್ತ್ವಶಾಸ್ತ್ರಗಳ ಏಕೈಕ ವಾಹಕವಾಗಿ ಸಂಸ್ಕೃತವು ಕಾಲಕ್ರಮೇಣ ಭಾರತದ ಆದ್ಯಂತ ವಿಸ್ತರಿಸಿತು. ಆಲೋಚನೆ ಮತ್ತು ಅಭಿವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ಭಾರತೀಯ ಸಂಸ್ಕೃತಿಗೆ ಏಕರೂಪತೆಯನ್ನು ನೀಡಿತು. ಹೀಗೆ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ, ಕ್ರಿ.ಪೂ. ೩೫೦ ಮತ್ತು ೨೫೦ರ ನಡುವಣ ಕಾಲವು, ಭಾರತೀಯ ಇತಿಹಾಸದ ಪ್ರಪ್ರಥಮ ನಿರ್ಣಾಯಕ ಕಾಲಾವಧಿಯೆನಿಸಿದ್ದು, ಈ ಕಾಲದಲ್ಲಿಯೇ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಕಾರ್ಯತಃ ಅಭಿವೃದ್ಧಿ ಹೊಂದಲು ಸಾಧ್ಯವಾಗುವಂತಹ ಭದ್ರಬುನಾದಿಯ ನಿರ್ಮಾಣವಾಯಿತು. ಮೇಲುಗೈ ಸಾಧಿಸಿದ ಕೆಲವು ಅಲ್ಪಸಂಖ್ಯಾತ ಪಂಗಡದ ಜನರ ವಿಸ್ತೃತ ಕಾರ್ಯ ಚಟುವಟಿಕೆಗಳ ಮೂಲಕ ಈ ಸಂಸ್ಕೃತಿ ಮತ್ತು ಆದರ್ಶಗಳು ನಮಗೆ ಲಭ್ಯವಾದವು. ಆಧುನಿಕ ಪ್ರಜಾಸತ್ತಾತ್ಮಕ ಯುಗದವರೆಗೂ ಇವು ಉಳಿದುಬರಲು ಕೆಲವು ಪ್ರಮುಖ ಅಲ್ಪಸಂಖ್ಯಾತ ಪಂಗಡಗಳವರೇ ಕಾರಣ. ಉದಾಹರಣೆಗೆ ದಕ್ಷಿಣ ಭಾರತದಲ್ಲಿ 'ಗೃಹ್ಯಸೂತ್ರ'ಗಳಲ್ಲಿ ಹೇಳಲಾದ ಮತಕ್ರಿಯಾವಿಧಿಗಳು ವ್ಯಾಪಕವಾಗಿ ವಿಸ್ತರಿಸಿದ್ದು, ಬ್ರಾಹ್ಮಣರ ಒಂದು ಸಣ್ಣ ಗುಂಪಿನ ಮೂಲಕ. ಇದರಲ್ಲಿ ಸಂಶಯವೇ ಇಲ್ಲ. ಆದರೆ ಒಂದಲ್ಲ ಒಂದು ಸ್ವರೂಪದಲ್ಲಿ, ಈ ಆಚರಣೆಗಳು ಮತ್ತು ಸಮಾರಂಭಗಳು, ಇತರ ಅನೇಕ ಜಾತಿಗಳಿಗೂ ವಿಸ್ತರಿಸಿ, ಹಿಂದೂಗಳ ಸಾಮಾನ್ಯ ಸಂಸ್ಕೃತಿಯ ಉಗಮಕ್ಕೆ ದಾರಿಮಾಡಿಕೊಟ್ಟುವು. ಆದುದರಿಂದ, ನಂದರು ಮತ್ತು ಮೌರ್ಯರು ವೈಭವದ ರಾಜ್ಯಭಾರ ನಡೆಸಿದ ಕ್ರಿ.ಪೂ. ೩೫೦ ಮತ್ತು ೨೫೦ರ ನಡುವಣ ನೂರು ವರ್ಷಗಳ ಕಾಲವೇ ಹಿಂದೂ ಸಮಾಜ ಹಾಗೂ ಸಂಸ್ಕೃತಿಗಳ ಅಡಿಪಾಯವು ಸ್ಥಾಪಿತವಾದುದಷ್ಟೇ ಅಲ್ಲದೆ, ಅವುಗಳ ಪ್ರಮುಖ ರೂಪಗಳೂ ನಿರ್ಣಾಯಕವಾದ, ಮಹಾಯುಗವೆಂದು ನಿಸ್ಸಂದಿಗ್ಧವಾಗಿ ಭಾವಿಸಬಹುದು.

* * * *

೨. ಇಸ್ಲಾಂ – ವಿರೋಧಿ ಪ್ರತಿಭಟನೆ

ಕ್ರಿ.ಪೂ. ೩೫೦ ಮತ್ತು ೨೫೦ರ ನಡುವಣ ನೂರು ವರ್ಷಗಳ ಅವಧಿಯು ಭಾರತೀಯ ವಿಕಸನದ ಮುಖ್ಯ ಲಕ್ಷಣಗಳನ್ನು ನಿರ್ಧರಿಸಿದ್ದರೆ, ಭಾರತವು ಹಿಂದೂ ರಾಷ್ಟ್ರವಾಗಿಯೇ ಉಳಿಯಬೇಕೇ ಅಥವಾ ಇಸ್ಲಾಂ ಆಕ್ರಮಣಕ್ಕೆ ತುತ್ತಾಗುವ ಮೊದಲೇ ಇರಾನ್, ಸಿರಿಯಾ ಮತ್ತು ಈಜಿಪ್ಟ್‌ಗಳಂತೆ ಕುಸಿದುಹೋಗಬೇಕೇ, ಪರಿಣಾಮವಾಗಿ ಅದರ ಪ್ರಾಚೀನ ನಾಗರೀಕತೆಯು ರೂಪಾಂತರಗೊಂಡು ಹೊಸ ರೂಪವನ್ನು ತಳೆಯಬೇಕೇ ಎಂದು ಕೊನೆಯಲ್ಲಿ ನಿರ್ಧರಿಸಿದ್ದು ಕ್ರಿ.ಶ. ೧೩೫೦ ಮತ್ತು ೧೪೫೦ರ ನಡುವಣ ನೂರು ವರ್ಷಗಳ ಅವಧಿಯೇ ಎಂಬುದರಲ್ಲಿ ಅನುಮಾನವಿಲ್ಲ. ಈ ಕಾಲಾವಧಿಯ ಪ್ರಾರಂಭದ ಭಾರತದತ್ತ ಒಮ್ಮೆ ದೃಷ್ಟಿ ಹಾಯಿಸಿದರೆ ಸಾಕು, ಆಗ ಹಿಂದೂಗಳು ಮತ್ತು ಹಿಂದೂಧರ್ಮಕ್ಕೆ ಎಂತಹ ಮಹಾ ಭಯವು ಎದುರಾಗಿತ್ತು ಎಂದು ತಿಳಿದುಬರುತ್ತದೆ. ೧೩೧೩ರಲ್ಲಿ ದೇಶಕ್ಕೆ ಬಂದ ಸುಶಿಕ್ಷಿತ ಮುಸ್ಲಿಂ ವೀಕ್ಷಕನೊಬ್ಬ, ತುಂಬ ಆಶ್ಚರ್ಯದಿಂದ, "ಹದಿನೈದು ವರ್ಷಗಳ ಕ್ಷಿಪ್ರಾವಧಿಯಲ್ಲಿ (ದೇವಗಿರಿಯ ಮೇಲಣ ಪ್ರಥಮ ದಂಡಯಾತ್ರೆ ನಡೆದ ೧೨೯೬ರಿಂದ ಮಲ್ಲಿಕ್ ಕಾಫರನು ಅಭೂತ ಪೂರ್ವ ಜಯವನ್ನು ಸಾಧಿಸಿ ರಾಮೇಶ್ವರಮ್‌ನಲ್ಲಿ ಹೆಜ್ಜೆಯಿಟ್ಟ ೧೩೧೧ರವರೆಗೆ) ದಕ್ಷಿಣ ಭಾರತದ ಪ್ರಾಚೀನ ರಾಜಕೀಯ ಸಂರಚನೆಯನ್ನು ಪ್ರತಿನಿಧಿಸುತ್ತಿದ್ದ ದೇವಗಿರಿ, ವಾರಂಗಲ್, ದ್ವಾರಸಮುದ್ರಮ್ ಮತ್ತು ಮಧುರಾಗಳು ಖಿಲ್ಜಿ ಸೈನ್ಯಕ್ಕೆ ತುತ್ತಾದವು. ರಾಮೇಶ್ವರದ ಕೋಟೆಯ ಮಣ್ಣುದಿಬ್ಬಗಳ ಮೇಲೆ ಇಸ್ಲಾಮ್‌ನ ಹಸಿರು ಬಾವುಟ ಹಾರಾಡಿತು" ಎಂದು ಹೇಳಿದ್ದಾನೆ. ವಿಂಧ್ಯಪರ್ವತಗಳಿಗೆ ಉತ್ತರದಲ್ಲಿರುವ ಇಡೀ ಭಾರತವು ಆಗಲೇ ಇಸ್ಲಾಮ್ ದೊರೆಗಳ ಸಮರ್ಥ ಪ್ರಭುತ್ವದಲ್ಲಿತ್ತು. ಆ ಕಾಲದಲ್ಲಿ ದಕ್ಷಿಣ ಭಾರತವನ್ನೂ ಅವರು ಜಯಿಸಿದರು. ಇಸ್ಲಾಮ್ – ವಿರೋಧಿ ಸುಸಂಘಟಿತ ಪ್ರತಿಭಟನೆಯು ಎಲ್ಲಿಯೂ ಕಂಡುಬರಲಿಲ್ಲ. ಆದುದರಿಂದ, "ಮುಂದಿನ ಕೆಲವೇ ವರ್ಷಗಳ ಅವಧಿಯಲ್ಲಿ ಭಾರತದ ಸಂಪೂರ್ಣ ಇಸ್ಲಾಮೀಕರಣ ನಡೆಯಲು ಯಾವುದೇ ಅಡ್ಡಿ ಅಡಚಣೆಗಳು ಉಂಟಾಗುವುದಿಲ್ಲ" ಎಂದು ಸಂಶಯಕ್ಕೆ ಆಸ್ಪದವಿಲ್ಲದ ರೀತಿಯಲ್ಲಿ ಈ ಮುಸ್ಲಿಮ್ ವೀಕ್ಷಕನು ಭವಿಷ್ಯ ನುಡಿದಿದ್ದಾನೆ.

ಇದೇ ರೀತಿಯಲ್ಲಿ, ಒಂದು ನಿರ್ದಿಷ್ಟ ದೃಷ್ಟಿಕೋನದಿಂದ ಭಾರತದ ಸನ್ನಿವೇಶವನ್ನು ನೋಡಿದ ಹಿಂದೂ ವೀಕ್ಷಕನೊಬ್ಬ ಕೂಡ, ಹೆಚ್ಚು ಆಶಾದಾಯಕವೆನಿಸುವ ಭವಿಷ್ಯವನ್ನು ನುಡಿದಿಲ್ಲ. ಗಂಗಾನದೀ ಕಣಿವೆಯ ಸಮಸ್ತ ಭೂಪ್ರದೇಶವೂ ಸುಮಾರು ನೂರು ವರ್ಷಗಳಿಂದ ಇಸ್ಲಾಮ್ ದೊರೆಗಳ ಆಳ್ವಿಕೆಯಲ್ಲಿತ್ತು. ಇದನ್ನು ಗಮನಿಸಿದ ಅವನು, ತೀವ್ರ ಹತಾಶೆಯಿಂದ ಅಲ್ಲದಿದ್ದರೂ, ದುಃಖದಿಂದ ಹಿಂದೂ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಜೀವನದ ಮಹಾಕೇಂದ್ರಗಳಾದ ಮಥುರಾ, ವಾರಾಣಸಿ, ಕನೋಜ್, ಪ್ರಯಾಗ ಮತ್ತಿತರ ನಗರಗಳು ಬಹುಮಟ್ಟಿಗೆ ನಾಶವಾಗಿದ್ದವು ಎಂದು ಹೇಳಿದ್ದಾನೆ. ಈಗ ದಕ್ಷಿಣ ಭಾರತದ ಮಹಾಸಾಮ್ರಾಜ್ಯಗಳೂ ಅಳಿದುಹೋದವು ಎಂದು ಅವನು ವಿಷಾದ ಪಟ್ಟಿದ್ದಾನೆ. ಈಶಾನ್ಯ ಭಾರತದ ತಿರ್ಹತ್ ಎಂಬ ಚಿಕ್ಕ ಪಾಳೆಯ ಮತ್ತು ಪಶ್ಚಿಮ ಕರಾವಳಿಯಲ್ಲಿರುವ ಝಾಮೊರಿನ್ ಎಂಬ ಚಿಕ್ಕ ಸಾಮ್ರಾಜ್ಯ – ಇವುಗಳನ್ನು ಬಿಟ್ಟುಳಿದಂತೆ, ಮುಸ್ಲಿಮ್ ದೊರೆಗಳು ಮುನ್ನುಗ್ಗಿ ವಿಜಯವನ್ನು ಸಾಧಿಸದಂತಹ ಇನ್ನಾವ ಭೂಭಾಗವೂ ಆಗ ಇರಲಿಲ್ಲ. ಆದರೆ ಬುಂದೇಲಖಂಡದ ಅರಣ್ಯ ಪ್ರದೇಶಗಳು ಹಾಗೂ ರಾಜಸ್ಥಾನದ ಮರುಭೂಮಿ ಪ್ರದೇಶಗಳಲ್ಲಿ ಮಾತ್ರ ಮುಸ್ಲಿಮರ ಅಧಿಕಾರ ಅಷ್ಟೇನೂ ಪರಿಣಾಮಕಾರಿಯಾಗಿರಲಿಲ್ಲ. ೧೩೧೩ರಲ್ಲಿ ಭಾರತದ ಬಗ್ಗೆ ಬರೆದ ನಮ್ಮ ಈ ಹಿಂದೂ ವೀಕ್ಷಕನು, ತನ್ನ ಮುಸ್ಲಿಮ್ ಸಹವೀಕ್ಷಕನ ಅಭಿಪ್ರಾಯವನ್ನು ಅಂಗೀಕರಿಸುತ್ತಾ, ಈ ದೇಶಕ್ಕೆ ಉತ್ತಮ ಭವಿಷ್ಯವಿರುವಂತೆ ಕಂಡುಬರುವುದಿಲ್ಲ ಎಂದಿದ್ದಾನೆ; ಹಿಂದೂಗಳು ಒಂದು ಸಮುದಾಯವಾಗಿ ಒಗ್ಗೂಡಲು ಅಥವಾ ಹಿಂದೂ ಧರ್ಮವು ಒಂದು ಧರ್ಮವಾಗಿ ಉಳಿಯಲು ದೇವರೇ ನೆರವಾಗಬೇಕು ಎಂದೂ ಅವನು ಉದ್ಗರಿಸಿದ್ದಾನೆ.

ಆದರೆ ನೂರು ವರ್ಷಗಳ ಅನಂತರ, ಎಂದರೆ ೧೪೧೩ರಲ್ಲಿ, ಭಾರತಕ್ಕೆ ಮತ್ತೆ ಭೇಟಿ ನೀಡಿದ ವೀಕ್ಷಕರು ಬೇರೆಯೇ ಆದ ಚಿತ್ರಣವನ್ನು ನೀಡಿದ್ದಾರೆ. ಹಿಂದೂಗಳು ಆಶ್ಚರ್ಯಕರವಾದ ರೀತಿಯಲ್ಲಿ ಪುನಶ್ಚೈತನ್ಯಗೊಂಡು ಪ್ರತಿಹೋರಾಟ ನಡೆಸತೊಡಗಿದಂತೆ ಕಂಡುಬರುತ್ತದೆ. ಪ್ರಬಲ ಸೈನ್ಯವನ್ನು ಹೊಂದಿರದ ಬಹುಸಂಖ್ಯೆಯ ಸಾಮ್ರಾಜ್ಯಗಳು ಇರುವ ಪ್ರದೇಶದಲ್ಲಿ, ಹಿಂದೂ ಧರ್ಮವನ್ನು ರಕ್ಷಿಸಬಲ್ಲ ಸುಸಂಘಟಿತ ಸಶಕ್ತ ಸಾಮ್ರಾಜ್ಯವೊಂದು ತುಂಗಭದ್ರಾ ತೀರದಲ್ಲಿ ತಲೆಯೆತ್ತಿ ಇಡೀ ದಕ್ಷಿಣ ಭಾರತದ ಮೇಲೆ ತನ್ನ ಅಧಿಕಾರವನ್ನು ವಿಸ್ತರಿಸಿತು. ನೂರು ವರ್ಷಗಳ ಹಿಂದೆ ಅರಾವಳಿ ಪ್ರದೇಶದಲ್ಲಿ ರಜಪೂತರು ಅಲ್ಲೊಮ್ಮೆ, ಇಲ್ಲೊಮ್ಮೆ ನಡೆಸಿದ ಕೆಲವು ಪ್ರತಿಭಟನೆಗಳು ಸ್ಥಳೀಯ 'ಗೆರಿಲ' ರೀತಿಯ ಚಿಕ್ಕಪುಟ್ಟ ಹೋರಾಟಗಳಂತೆ ಮಾತ್ರ ತೋರುತ್ತದೆ. ಮುಂದೆ ಮೇವಾಡದ ರಾಣಾಗಳ ನೇತೃತ್ವದಲ್ಲಿ ಈ ಕಾಳಗಗಳು ಮಹಾ ರಾಷ್ಟ್ರೀಯ ಚಳವಳಿಯಾಗಿ ರೂಪುಗೊಂಡು,

ಮೇವಾಡದ ರಾಣಾಗಳು ಹಿಂದೂ ಧರ್ಮವನ್ನು ರಕ್ಷಿಸಬಲ್ಲ ಸಮರ್ಥ ಸಾಮ್ರಾಜ್ಯವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದರು. ಬುಂದೇಲ ಖಂಡದ ಅರಣ್ಯ ಪ್ರದೇಶಗಳಲ್ಲಿದ್ದ ಚಿಕ್ಕಪುಟ್ಟ ದೊರೆಗಳ ಆಕ್ರಮಣವನ್ನೂ ರಾಣಾಗಳು ಎದುರಿಸಿರಬೇಕು. ಆದರೆ ಕೊನೆಗೆ ಕಾಲಿಂಜರ್ ಮಹಾಕೋಟೆಯು ಮತ್ತೆ ಅದರ ನ್ಯಾಯಸಮ್ಮತ ಧಣಿಯ ವಶಕ್ಕೆ ಬಂತು. ವಾಸ್ತವವಾಗಿ ಹೇಳುವುದಾದರೆ, ರಾಣಾಗಳು ಎಲ್ಲೆಡೆ ಮರು ಹುಟ್ಟಿನ ಉತ್ಸಾಹವನ್ನೇ ತೋರಿಸಿದರು.

ಹದಿಮೂರನೆಯ ಶತಮಾನದಲ್ಲಿ ಹಿಂದೂ ಸಮಾಜವನ್ನು ನಿರುತ್ಸಾಹಗೊಳಿಸಿದ ಸನ್ನಿವೇಶವನ್ನು ನೆನಪುಮಾಡಿಕೊಳ್ಳಲು ಸಾಧ್ಯವಾಗಿದ್ದ ಪಕ್ಷದಲ್ಲಿ, ತನ್ನ ಆಶ್ಚರ್ಯಕ್ಕೆ ಕಾರಣವಾದ ಪುನರುತ್ಥಾನದ ಉತ್ಸಾಹವನ್ನು ನಮ್ಮ ಈ ಹಿಂದೂ ವೀಕ್ಷಕನು ನಿರ್ಲಕ್ಷಿಸುತ್ತಿರಲಿಲ್ಲವೇನೋ! ದಕ್ಷಿಣ ಭಾರತದಲ್ಲಿ ವಿಜಯನಗರ ರಾಜರುಗಳು ಮತ್ತು ಅವರ ವೈಸ್‌ರಾಯ್‌ಗಳ (ರಾಜಪ್ರತಿನಿಧಿಗಳ) ಕಾಲದಲ್ಲಿ ಮಾತ್ರವಲ್ಲದೆ, ರಾಜಸ್ಥಾನದಲ್ಲಿ ಕೂಡ ನಡೆದ ಅಪರಿಮಿತ ನಿರ್ಮಾಣ ಕಾರ್ಯಚಟುವಟಿಕೆಗಳ ಬಗ್ಗೆ ಅವನು ಸಂತೋಷಪಡುತ್ತಿದ್ದ. ಒಬ್ಬ ಸಂಸ್ಕೃತ ವಿದ್ವಾಂಸನೇ ಆಗಿದ್ದರ, ಅವನು ಎಲ್ಲೆಡೆ ಕಂಡುಬರುತ್ತಿದ್ದಂತಹ ಅಸಾಧಾರಣ ಸೃಜನಶೀಲ ಕೃತಿರಚನೆಗಳ ಬಗ್ಗೆ ಕೂಡ ನಿಸ್ಸಂದೇಹವಾಗಿ ಸಂತಸವನ್ನು ವ್ಯಕ್ತಪಡಿಸುತ್ತಿದ್ದ; ಅಲ್ಲದೆ ಭಾರತದಲ್ಲಿ ಪ್ರಾದೇಶಿಕ ಭಾಷೆಗಳು ಬೆಳೆದುಬರುವ ಬಗೆಗೂ ಉತ್ಸಾಹ ತಾಳುತ್ತಿದ್ದ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅಲ್ಲಾಉದ್ದೀನನು ದಕ್ಷಿಣ ಭಾರತವನ್ನು ಜಯಿಸಿದ ಹಾಗೂ ಹಿಂದೂ ಆಳ್ವಿಕೆಯು ಸಂಪೂರ್ಣವಾಗಿ ಪತನ ಹೊಂದಿದ ಕೇವಲ ನೂರು ವರ್ಷಗಳ ಅನಂತರ, ೧೪೧೩ರ ನಮ್ಮ ಈ ಹಿಂದೂವೀಕ್ಷಕನು, ಹಿಂದೂ ಧರ್ಮವು ನಿರ್ನಾಮವಾಗುವಂತೆ ಬೆದರಿಸಿದ ಅಪಾಯಕರ ಸನ್ನಿವೇಶವನ್ನು ಗಮನಿಸುವಲ್ಲಿ ವಿಫಲನಾಗುತ್ತಿರಲಿಲ್ಲ. ಹಿಂದೂಗಳು ಭಾರತದ ಇತಿಹಾಸದಲ್ಲಿ ಮೃತ ನಾಗರಿಕತೆಯನ್ನು ಪ್ರತಿನಿಧಿಸುತ್ತಿದ್ದುದು ಕೆಲವು ಕಾಲ ಮಾತ್ರ. ಈಗ ಇದೆಲ್ಲ ಗತಕಾಲದ ಸಂಗತಿ. ೧೩೩೦ರಿಂದ ೧೪೩೦ರವರೆಗಿನ ಈ ನೂರು ವರ್ಷಗಳ ಅವಧಿಯಲ್ಲಿ ಸಂಭವಿಸಿದ ಘಟನೆಗಳೇ ಭಾರತದ ಭವಿಷ್ಯವನ್ನು ನಿರ್ಣಯಿಸಿದವು ಎಂದು ಸಮರ್ಥಿಸಬಹುದು.

೧೩೨೬ರಲ್ಲಿ ಎರಡು ಮಹತ್ತ್ವಪೂರ್ಣ ಘಟನೆಗಳು ಸಂಭವಿಸಿದವು. ಮೇವಾಡದ ಪ್ರಖ್ಯಾತಿ ಹಾಗೂ ರಾಷ್ಟ್ರೀಯ ಹೋರಾಟದಲ್ಲಿ ಭಾಗಿಗಳಾಗುವ ಅಪೂರ್ವ ಸಂಪ್ರದಾಯಕ್ಕೆ ಕಾರಣನೆನಿಸಿದ ಹಮ್ಮೀರನು ಚಿತ್ತೋರನ್ನು ಪುನಃ ಸ್ವಾಧೀನಪಡಿಸಿಕೊಂಡು, ರಾಜಸ್ಥಾನದಲ್ಲಿ ಹೊಸ ಪ್ರಭುತ್ವವೊಂದರ ಉದಯವಾದುದನ್ನು ದೆಹಲಿಯ ಮುಸ್ಲಿಂ ದೊರೆಗಳಿಗೆ ಪ್ರಕಟಪಡಿಸಿದ. ಸಿಂಘೋಲಿ ಗ್ರಾಮದ ಸಮೀಪ ನಡೆದ ಕಾಳಗದಲ್ಲಿ ದೆಹಲಿಯ ಸುಲ್ತಾನನನ್ನು ಸೋಲಿಸಿ ಬಂಧನದಲ್ಲಿ ಇಡಲಾಯಿತು.

ಅನಂತರ ಅಜಮೀರ್, ರಣಥಂಬೋರ್ ಮತ್ತು ನಾಗೋರ್‌ಗಳನ್ನು ಒಳಗೊಂಡ ವಿಸ್ತೃತ ಭೂಪ್ರದೇಶಗಳನ್ನು ಬಿಟ್ಟುಕೊಡಲು ಹಾಗೂ ಐವತ್ತು ಲಕ್ಷ ರೂಪಾಯಿಗಳನ್ನು ಮತ್ತು ನೂರು ಆನೆಗಳನ್ನು ಬಿಟ್ಟುಕೊಡಲು ಸಮ್ಮತಿಸಿ ಅವನು ಬಂಧಮುಕ್ತನಾಗ ಬೇಕಾಯಿತು. ಹೀಗೆ ಮೇವಾಡದ ರಾಣಾಗಳು ಹಾಗೂ ದೆಹಲಿಯ ಮುಸ್ಲಿಮ್ ಸುಲ್ತಾನರ ನಡುವೆ ಪ್ರಾರಂಭವಾದ ಯುದ್ಧದಿಂದ ಮೇವಾಡದ ರಾಜರುಗಳು 'ಹಿಂದೂ ವಾನ್ ಸುರಾಜ್' ಮತ್ತು 'ಹಿಂದೂಪತಿ' ಎಂಬ ಬಿರುದನ್ನು ಪಡೆದರು. ಮೊಘಲರ ಅಧಿಕಾರವು ತುತ್ತತುದಿಗೆ ಏರಿದಾಗ ಕೂಡ ಇವರ ನಡುವಣ ಕದನವು ನಿಲ್ಲಲಿಲ್ಲ. ಹಮ್ಮೀರ, ಕುಂಭ ಮತ್ತು ಪ್ರತಾಪರ ಉತ್ತರಾಧಿಕಾರಿಗಳ ಪ್ರಾಬಲ್ಯವು ಕುಂದಿದಾಗಲೂ ಅದೇ ಕುಟುಂಬದ ಶಾಖೆಯೊಂದರ ಉತ್ತರಾಧಿಕಾರಿಯೆಂದು ಹೇಳಿಕೊಂಡ, ಶಿವಾಜಿಯು ನಾಯಕತ್ವವನ್ನು ವಹಿಸಿಕೊಂಡು ಅದೇರೀತಿಯ ಹೋರಾಟವನ್ನು ಮುಂದುವರಿಸಿದ. ಹೀಗೆ, ಉತ್ತರ ಭಾರತದಲ್ಲಿ ಕಂಡುಬಂದಂತಹ ಹಿಂದೂಗಳ ಸಕ್ರಿಯ ವಿರೋಧದ (ಪ್ರತಿಭಟನೆಯ) ಸಮಗ್ರ ಕಾರ್ಯ ಚಟುವಟಿಕೆಗಳೂ ಚಿತ್ತೂರಿನ ಪುನರ್ವಿಜಯ ಹಾಗೂ ಮೇವಾಡದ ರಾಣಾಗಳು ಮಾಡಬಯಸಿದ ಆಕ್ರಮಣ– ಇವುಗಳೊಂದಿಗೆ ಐತಿಹಾಸಿಕ ಸಂಬಂಧ ಹೊಂದಿವೆಯೆಂದು ತೋರಬಹುದು.

ಇತಿಹಾಸದಲ್ಲಿ ಅನಂತರ ಸಿಸೋದೀಯರೆಂಬ ತಮ್ಮ ಸುಪ್ರಸಿದ್ಧ ಹೆಸರಿನಿಂದಲೇ ಖ್ಯಾತರಾದ ಗುಹಿಲಪುತ್ರರು ಅರಾವಳಿ ಪ್ರದೇಶದಲ್ಲಿ ತಮ್ಮ ಪ್ರಾಂತಗಳನ್ನು ಹೊಂದಿದ್ದ ಪ್ರಮುಖ ರಜಪೂತ ಕುಟುಂಬಕ್ಕೆ ಸೇರಿದ್ದರು. ಅಲ್ಲಿ ಅವರು ಪರಿಗಣನಾರ್ಹವೆನಿಸಿದ ಸೇನಾಬಲವನ್ನು ಬೆಳೆಸಿಕೊಂಡಿದ್ದರು. ೧೩೦೩ರಲ್ಲಿ ಅಲ್ಲಾಉದ್ದೀನ್ ಖಿಲ್ಜಿಯು ಅವರ ಐತಿಹಾಸಿಕ ರಾಜಧಾನಿಯಾದ ಚಿತ್ತೂರನ್ನು ಜಯಿಸಿದ. ಚಿತ್ತೂರನ್ನು ರಕ್ಷಿಸಲು ಆಗ ನಡೆಸಿದ ಯುದ್ಧದಲ್ಲಿ ಮೇವಾಡದ ರಾಜನಾದ ಲಕ್ಷ್ಮಣಸಿಂಹನು ಮರಣ ಹೊಂದಿದ. ಹಿಂದೂಸ್ಥಾನದ ಇತರ ಅನೇಕ ರಾಜರುಗಳ ಸಂದರ್ಭದಲ್ಲಿ ನಡೆದಂತೆ, ಈ ಸೋಲು ಮೇವಾಡದ ರಾಣಾಗಳು ಶರಣಾಗತರಾಗುವಂತೆ ಮಾಡಲಿಲ್ಲ. ಬದಲಾಗಿ ರಾಜಕುಟುಂಬದವರು ಅರಾವಳಿ ಪರ್ವತಶ್ರೇಣಿಯಲ್ಲಿರುವ ಒಂದು ಕೋಟೆಯಲ್ಲಿ ಆಶ್ರಯ ಪಡೆದರು. ಮುಂದೆ ಇದೇ ಕುಟುಂಬಕ್ಕೆ ಸೇರಿದ ಹಮ್ಮೀರ ಎಂಬುವನು ಪ್ರಬಲ ರಾಜಧಾನಿಯನ್ನು ಪುನಃ ವಶಪಡಿಸಿಕೊಳ್ಳುವ ಉದ್ದೇಶದಿಂದ ಸೇನಾಬಲವನ್ನು ಹೆಚ್ಚಿಸಿಕೊಂಡ. ಹಮ್ಮೀರನ ಮಗನಾದ ಕ್ಷೇತ್ರ ಸಿಂಘನು ರಾಜಸ್ಥಾನದ ಮೇಲಿನ ತನ್ನ ನಿಯಂತ್ರಣವನ್ನು ಬಲಪಡಿಸಿಕೊಂಡ. ಆಗ ದೆಹಲಿಯ ಸುಲ್ತಾನರು ಅಧಿಕಾರವನ್ನು ಕಳೆದುಕೊಳ್ಳುವ ಹಂತದಲ್ಲಿದ್ದರು. ಆದರೆ ಮೇವಾಡದ ದೊರೆಗಳು ಮಾಳ್ವರ ವಿರೋಧವನ್ನು ಎದುರಿಸಬೇಕಾಗಿ ಬಂತು. ಮಾಳ್ವವು ತನ್ನ ಘುರಿ ರಾಜರುಗಳ ಆಳ್ವಿಕೆಯಲ್ಲಿ ಪ್ರಬಲವಾಗಿ ರೂಪುಗೊಳ್ಳುತ್ತಿತ್ತು. ಅಮಿ ಷಾಹ್ ಎಂಬ

ಬಿರುದನ್ನು ಧರಿಸಿದ್ದ ದಿಲಾವರ್ ಖಾನ್ ಘುರಿಯ ಮೇವಾಡದ ರಾಣಾರನ್ನು ಎದುರಿಸಿದನಾದರೂ, ೧೩೮೯ರಲ್ಲಿ ನಡೆದ ಕದನದಲ್ಲಿ ಸಂಪೂರ್ಣ ಸೋತುಹೋದ. ಮಾಳ್ವ ಮತ್ತು ಮೇವಾಡಗಳ ನಡುವಿನ ಈ ಪ್ರತಿಸ್ಪರ್ಧೆಯು ತೀವ್ರವಾಗುತ್ತ ಬಂದು, ನಿರಂತರ ಕಲಹಕ್ಕೆ ಕಾರಣವಾದಾಗ ೧೪೦೧ರಲ್ಲಿ ಝಫರ್ ಖಾನನ ರಾಜ್ಯಭಾರದ ಕಾಲದಲ್ಲಿ ಗುಜರಾತಿನ ಸಂಪದ್ಭರಿತವಾದ ಪ್ರಾಂತವೂ ಒಂದು ಪ್ರತ್ಯೇಕ ಸಾಮ್ರಾಜ್ಯವಾಗಿ ತನ್ನ ಸ್ವಾತಂತ್ರ್ಯವನ್ನು ಪ್ರತಿಪಾದಿಸಿತು. ವಿಪುಲ ಅಂತರರಾಷ್ಟ್ರೀಯ ವ್ಯಾಪಾರ ವ್ಯವಹಾರಗಳಿಂದ ಗಳಿಸಿದ ಸಂಪತ್ತಿನಿಂದಾಗಿ ಗುಜರಾತ್ ಸುಲ್ತಾನರುಗಳಿಗೆ ವಿಶೇಷ ಸ್ಥಾನಮಾನಗಳು ಲಭಿಸಿದ್ದವು. ಮಾಳ್ವವನ್ನು ಜಯಿಸಿ, ಸೂರತ್ತಿನಿಂದ ಮಧ್ಯಭಾರತದವರೆಗೆ ವಿಸ್ತರಿಸಿದ ಮಹಾಸಾಮ್ರಾಜ್ಯವನ್ನು ಸ್ಥಾಪಿಸುವುದೇ ಗುಜರಾತಿನ ಸುಲ್ತಾನರುಗಳ ಮಹತ್ವಾಕಾಂಕ್ಷೆಯಾಗಿತ್ತು. ಚಿತ್ತೂರಿನ ಹೊಸ ರಾಜ್ಯವು ಅಪಾಯದಲ್ಲಿ ಸಿಲುಕಿಕೊಳ್ಳಬಹುದಾದುದರಿಂದ ಈ ಕನಸನ್ನು ಸಾಕಾರಗೊಳಿಸಿಕೊಳ್ಳುವುದೂ ಬಹಳ ಪ್ರಯಾಸಕರವಾಗಿತ್ತು. ಅಲ್ಲದೆ, ಪಕ್ಕದಲ್ಲಿಯೇ ಬಹಮನಿ ಸಾಮ್ರಾಜ್ಯ ವಿದ್ದುದರಿಂದ, ಗುಜರಾತ್ – ಮಾಳ್ವ ಸಾಮ್ರಾಜ್ಯಗಳ ಸೇರ್ಪಡೆಯಾದ ಮಧ್ಯ ಭಾರತದ ಪ್ರದೇಶಗಳೆಲ್ಲ ನಿಯಂತ್ರಣಕ್ಕೆ ಒಳಗಾಗಿ ಅದು ಇಬ್ಭಾಗವಾಗುವ ಸಂಭವವಿತ್ತು. ಆದುದರಿಂದ ಗುಜರಾತ್ ಮತ್ತು ಮಾಳ್ವಗಳು ಒಟ್ಟುಗೂಡುವುದನ್ನು ತಡೆಯುವುದೇ ಮೇವಾಡದ ರಾಜರುಗಳ ಮಹೋದ್ದೇಶವಾಗಿದ್ದು, ಹಿಂದೂ ಪುನರುತ್ಥಾನಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಇದು ಅವರ ಪ್ರಮುಖ ಕೊಡುಗೆಯಾಗಿತ್ತು.

ಈ ಐತಿಹಾಸಿಕ ಹೋರಾಟದ ಮಹಾನಾಯಕನೇ ರಾಣಾ ಕುಂಭ. ಯಾವುದೇ ಮಾನದಂಡವನ್ನು ಬಳಸಿ ಹೋಲಿಸುವುದಾದರೂ ಭಾರತೀಯ ಇತಿಹಾಸದ ಪ್ರಮುಖ ವ್ಯಕ್ತಿಗಳಲ್ಲಿ ಅವನು ಒಬ್ಬ ಎನ್ನುವುದರಲ್ಲಿ ಸಂದೇಹವಿಲ್ಲ. ಪ್ರಾಚೀನ ಕಾಲದ ಮಹಾ ಚಕ್ರವರ್ತಿಗಳು ಮತ್ತು ಆಧುನಿಕ ಕಾಲದ ಕೃಷ್ಣದೇವರಾಯ, ಶಿವಾಜಿ ಹಾಗೂ ಮತ್ತಿತರ ಮಹಾರಾಜರುಗಳ ಜೊತೆಗೆ ರಾಣಾಕುಂಭನನ್ನು ಹೋಲಿಸಬಹುದು. ಮಾಳ್ವ ಮತ್ತು ಗುಜರಾತ್‌ಗಳ ವಿರುದ್ಧವಾಗಿ ನಿರಂತರ ಹೋರಾಟವನ್ನು ಮುಂದುವರಿಸಿಕೊಂಡು ಬಂದ ರಾಣಾ ಮೊಕಲನ ಉತ್ತರಾಧಿಕಾರಿಯಾಗಿ ೧೩೩೩ರಲ್ಲಿ ಸಿಂಹಾಸನವನ್ನು ಏರಿದ ರಾಣಾ ಕುಂಭನು ಎರಡೂ ಸಾಮ್ರಾಜ್ಯಗಳ ಜೊತೆಗೆ ತನ್ನ ಕದನವನ್ನು ನಿಲ್ಲಿಸಲಿಲ್ಲ. ಅವನ ಆಡಳಿತ ಕಾಲವು ನಮ್ಮ ನಿರ್ಣಾಯಕ ಕಾಲಾವಧಿಗೆ ಸೇರಿಲ್ಲ. ಆದಾಗ್ಯೂ, ಆಗಲೇ ಏನನ್ನು ಸಾಧಿಸಲಾಗಿದೆ ಹಾಗೂ ಹಿಂದೂಗಳು ಆಶ್ಚರ್ಯಕರವಾದ ರೀತಿಯಲ್ಲಿ ಹೇಗೆ ಪುನಶ್ಚೈತನ್ಯಗೊಂಡರು ಎಂಬುದಕ್ಕೆ ಈ ಕಾಲವು ಸ್ಪಷ್ಟವಾದ ಸಾಕ್ಷ್ಯವಾಗಿದೆ. ಮಹಾರಾಣಾ ಕುಂಭನ ಬಗೆಗಿನ ವಿಪುಲ ಮಾಹಿತಿಗಳು ಲಭ್ಯವಿದ್ದಾಗ್ಯೂ, ಅವನ

ಜೀವನಚರಿತ್ರೆಯನ್ನು ಈವರೆಗೆ ಯಾರೂ ಬರೆಯದಿರುವುದು ಭಾರತೀಯ ಚಾರಿತ್ರಿಕ ಸಾಹಿತ್ಯದಲ್ಲಿನ ಎದ್ದುಕಾಣುವ ದೊಡ್ಡ ಕೊರತೆಯಾಗಿದೆ. ಹಮ್ಮೀರನಿಂದ ಕುಂಭನವರೆಗಿನ ಕಾಲವು ಬೆಳವಣಿಗೆಗೆ ಹಾಗೂ ಪುನರ್ವ್ಯವಸ್ಥೆಯ ಮುಖ್ಯ ಅವಧಿಯಾಗಿದೆ. ಕುಂಭನ ಪ್ರಮುಖ ಉತ್ತರಾಧಿಕಾರಿಗಳಾದ ರಾಣಾ ಸಂಗ ಮತ್ತು ರಾಣಾ ಪ್ರತಾಪರು ನಿಸ್ಸಂದೇಹವಾಗಿ ಹಿಂದೂ ರಾಜಕೀಯ ಜೀವನದ ಮುಖ್ಯ ನಾಯಕರಾಗಿದ್ದರು. ಆದುದರಿಂದ ಹಿಂದೂಧರ್ಮಕ್ಕೆ ಎದುರಾಗಿದ್ದ ಅಪಾಯವು ದೂರವಾಯಿತೆನ್ನ ಬಹುದು. ಆಡಳಿತವನ್ನು ಪುನಃ ಸಂಘಟಿಸುವ ಕಾರ್ಯದಲ್ಲಿ ಅವರು ಎಷ್ಟು ಸಾಮರ್ಥ್ಯವನ್ನು ಹೊಂದಿದ್ದರೆಂದರೆ, ರಾಜ್ಯದ ಹಾಗೂ ಸ್ಥಳೀಯ ಸರ್ಕಾರಗಳೆರಡೂ ಹಿಂದೂ ರಾಜ್ಯಗಳನ್ನಷ್ಟೇ ಅಲ್ಲದೆ, ತಮ್ಮ ಸ್ವಂತ ಹಿಂದೂ ಪೂಜೆಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಯಿತು. ಮಾಳ್ವಾದ ಸುಲ್ತಾನರು ಮತ್ತು ಬಿಜಾಪುರ, ಗೋಲ್ಕೊಂಡ ಹಾಗೂ ಇತರ ರಾಜ್ಯಗಳ ರಾಜರುಗಳಿಗಿಂತ ಮಿಗಿಲಾಗಿ ಮಹಾ ಮೊಗಲರ ಇತಿಹಾಸವೂ ಈ ಮಾತನ್ನು ಸಾಬೀತುಪಡಿಸುತ್ತದೆ.

ಹಮ್ಮೀರನು ಚಿತ್ತೂರಿನ ಮೇಲೆ ಆಕ್ರಮಣ ಮಾಡಿ ಆ ಅತಿಮುಖ್ಯವಾದ ಪ್ರದೇಶದಲ್ಲಿ ಹಿಂದೂ ಸಾಮ್ರಾಜ್ಯವನ್ನು ಪುನಃ ಸ್ಥಾಪಿಸುತ್ತಿದ್ದ ಸಮಯದಲ್ಲಿ ಕಾಕತೀಯ ರಾಜ್ಯದ ಕರಾವಳಿ ಪ್ರದೇಶದಲ್ಲಿ ಒಂದು ರಾಷ್ಟ್ರೀಯ ಬಂಡಾಯವು ಪ್ರಾರಂಭವಾಗುತ್ತಿತ್ತು. ಮುಂದೆ ಇದು ದೂರದೃಷ್ಟಿಯ ಪರಿಣಾಮಗಳಿಗೆ ಕಾರಣವಾಯಿತು. ಇತರ ಅನೇಕ ಚಿಕ್ಕಪುಟ್ಟ ಕುಲೀನ ಮನೆತನದವರು ಮತ್ತು ಮುಖ್ಯವಾಗಿ ರೆಡ್ಡಿ ಮುಖಂಡನಾದ ಪ್ರೋಲಯ ವೇಮನ ಬೆಂಬಲ ಪಡೆದ ಪ್ರೋಲಯ ನಾಯಕನೆಂಬ ಒಬ್ಬ ಸ್ಥಳೀಯ ನಾಯಕನು ಹಿಂದೂ ಧರ್ಮವನ್ನು ಪುನಃಸ್ಥಾಪಿಸಿ, ಕಳೆದುಹೋದ ಸ್ವಾತಂತ್ರ್ಯವನ್ನು ಮತ್ತೆ ಪಡೆಯುವ ಮಹಾ ಉದ್ದೇಶದಿಂದ ಒಳಸಂಚೊಂದನ್ನು ರೂಪಿಸಿದ್ದ. ಆಗ ಕರಾವಳಿ ಜಿಲ್ಲೆಯ ಮೇಲೆ ಮುಸ್ಲಿಮರ ಆಳ್ವಿಕೆಯಿರಲಿಲ್ಲ. ಮುಸ್ಲಿಮರಿಂದ ಇರುವ ಅಪಾಯವನ್ನು ತಿಳಿದ ದೆಹಲಿಯ ಸುಲ್ತಾನರು ಬಂಡಾಯಗಾರರನ್ನು ಸದೆಬಡಿಯಲು ದಕ್ಷಿಣದತ್ತ ಸಾಗಿದರು. ಆದರೆ ೧೩೩೦ರಲ್ಲಿ ಆಡಳಿತವನ್ನು ವಹಿಸಿಕೊಂಡ ಪ್ರೋಲಯದ ಮಗನಾದ ಕಪಯ ನಾಯಕನು ಮೂರನೆಯ ವೀರಬಲ್ಲಾಳನ ಸಹಕಾರವನ್ನು ಪಡೆದು ಒಂದು ಒಳಸಂಚನ್ನು ರೂಪಿಸಿದ. ಸುಲ್ತಾನನ ಸೇನಾಪತಿಗಳು ವಿರೋಧಿಸುವ ವಿಶೇಷ ಪ್ರಯತ್ನಗಳನ್ನು ಮಾಡಿದರು. ಆದರೂ ವೀರಬಲ್ಲಾಳನು ತನ್ನ ಪ್ರಾಂತವನ್ನು ಮುಸ್ಲಿಮರ ಆಳ್ವಿಕೆಯಿಂದ ಪಾರುಮಾಡುವಲ್ಲಿ ಯಶಸ್ವಿಯಾದ. ಅಷ್ಟೇ ಅಲ್ಲ, ಪಾಂಡ್ಯರ ಪ್ರದೇಶದಲ್ಲಿ ಆಗಲೇ ರಾಜ್ಯಭಾರ ಮಾಡತೊಡಗಿದ್ದ ಮುಸ್ಲಿಮ್ ಸುಲ್ತಾನರುಗಳನ್ನು ಸದೆಬಡಿಯಲು ಕೂಡ ಅವನಿಗೆ ಸಾಧ್ಯವಾಯಿತು.

ಪ್ರೋಲಯ ನಾಯಕನ ಬಂಡಾಯವು ಹಿಂದೂಗಳ ರಾಜಕೀಯ ಚೈತನ್ಯವು ಜೀವಂತವೂ ಸಕ್ರಿಯವೂ ಆಗಿದೆಯೆಂದು ತೋರಿಸಿದ ಒಂದು ಯಶಸ್ವೀ ಸ್ಥಳೀಯ ದಂಗೆ ಎಂಬ ವಾಸ್ತವ ಸಂಗತಿಯಷ್ಟೆ ಅದರ ಮಹತ್ತ್ವವಾಗಿಲ್ಲ; ಈ ಬಂಡಾಯವು ಮುಂದೆ ದಕ್ಷಿಣ ಭಾರತದಲ್ಲಿ ಮಹಾರಾಷ್ಟ್ರೀಯ ದಂಗೆಯೊಂದು ಪ್ರಾರಂಭವಾಗುವುದಕ್ಕೂ ಕಾರಣವಾಯಿತು. ಪ್ರೋಲಯ ನಾಯಕನು ಪ್ರಾರಂಭಿಸಿದ ದಂಗೆಯು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಲ್ಲಿ ಸಂಪೂರ್ಣ ಸಾರ್ಥಕತೆಯನ್ನು ಪಡೆಯಿತು ಎನ್ನಬಹುದು. ಬಲವಂತದಿಂದ ಇಸ್ಲಾಮ್‌ಗೆ ಮತಾಂತರಗೊಂಡಂತೆ ಕಂಡುಬರುವ ಹರಿಹರ ಹಾಗೂ ಬುಕ್ಕ ಎಂಬ ಇಬ್ಬರು ಸಹೋದರರನ್ನು ಮೊಹಮ್ಮದ್ ತೊಗಲಖನು, ಅನುಕ್ರಮವಾಗಿ ಕಂಪಿಲಿಯ ಪ್ರಾಂತಾಧಿಪತಿ ಮತ್ತು ಉಪಪ್ರಾಂತಾಧಿಪತಿಗಳನ್ನಾಗಿ ನೇಮಿಸಿದನು. ಮತಾಂತರಗೊಂಡವರೆಂದು ನೆಪಮಾತ್ರಕ್ಕೆ ಭಾವಿಸಲಾದ ಈ ಅಣ್ಣತಮ್ಮಂದಿರು ವಿದ್ಯಾರಣ್ಯ ಎಂಬ ಮಹಾ ಸಂತರ ಪ್ರಭಾವಕ್ಕೆ ಒಳಗಾದರು. ಅನ್ಯ ಧರ್ಮಗಳಿಗೆ ಮತಾಂತರಗೊಂಡವರನ್ನು ಪುನಃ ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳುವಷ್ಟು ಸಾಮರ್ಥ್ಯ ಹಾಗೂ ಅಧಿಕಾರಗಳನ್ನು ವಿದ್ಯಾರಣ್ಯರು ಹೊಂದಿದ್ದರು. ತಮ್ಮ 'ಗುರು'ವಿನ ಧಾರ್ಮಿಕ ಉತ್ಸಾಹ ಮತ್ತು ಆ ಪ್ರದೇಶದ ಜನರು ಹೊಂದಿದ್ದ ದೇಶಪ್ರೇಮದ ಮನೋಭಾವಗಳಿಂದ ಪ್ರಭಾವಿತರಾದ ಹರಿಹರ ಹಾಗೂ ಬುಕ್ಕರು ಸೋಲನ್ನು ಒಪ್ಪಿಕೊಳ್ಳಲು ಸಿದ್ಧರಾಗಿರಲಿಲ್ಲ. ಅವರು ರಾಷ್ಟ್ರೀಯ ಬಂಡಾಯದ ನೇತೃತ್ವವನ್ನು ತಾವೇ ವಹಿಸಿಕೊಂಡು ೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಅದೇ ಮುಂದೆ ಸಮಗ್ರ ದಕ್ಷಿಣ ಭಾರತದವರೆಗೂ ವಿಸ್ತರಿಸಿದ ಮಹಾ ಸಾಮ್ರಾಜ್ಯವಾಗಿ ರೂಪುಗೊಂಡಿತ್ತು.

ಸ್ಥಾಪನೆಯ ಸಮಯದಲ್ಲಿ ವಿಜಯನಗರದ ಅಷ್ಟೇನೂ ವಿಸ್ತಾರವಾಗಿರಲಿಲ್ಲ. ನೆಲ್ಲೂರು ಅದರ ದಕ್ಷಿಣದ ಗಡಿಯಾಗಿತ್ತು. ಪಶ್ಚಿಮದಲ್ಲಿ ಅದು ಧಾರವಾಡದವರೆಗೆ ಮಾತ್ರ ವಿಸ್ತರಿಸಿತ್ತು. ದಕ್ಷಿಣ ಭಾರತದ ಒಂದು ಪ್ರಮುಖ ಹಿಂದೂ ಸಾಮ್ರಾಜ್ಯವನ್ನಾಗಿ ಸಂಘಟಿಸುವ ಉದ್ದೇಶವನ್ನು ವಿಜಯನಗರದಿಂದ ಮೊದಲ ಮೂವರು ರಾಜರು ಹೊಂದಿದ್ದರು. ಸ್ವತಃ ಹರಿಹರನೇ ೧೩೪೬ರಲ್ಲಿ ಹೊಯ್ಸಳ ಸಾಮ್ರಾಜ್ಯವನ್ನು ಜಯಿಸಿ, ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ; ಶೃಂಗೇರಿಯ ಪ್ರಧಾನ ಅರ್ಚಕರ ಆಶ್ರಯದಲ್ಲಿ ಅದರ ಆಡಳಿತವನ್ನು ನಡೆಸಿದ. ಅರಬ್ಬೀಸಮುದ್ರದವರೆಗೆ ರಾಜ್ಯವನ್ನು ವಿಸ್ತರಿಸಲು ಸಮರ್ಥನಾದ ಹರಿಹರನು ಮಧ್ಯಪ್ರಾಚ್ಯದೊಂದಿಗೆ ವ್ಯಾಪಾರ ವ್ಯವಹಾರಗಳನ್ನು ಪ್ರಾರಂಭಿಸಿದ. ಆಗಲೇ ಮುಸ್ಲಿಮ್ ದೊರೆಗಳು ಹೆಚ್ಚು ಕಡಿಮೆ ದಿವಾಳಿ ಹೊಂದಿದ್ದರು. ವೀರ ಕಂಪನು ಮಧುರಾದ ಮೇಲೆ ದಂಡಯಾತ್ರೆ ನಡೆಸಿ ಸೋಲಿಸಿದ್ದು, ಅವನ ಮಡದಿಯಾದ ರಾಣಿ ಗಂಗಾದೇವಿಯು ರಚಿಸಿದ 'ಮಧುರಾ ವಿಜಯಮ್' ಎಂಬ ಅತ್ಯುತ್ಕೃಷ್ಟ ಮಹಾಕಾವ್ಯದ ಮುಖ್ಯವಸ್ತುವಾಗಿದೆ.

ಕೃಷ್ಣಾ ನದಿಯಿಂದ ಕನ್ಯಾಕುಮಾರಿಯವರೆಗೆ ವಿಸ್ತರಿಸಿದ್ದ ವಿಜಯನಗರದ ರಾಜರುಗಳು ದಕ್ಷಿಣ ಭಾರತದ ಇತಿಹಾಸ ಪ್ರಸಿದ್ಧ ಪ್ರದೇಶಗಳನ್ನು ಮುಸ್ಲಿಮರಿಂದ ರಕ್ಷಿಸಲು ಸಮರ್ಥರಾಗಿದ್ದರು. ಇದೇ ಅವರ ಉದ್ದೇಶವಾಗಿತ್ತು ಎಂಬುದು (ಹರಿಹರನು ಸಿಂಹಾಸನವನ್ನು ಏರಿದ ೧೩೩೬ರಿಂದ ಎರಡನೆಯ ವೆಂಕಟನು ಮರಣ ಹೊಂದಿದ ೧೬೧೪ರವರೆಗೆ) ಇನ್ನೂರ ಎಪ್ಪತ್ತೆಂಟು ವರ್ಷಗಳ ಕಾಲ ವಿಜಯನಗರ ಸಾಮ್ರಾಜ್ಯವು ಅಸ್ತಿತ್ವದಲ್ಲಿತ್ತು ಎಂಬ ವಾಸ್ತವ ಸಂಗತಿಯಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಆ ಅವಧಿಯ ಉದ್ದಕ್ಕೂ ಹಿಂದೂ ರಾಜರು ಮತ್ತು ಮುಸ್ಲಿಮ್ ಸುಲ್ತಾನರುಗಳ ನಡುವೆ ಹೋರಾಟವು ನಡೆಯುತ್ತಲೇ ಇತ್ತು. ತಾಳಿಕೋಟೆ ಯುದ್ಧದಲ್ಲಿ ಅವರು ಸೋತುಹೋದ ಮೇಲೆ ಕೂಡ, ೬೦ ವರ್ಷಗಳಿಗಿಂತಲೂ ಹೆಚ್ಚುಕಾಲ ಹಿಂದೂ–ಮುಸ್ಲಿಮ್ ಕದನವು ಎಡಬಿಡದೆ ನಡೆಯುತ್ತಿತ್ತು. ಹೀಗೆ ವಿಜಯನಗರ ಸಾಮ್ರಾಜ್ಯದ ಪ್ರಾಬಲ್ಯದಿಂದಾಗಿ, ದಕ್ಷಿಣ ಭಾರತದಲ್ಲಿ, ಹಿಂದೂ ಧರ್ಮವು ಮುಸ್ಲಿಮ್ ಪ್ರಭುತ್ವದಿಂದ ರಕ್ಷಣೆ ಪಡೆಯಿತು. ವಿಜಯನಗರ ಸಾಮ್ರಾಜ್ಯವು ಅವನತಿ ಹೊಂದಿದ ಅನತಿಕಾಲದಲ್ಲಿಯೇ ಭಾರತೀಯ ಇತಿಹಾಸದ ರಂಗಭೂಮಿಯಲ್ಲಿ, ಹಿಂದೂ ಸಾಂಸ್ಕೃತಿಕ ಮುಖಂಡರಾಗಿ ಮರಾಠರು ಕಾಣಿಸಿಕೊಳ್ಳತೊಡಗಿದರು. ಆದರೆ, ೧೩೩೦ರಿಂದ ೧೪೩೦ರವರೆಗಿನ ಕಾಲಾವಧಿಯಲ್ಲಿ ಇಂತಹ ರಾಷ್ಟ್ರೀಯ ಪ್ರತಿಭಟನೆಯು ನಡೆಯದೆ ಹೋಗಿದ್ದರೆ, ದಕ್ಷಿಣ ಭಾರತದಲ್ಲಿ ಹಿಂದೂ ಧರ್ಮವು ಸಂಪೂರ್ಣ ಪತನ ಹೊಂದಿ, ಗತಕಾಲದೊಂದಿಗೆ ಯಾವ ಸಂಬಂಧವನ್ನೂ ಹೊಂದಿರದ ಮತ್ತು ಸಂಪೂರ್ಣವಾಗಿ ಭಿನ್ನವಾದ ಪ್ರತ್ಯೇಕ ಸಂಸ್ಕೃತಿಯೊಂದು ಸಮಗ್ರ ಭಾರತದ ಆದ್ಯಂತ ರೂಪುಗೊಳ್ಳುತ್ತಿತ್ತು ಎಂಬ ಸಂಗತಿಯನ್ನು ನಾವು ಮರೆಯಕೂಡದು.

ಉತ್ತರಭಾರತದಲ್ಲಿ ಮೇವಾಡದ ರಾಣಾಗಳು ಹಾಗೂ ದಕ್ಷಿಣ ಭಾರತದಲ್ಲಿ ವಿಜಯನಗರದ ಚಕ್ರವರ್ತಿಗಳು– ಇವರ ರಾಜ್ಯಭಾರದ ಕಾಲದಲ್ಲಿ ನಡೆದ ಪುನರುತ್ಥಾನ ಕಾರ್ಯವು ನಿಜವಾಗಿಯೂ ಒಂದು ಪ್ರಮುಖ ರಾಷ್ಟ್ರೀಯ ಪ್ರತಿಭಟನೆಯೆನಿಸಿದ್ದು, ಹಿಂದೂಗಳ ಧರ್ಮ, ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ ಮೊದಲಾದ ರಾಷ್ಟ್ರೀಯ ಜೀವನದ ಎಲ್ಲ ಕ್ಷೇತ್ರಗಳ ಮೇಲೆ ಪರಿಣಾಮವನ್ನು ಉಂಟುಮಾಡಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ನಾವೀಗ ಗಮನಹರಿಸಬಹುದು. ಧಾರ್ಮಿಕ ಪುನರುತ್ಥಾನದ ಉತ್ಸಾಹವೇ ಇಲ್ಲಿ ಅತ್ಯಂತ ಗಮನಾರ್ಹವಾದ ಅಂಶವೆನ್ನಬಹುದು. ಹದಿಮೂರನೆಯ ಶತಮಾನದಲ್ಲಿ ಉತ್ತರ ಭಾರತದಲ್ಲಿ ಹಿಂದೂ ಧರ್ಮವು ಉನ್ನತಿ ಹೊಂದಿದುದನ್ನು ಗಮನಿಸಬೇಕು. ಗಂಗಾನದೀ ಕಣಿವೆ ಪ್ರದೇಶದಲ್ಲಿರುವ ಪವಿತ್ರ ನಗರಗಳು ಭಾರೀ ಹಾನಿಗೆ ಒಳಗಾಗಿದ್ದವು. ಪಾಂಡಿತ್ಯ, ಧರ್ಮಶ್ರದ್ಧೆ (ದೈವಭಕ್ತಿ) ಹಾಗೂ ಧಾರ್ಮಿಕ ಉತ್ಸಾಹಗಳು ಮೂಲೆಗುಂಪಾಗಿಹೋದಂತೆ ಕಂಡುಬರುತ್ತಿತ್ತು; ದಕ್ಷಿಣ ಭಾರತದಲ್ಲಿ

ಮತ್ತು ಒರಿಸ್ಸಾದಲ್ಲಿ ಭಿನ್ನವಾದ ವಾತಾವರಣವಿತ್ತು. ಅಲ್ಲಿ ಮುಸ್ಲಿಮ್ ಪ್ರಭಾವವು ಅಷ್ಟೇನೂ ತೀವ್ರವಾಗಿರಲಿಲ್ಲ. ಆದರೆ ಒಟ್ಟಿನಲ್ಲಿ ಹೇಳುವುದಾದರೆ, ಮುಸ್ಲಿಮ್ ದೊರೆಗಳ ಪ್ರಾಬಲ್ಯದಿಂದಾಗಿ, ಹಿಂದೂಸ್ಥಾನದಲ್ಲಿ ಹಿಂದೂಧರ್ಮವು ಬಹುಮಟ್ಟಿಗೆ ಅವನತ ಪರಿಸ್ಥಿತಿಯಲ್ಲಿತ್ತು. ಹಿಂದೂಗಳಿಗೆ ಇದನ್ನು ಸಹಿಸುವುದು ಕಷ್ಟವಾಗಿತ್ತು. ಹಿಂದೂ ದೇವಾಲಯಗಳಿಂದ ವಿಗ್ರಹಗಳನ್ನು ಸಂಗ್ರಹಿಸಿ ತಂದು, ರಾಜಧಾನಿಯ ಬೀದಿಗಳಲ್ಲಿ ದೈವಭಕ್ತರು ಅವುಗಳನ್ನು ತುಳಿದುಹಾಕುವಂತೆ ಬಲವಂತ ಮಾಡುವುದು ಅಂದಿನ ಮುಸ್ಲಿಮ್ ಸೇನಾಪತಿಗಳ ಸಂಪ್ರದಾಯವಾಗಿತ್ತು. ವಾಸ್ತವವಾಗಿ ಹೇಳುವುದಾದರೆ, ಹಿಂದೂಧರ್ಮವೆಂಬುದು ಮುಸ್ಲಿಮರಿಂದ ಪರಾಜಯಗೊಂಡ ಜನರ ಧರ್ಮವೆನಿಸಿದ್ದು, ತೀವ್ರ ಅಸಡ್ಡೆಗೆ ಒಳಗಾಗಿತ್ತು. ವಾರಾಣಸಿ, ಮಥುರಾ ಹಾಗೂ ಪ್ರಯಾಗ ಮೊದಲಾದ ಸಾಂಪ್ರದಾಯಿಕ ಕ್ಷೇತ್ರಗಳಲ್ಲಿ ಮಾತ್ರ ಹಿಂದೂ ಧರ್ಮವು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಹದಿಮೂರನೆಯ ಶತಮಾನದ ಪ್ರಾರಂಭದಿಂದ ಹದಿನಾಲ್ಕನೆಯ ಶತಮಾನದ ಮಧ್ಯಭಾಗದವರೆಗಿನ ಅವಧಿಯಲ್ಲಿ ಉತ್ತರಭಾರತದಲ್ಲಿ ಹಿಂದೂ ಧಾರ್ಮಿಕ ಇತಿಹಾಸದಲ್ಲಿ ನಾವು ಯಾವುದೇ ಮುಖ್ಯ ಹೆಸರನ್ನು ಕಾಣಲಾರೆವು. ವಾರಾಣಸಿಯ ಸಾಂಪ್ರದಾಯಿಕ ಕೇಂದ್ರದಲ್ಲಿ ಹಿಂದೂ ಧರ್ಮವನ್ನು ಪುನಃ ಸ್ಥಾಪಿಸಲು ಸಮರ್ಥನಾದವನೇ ಹದಿನಾಲ್ಕನೆಯ ಶತಮಾನದ ಮಧ್ಯಕಾಲದಲ್ಲಿದ್ದ ಮಹಾವ್ಯಕ್ತಿ ರಮಾನಂದ. ಆದರೆ, ರಮಾನಂದನು ಬೋಧಿಸಿದ್ದು ದೈವಸಂಕಲ್ಪಕ್ಕೆ ಶರಣಾಗುವ ವೈಯಕ್ತಿಕ ದೈವಸಾಕ್ಷಾತ್ಕಾರವನ್ನು – ಭಕ್ತಿಯ ಧರ್ಮವನ್ನು – ಎಂಬುದನ್ನು ನಾವು ನೆನಪಿನಲ್ಲಿ ಇರಿಸಿಕೊಳ್ಳಬೇಕು. ಅವನ ಈ ಬೋಧನೆಯ ಆ ಕಾಲದಲ್ಲಿ ಕೂಡಲೇ ಪ್ರಾಮುಖ್ಯವನ್ನು ಪಡೆಯಿತು. ವ್ರತಾಚರಣೆಗಳೊಂದಿಗೆ ಸಾಂಪ್ರದಾಯಿಕ ಧರ್ಮವನ್ನು ಆಚರಿಸುವುದು ಮುಸ್ಲಿಮರ ಆಡಳಿತಾವಧಿಯಲ್ಲಿ ಸುಲಭಸಾಧ್ಯವಾಗಿರಲಿಲ್ಲ. ಆದರೆ ಆಡಂಬರಗಳು ಹಿಂದೂ ಧರ್ಮದೊಡನೆ ರೂಢಿಯಾದ ಸಂಬಂಧವನ್ನು ಹೊಂದಿರುವುದರಿಂದ, ಬರಬರುತ್ತಾ ನಿಗೂಢ ಧರ್ಮ ಪಂಥವೊಂದು ಜನಪ್ರಿಯವಾಗತೊಡಗಿತು.

ಈ ಕಾಲದಲ್ಲಿ ಹಿಂದೂ ಧಾರ್ಮಿಕ ಪುನರುತ್ಥಾನಕ್ಕೆ ರಮಾನಂದನು ನೀಡಿದ ಕೊಡುಗೆಯ ಅತ್ಯಂತ ಮಹತ್ತ್ವದ್ದಾಗಿದೆ. ಇದು ಎರಡು ಪ್ರಮುಖ ಅಂಶಗಳನ್ನು ಹೊಂದಿವೆಯೆಂದು ಹೇಳಬಹುದು. ಸ್ವತಃ ಒಬ್ಬ ಬ್ರಾಹ್ಮಣನಾಗಿದ್ದರೂ ರಮಾನಂದನು ಜಾತಿಯ ಕಟ್ಟುಕಟ್ಟಳೆಗಳನ್ನು ಅನುಸರಿಸುತ್ತಿರಲಿಲ್ಲ. ಅವನ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬ ನೇಕಾರವಾಗಿದ್ದ (ಕಬೀರ); ಇನ್ನೊಬ್ಬ ಕ್ಷೌರಿಕನಾಗಿದ್ದ (ಸೇನ); ಮತ್ತೊಬ್ಬ ಮೋಚಿಯಾಗಿದ್ದ (ರವಿದಾಸ್). ಇಸ್ಲಾಮ್ ಸಂಪರ್ಕವನ್ನು ಹೊಂದಿದ್ದುದರ ಪರಿಣಾಮವಾಗಿಯೇ ಬ್ರಾಹ್ಮಣ ಧರ್ಮಗುರುವೊಬ್ಬ ಸರ್ವಧರ್ಮ ಸಹಿಷ್ಣುತೆಯ ಮನೋಭಾವವನ್ನು ಹೊಂದಲು ಸಾಧ್ಯವಾಯಿತು ಎಂಬುದರಲ್ಲಿ

ಅನುಮಾನವಿಲ್ಲ. ಇಸ್ಲಾಮ್‌ನಂತಹ ಪ್ರಬಲ ಧರ್ಮದೊಂದಿಗೆ ಹೊಂದಿರುವ ನಿರಂತರ ಸಂಪರ್ಕವು ಇತರ ಧರ್ಮಗಳಿಗೆ ಸೇರಿದ ಜನರ ಆಲೋಚನೆ ಮತ್ತು ಆಚರಣೆಗಳ ಮೇಲೆ ಕೂಡ ಪ್ರಭಾವವನ್ನು ಬೀರುವುದು ಅತ್ಯಂತ ಸಹಜವೇ ಆಗಿರುತ್ತದೆ. ಹೀಗಿರುವಾಗ, ಇಸ್ಲಾಮ್ ಧರ್ಮದ ಬೋಧನೆಗಳಿಂದ ಪ್ರಭಾವಿತನಾದ ರಮಾನಂದನು ತನ್ನ ಶಿಷ್ಯರುಗಳ ನಡುವೆ ಜಾತಿ ಭಿನ್ನತೆಯನ್ನು ತಳುಕುಹಾಕಲು ನಿರಾಕರಿಸಿದುದರಲ್ಲಿ ಆಶ್ಚರ್ಯವೇನೂ ಇಲ್ಲ.

ರಮಾನಂದನ ಅನಂತರ ಕಬೀರನಿಗೆ ಪ್ರಮುಖ ಸ್ಥಾನ ಸಲ್ಲುತ್ತದೆ. ಇಲ್ಲಿ ಕಬೀರನ ಬೋಧನೆಗಳನ್ನು ವಿವರಿಸುವ ಅಗತ್ಯವಿಲ್ಲ. ಹಿಂದೂ ಧಾರ್ಮಿಕ ಪುನರುತ್ಥಾನ ಕಾರ್ಯದಲ್ಲಿ ಮಹತ್ತ್ವವನ್ನು ತಿಳಿದರಷ್ಟೇ ಸಾಕು. ತನ್ನ ಜೀವಿತಾವಧಿಯಲ್ಲಿ ಅವನು ಪರಿಗಣನಾರ್ಹ ಕಾರ್ಯಚಟುವಟಿಕೆಗಳನ್ನು ನಡೆಸಿದ್ದಾರೆ. ಕಬೀರನ ಮೂಲಕವೇ ನಾನಕನೂ ರಮಾನಂದನ ಪ್ರಭಾವಕ್ಕೆ ಒಳಗಾಗಿ ಸಿಖ್ ಧರ್ಮಕ್ಕೆ ಅವನ ಹೊಸ ಸಂದೇಶವು ದೊರಕಿತು.

ಮುಂದೆ ಅತ್ಯಲ್ಪ ಕಾಲಾವಧಿಯಲ್ಲಿಯೇ ಹಿಂದೂ ಧರ್ಮ ಪುನರುತ್ಥಾನ ಕಾರ್ಯವನ್ನು ಕೈಗೊಂಡ ಇತರ ಅನೇಕ ಧಾರ್ಮಿಕ ಗುರುಗಳು ಕಾಣಿಸಿಕೊಂಡರು (ಉದಾಹರಣೆಗೆ, ನಾನಕ ೧೪೬೯, ವಲ್ಲಭಾಚಾರ್ಯ ೧೪೭೬ ಮತ್ತು ಚೈತನ್ಯ ೧೪೮೬). ಆದರೆ ಈ ಧಾರ್ಮಿಕ ಮಹಾವ್ಯಕ್ತಿಗಳ ಚಳುವಳಿಗಳು ಪ್ರಾರಂಭವಾದದ್ದು ನಮ್ಮ ಕಾಲಾವಧಿಯಲ್ಲಿಯೇ. ವಾಸ್ತವವಾಗಿ ಹೇಳುವುದಾದರೆ, ರಮಾನಂದ ಮತ್ತು ಅವನ ಶಿಷ್ಯರ ರಾಮಪಂಥವೇ ಹಿಂದೂ ಚಳವಳಿಯ ಜನಪ್ರಿಯತೆಗೆ ಕಾರಣ. ಅನಂತರ ಪ್ರಸಿದ್ಧವಾದ ತುಲಸೀದಾಸನ 'ರಾಮಚರಿತ ಮಾನಸ'ದಂತಹ ಭಕ್ತಿ ಸಾಹಿತ್ಯದಲ್ಲಿ ನಾವು ರಾಮಪಂಥದ ಮೂಲವನ್ನು ಗುರುತಿಸಬಹುದು. ಇದೇ ರೀತಿಯಲ್ಲಿ, ಕೃಷ್ಣ ಮತ್ತು ರಾಧೆ – ಇವರಿಗೆ ಸಂಬಂಧಪಟ್ಟ ಚೈತನ್ಯದ ಭಕ್ತಿ ಧರ್ಮವು ಬಂಗಾಳದಲ್ಲಿ ಸ್ವತಂತ್ರ ಮೂಲಗಳನ್ನು ಹೊಂದಿದ್ದರೂ, ಹಿಂದಿನ ಯೋಗಿಗಳು ಕೂಡ ರಾಧಾಕೃಷ್ಣರ ಭಕ್ತರಾಗಿದ್ದರೆಂಬುದು ನಮಗೆ ತಿಳಿದುಬಂದಿದೆ. ಚೈತನ್ಯ ಪ್ರಭುವನ್ನು ಮತ್ತೆ ಮತ್ತೆ ಸ್ತುತಿಸುವ 'ಶ್ರೀ ಕೃಷ್ಣ ಕೀರ್ತನ' ಕಾವ್ಯವನ್ನು ರಚಿಸಿದ ಚಂಡೀದಾಸನ್ನು ಹದಿನೈದನೆಯ ಶತಮಾನದ ಪ್ರಥಮಾರ್ಧ ಭಾಗಕ್ಕೆ ಸೇರಿದ್ದಾನೆ. ಮಹಾರಾಷ್ಟ್ರದಲ್ಲಿ ನಾಮದೇವನ (ಮರಣ, ೧೩೫೦) ಹೆಸರು ಈ ಅವಧಿಯನ್ನು ಬೆಳಗಿಸಿದೆ.

ದಕ್ಷಿಣ ಭಾರತಕ್ಕೆ ಸಂಬಂಧಿರುವಷ್ಟರ ಮಟ್ಟಿಗೆ ಹೇಳುವುದಾದರೆ, ಅವರ ಧಾರ್ಮಿಕ ಜೀವನಕ್ಕೆ ಯಾವುದೇ ಅಡೆತಡೆಗಳು ಎದುರಾಗಿಲ್ಲ. ವೈಷ್ಣವ ಹಾಗೂ ಶೈವವೆಂಬ ಎರಡೂ ಪಂಥಗಳು ಏಳಿಗೆ ಹೊಂದಿದವು. ಆದರೆ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾದಾಗ ಉಂಟಾದ ಪುನರುತ್ಥಾನವನ್ನು ಧಾರ್ಮಿಕ ಜೀವನದ

ಎಲ್ಲ ವಿಭಾಗಗಳಲ್ಲಿಯೂ ನಾವು ವಿಶೇಷವಾಗಿ ಗಮನಿಸಬಹುದು. ವಿಜಯನಗರ ರಾಜಮನೆತನದ ಸಂರಕ್ಷಕದೇವತೆಯೇ ವಿರೂಪಾಕ್ಷ. ತಾವು ಕಾಶೀ ವಿಲಾಸ ಕ್ರಿಯಾಶಕ್ತಿಯೆಂಬ ವಿಖ್ಯಾತ ಗುರುವಿನ ಶಿಷ್ಯರಾಗಿರುವುದಾಗಿ ಹರಿಹರ ಹಾಗೂ ಬುಕ್ಕ – ಇವರಿಬ್ಬರೂ ಹೇಳಿಕೊಂಡಿದ್ದಾರೆ. ಆದರೆ ನಮ್ಮ ನಿರ್ಣಾಯಕ ಕಾಲಾವಧಿಯ ಅಂತ್ಯದ ವೇಳೆಗೆ, ಇವರು ವೈಷ್ಣವ ಪಂಥದಲ್ಲಿಯೇ ಹೆಚ್ಚು ಹೆಚ್ಚು ಆಸಕ್ತಿ ತೋರಿಸತೊಡಗಿದರು. ಆದರೂ ಅದೇ ಕಾಲದಲ್ಲಿ ಶೈವಪಂಥಕ್ಕೆ ರಾಜಾಶ್ರಯ ನೀಡುವುದನ್ನು ಅವರು ಮುಂದುವರಿಸಿದರು. ವಿಜಯನಗರದ ಚಕ್ರವರ್ತಿಗಳು– ವಿಶೇಷವಾಗಿ ಕೃಷ್ಣದೇವರಾಯ– ತಮ್ಮ ಕುಲದೇವತೆಯಾದ ವಿರೂಪಾಕ್ಷನ ಮಹಾಭಕ್ತರಾಗಿದ್ದಾಗ ಕೂಡ ವಿಷ್ಣು ದೇವಾಲಯಗಳ ಪುನಃಸ್ಥಾಪನೆ ಮತ್ತು ಜೀರ್ಣೋದ್ಧಾರಗಳ ಕಾರ್ಯವನ್ನು ನಿಲ್ಲಿಸದೆ ಇರುವುದನ್ನು ನಾವು ವಿಶೇಷವಾಗಿ ಗಮನಿಸಬೇಕು. ಅವರು ಮುಕ್ತ ಹೃದಯದಿಂದ ಎಲ್ಲ ಧಾರ್ಮಿಕ ಪಂಥಗಳಿಗೂ ಆಶ್ರಯ ನೀಡಿದ್ದರು; ಸರ್ವಧರ್ಮಸಹಿಷ್ಣುಗಳಾಗಿದ್ದರು. ದಕ್ಷಿಣ ಭಾರತದ ವೈಷ್ಣವ ಪಂಥಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಒಟ್ಟಿನಲ್ಲಿ ಈ ಅವಧಿಯು ಅತ್ಯಂತ ಮುಖ್ಯವಾಗಿದೆ. ಮಹಾಆಚಾರ್ಯರಾದ ಶ್ರೀ ವೇದಾಂತ ದೇಶಿಕರು ಹಾಗೂ ಎರಡನೆಯ ದೇವರಾಯನ ಮೇಲೆ ಪ್ರಬಲ ಪ್ರಭಾವವನ್ನು ಬೀರಿದ ಆದಿವನ್ ಶಠಗೋಪಸ್ವಾಮಿ– ಇವರೂ ಇದೇ ಕಾಲಕ್ಕೆ ಸೇರಿದವರಾಗಿದ್ದಾರೆ.

ಹಿಂದೂ ಧಾರ್ಮಿಕ ಜೀವನದ ದೃಷ್ಟಿಯಿಂದ, ೧೩೩೦ ಮತ್ತು ೧೪೩೦ರ ಕಾಲಾವಧಿಯಲ್ಲಿ ಬಹಳಷ್ಟು ಕಾರ್ಯಚಟುವಟಿಕೆಗಳು ನಡೆದವು ಅಥವಾ ನಡೆಯ ತೊಡಗಿದವು ಎಂಬುದಕ್ಕೆ ಸಾಕಷ್ಟು ನಿದರ್ಶನಗಳು ಕಾಣಬರುತ್ತವೆ. ರಮಾನಂದ ಹಾಗೂ ಕಬೀರರಂತಹವರ ಹೊಸ ಪಂಥಗಳೂ ಚಳವಳಿಗಳೂ ಹಿಂದೂ ಧಾರ್ಮಿಕ ಜೀವನಕ್ಕೆ ಪುನಶ್ಚೈತನ್ಯವನ್ನು ನೀಡಿದವು. ಆ ಮೊದಲೇ ಪ್ರಾರಂಭವಾಗಿದ್ದಂತಹ ರಾಮಾನುಜರ ವೈಷ್ಣವ ಧರ್ಮ ಹಾಗೂ ಬಸವಣ್ಣನವರ ವೀರಶೈವ ಧರ್ಮಗಳಂತಹ ಪ್ರಮುಖ ಹಿಂದೂ ಧಾರ್ಮಿಕ ಚಳುವಳಿಗಳಿಗೂ ಹೆಚ್ಚು ಹೆಚ್ಚು ಪ್ರೋತ್ಸಾಹ ದೊರಕಿತು. ಬಹುಶಃ ಇದಕ್ಕಿಂತಲೂ ಮುಖ್ಯವಾದ ಇನ್ನೊಂದು ಅಂಶವೆಂದರೆ, ಆ ಕಾಲದ ಜನರಲ್ಲಿ ಬೆಳೆಯತೊಡಗಿದ ಹೊಸ ಮನೋಭಾವ. ಪರಿಣಾಮವಾಗಿ, ಪೂರ್ವಭಾರತದಲ್ಲಿ ಚೈತನ್ಯನ ಭಕ್ತಿ ಚಳವಳಿ ಪ್ರಾರಂಭವಾದ ಅನತಿ ಕಾಲದಲ್ಲಿಯೇ ಮಥುರಾ ಪ್ರದೇಶದಲ್ಲಿ ವಲ್ಲಭಾಚಾರ್ಯರ ಭಕ್ತಿಪಂಥ ಹಾಗೂ ಪಂಜಾಬಿನಲ್ಲಿ ಗುರುನಾನಕನ ಸಿಖ್ ಧರ್ಮಗಳು ಉದಯಿಸಿದವು.

ಆ ಕಾಲದಲ್ಲಿ ಸಣ್ಣಪುಟ್ಟ ಯುದ್ಧಗಳಲ್ಲಿ ಜಯಿಸುವ ಸಮುದಾಯಗಳು ಹಿಂದೂ ಧರ್ಮವು ಶಿಥಿಲಗೊಳ್ಳುವಂತೆ ಮಾಡುತ್ತಿದ್ದವು. ಆದರೂ ಹಿಂದೂ ಧರ್ಮಕ್ಕೆ ಎದುರಾಗುತ್ತಿರುವ ಆಪತ್ತುಗಳನ್ನು ತಡೆದು ಹಿಂದೂ ಸಮಾಜವನ್ನು

ಪ್ರಬಲಗೊಳಿಸುವ ಪ್ರಯತ್ನಗಳೂ ಆಗ ನಡೆದವು. ಆ ಕಾಲದಲ್ಲಿಯೇ ಉದಯವಾದುದೆನ್ನಲಾದ ಹೊಸ 'ಸ್ಮೃತಿ' ಸಾಹಿತ್ಯದಿಂದ ಈ ಅಂಶವು ಸ್ಪಷ್ಟವಾಗುತ್ತದೆ. ಮುಸ್ಲಿಮರ ನೇರ ಆಡಳಿತದಲ್ಲಿದ್ದ ಉತ್ತರ ಭಾರತದಲ್ಲಿ ಮಿಥಿಲಾ ನಗರವೆಂಬ ಚಿಕ್ಕರಾಜ್ಯವು ಸ್ಮೃತಿಗಳನ್ನು ಹೊಸದಾಗಿ ರಚಿಸುವ ಕಾರ್ಯವನ್ನು ಕೈಗೊಂಡಿತು. ಪೂರ್ವಭಾರತದಲ್ಲಿ ಹಿಂದೂ ಸಮಾಜವನ್ನು ರಕ್ಷಿಸುವ ಕಾರ್ಯದಲ್ಲಿ ಮಿಥಿಲಾ ನಗರವು ನೀಡಿದ ಸಹಕಾರವನ್ನು ಪಶ್ಚಿಮ ಭಾರತದಲ್ಲಿ ಮೇವಾಡದ ರಾಣಾಗಳು ಕೈಗೊಂಡ ಕಾರ್ಯಚಟುವಟಿಕೆಗಳಿಗೆ ಹೋಲಿಸಬಹುದು. ಮಿಥಿಲಾ ನಗರವು ಇತರ ಪ್ರದೇಶಗಳೊಂದಿಗೆ ಹೆಚ್ಚೇನೂ ಸಂಪರ್ಕ ಹೊಂದಿರಲಿಲ್ಲ. ಆದರೆ ಅಲ್ಲಿರುವ ಜನರು ದೀರ್ಘಕಾಲದಿಂದ ಪರಂಪರಾಗತವಾಗಿ ಬಂದ ವಿದ್ವತ್ತು ಮತ್ತು ಸಂಪ್ರದಾಯ ಬದ್ಧತೆಗಳನ್ನು ಹೊಂದಿದ್ದರು. ಹದಿಮೂರನೆಯ ಶತಮಾನದ ಅಂತ್ಯಭಾಗದಲ್ಲಿದ್ದ ದೇವಾದಿತ್ಯ ಎಂಬವನೇ ಮಿಥಿಲಾ ರಾಜ್ಯದ ಸ್ಥಾಪಕನೆಂಬುದಾಗಿ ಕಂಡುಬರುತ್ತದೆ. ಸಚಿವರುಗಳ ರಾಜ್ಯಭಾರದಲ್ಲಿ ಈ ಚಿಕ್ಕ ರಾಜ್ಯವು ಪೂರ್ವ ಭಾರತದಲ್ಲಿ ಹಿಂದೂ ಧರ್ಮದ ಪುನರುತ್ಥಾನಕ್ಕೆ ಸಂಬಂಧಪಟ್ಟ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿತು. ಮಿಥಿಲಾ ನಗರದ ಸಚಿವರ ಮನೆತನದಲ್ಲಿಯೇ ಅತ್ಯಂತ ಪ್ರಸಿದ್ಧನಾದ ಚಂಡೇಶ್ವರನು 'ಧರ್ಮಶಾಸ್ತ್ರ'ದ ಬಹುತೇಕ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ, ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಸಮಗ್ರ ಹಿಂದೂ ಸಾಮಾಜಿಕ ಜೀವನದ ಬಗೆಗಿನ ಅಧಿಕೃತ ಸಂಹಿತೆಯೆನ್ನಬಹುದಾದ ಅವನ 'ಸ್ಮೃತಿರತ್ನಾಕರ'ವು ಅತಿ ಮುಖ್ಯವಾಗಿದೆ ಕೃತಿಯಾಗಿದೆ. ವಿಶೇಷವಾಗಿ ಸಿವಿಲ್ ಹಾಗೂ ಕ್ರಿಮಿನಲ್ ನ್ಯಾಯಶಾಸ್ತ್ರಗಳ ಬಗೆಗೆ ತಿಳಿಸುವ ಈ ಗ್ರಂಥದ 'ವಿವಾದ'ವೆಂಬ ಭಾಗವನ್ನು ಇತ್ತೀಚಿನ ಇತಿಹಾಸಕಾರನೊಬ್ಬನು 'ಮಿಥಿಲಾದಲ್ಲಿ ನ್ಯಾಯಶಾಸ್ತ್ರವನ್ನು ಕುರಿತ ಅತ್ಯಂತ ಮುಖ್ಯವಾದ ಅಧಿಕೃತ ಕೃತಿ'ಯೆಂದು ಪರಿಗಣಿಸಿದ್ದಾನೆ.

ಬಂಗಾಳದಲ್ಲಿ ಕೂಡ, ಆ ಕಾಲದಲ್ಲಿ 'ಧರ್ಮಶಾಸ್ತ್ರ' ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇದೇ ಬಗೆಯ ಕಾರ್ಯಚಟುವಟಿಕೆಗಳು ನಡೆದವು. ಯಾಜ್ಞವಲ್ಕ್ಯ ಕೃತಿಗಳ ವ್ಯಾಖ್ಯಾನಕಾರನಾದ ಶೂಲಪಾಣಿ ಎಂಬವನು, ಮಧ್ಯಕಾಲೀನ ಭಾರತದಲ್ಲಿ 'ಧರ್ಮಶಾಸ್ತ್ರ'ದ ಬಗೆಗೆ ಅಧಿಕೃತ ಗ್ರಂಥಗಳನ್ನು ರಚಿಸಿದ ಬಂಗಾಳಿ ಲೇಖಕರಲ್ಲಿಯೇ ಅತಿ ಪ್ರಮುಖವೆನಿಸಿದ್ದಾನೆ. ಮುಸ್ಲಿಮ್ ದೊರೆಗಳ ನೇರ ಆಡಳಿತದಲ್ಲಿದ್ದ ಪ್ರದೇಶಗಳಲ್ಲಿ ಕೂಡ, ಹೊಸ ಚಿಂತನೆಯಿಂದ ಕೂಡಿದ ಈ ರೀತಿಯ ಕಾರ್ಯಗಳು ನಡೆಯುತ್ತಿದ್ದವು ಎಂದು ತೋರಿಸುವ ಕೆಲವು ನಿದರ್ಶನಗಳು ದೊರೆಯುತ್ತವೆ. ಜಮುನಾ ಪ್ರದೇಶದ ರಾಜ ಅಥವಾ ಜಮೀನ್ದಾರನಾದ ಮದನಪಾಲನು ಧರ್ಮಶಾಸ್ತ್ರವನ್ನು ಕುರಿತಂತೆ, ಅನೇಕ ಸ್ವಾರಸ್ಯಕರ ಕೃತಿಗಳನ್ನು ರಚಿಸಿದ್ದಾನೆ. ಅವನ ಕೃತಿಗಳಿಂದ ದೊರೆಯುವ ಆಂತರಿಕ ಸಾಕ್ಷ್ಯಗಳಿಂದ, ಅವನ ಹೆಚ್ಚಿನ ಕೃತಿಗಳು ೧೩೬೦ ಮತ್ತು ೧೩೯೦ರ

ನಡುವಣ ಕಾಲದಲ್ಲಿಯೇ ರಚಿತವಾದವು ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ. 'ಮದನಪಾರಿಜಾತ', 'ಸ್ಮೃತಿ ಮಹಾರ್ಣವ' ಹಾಗೂ 'ಸ್ಮೃತಿ ಕೌಮುದೀ' ಎಂಬ ಗ್ರಂಥಗಳು ಅವನು ಬರೆದುದೆನ್ನಲಾದ ಕೃತಿಗಳಲ್ಲಿ ಅತ್ಯಂತ ಮುಖ್ಯವಾಗಿವೆ. ಈ ಗ್ರಂಥಗಳನ್ನೆಲ್ಲ ಅವನೇ ಬರೆದನೇ ಅಥವಾ ಸಂಭಾವನೆಯನ್ನು ನೀಡಿ ಇತರ ವಿದ್ವಾಂಸರುಗಳಿಂದ ಬರೆಯಿಸಿದನೇ ಎಂಬುದೇನೂ ಪ್ರಸಕ್ತ ಸಂದರ್ಭದಲ್ಲಿ ಮುಖ್ಯವಾಗಿರುವುದಿಲ್ಲ. ಹದಿನಾಲ್ಕನೆಯ ಶತಮಾನದ ಮಧ್ಯಭಾಗದ ಅನಂತರ, ಯಮುನಾ ಕಣಿವೆ ಪ್ರದೇಶದಲ್ಲಿ ಕೂಡ, ಈ ರೀತಿಯ ಕಾರ್ಯ ಚಟುವಟಿಕೆಗಳು ಮುಂದುವರಿಯುತ್ತಿದ್ದವು ಎಂಬುದು ಅತಿಮುಖ್ಯ ಸಂಗತಿಯಾಗಿದೆ. ಮತಭ್ರಾಂತನಾಗಿದ್ದ ಫಿರೋಜ್ ತುಗಲಖ್‌ನ ಕಣ್ಣೆದುರಿನಲ್ಲಿಯೇ ಹಿಂದೂ ಸಾಮಾಜಿಕ ಸಂಘಟನೆಯ ಬಗ್ಗೆ ಚಿಂತನೆ ನಡೆಸಿ, ಅದನ್ನು ಪುನಶ್ಚೈತನ್ಯಗೊಳಿಸುವ ಪ್ರಯತ್ನ ನಡೆಯುತ್ತಿದ್ದವು ಎಂದು ಇದರಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ.

ನಿಜವಾಗಿ ಹೇಳುವುದಾದರೆ, ಇಂತಹ ಸಾಮಾಜಿಕ ಹಾಗೂ ಧಾರ್ಮಿಕ ಚಟುವಟಿಕೆಗಳು ಹೆಚ್ಚುಹೆಚ್ಚಾಗಿ ನಡೆದದ್ದು ವಿಜಯನಗರದಲ್ಲಿಯೇ. ವಿದ್ಯಾರಣ್ಯ, ಮಾಧವ ಮತ್ತು ಸಾಯಣರಂತಹ ವ್ಯಕ್ತಿಗಳಿಂದ ಹಿಂದೂ ಸಾಮಾಜಿಕ ಚಳವಳಿಗೆ ವಿಶೇಷ ಸಹಾಯ–ಸಹಕಾರಗಳು ದೊರೆತವು. ಮುಂದಿನ ತಲೆಮಾರುಗಳ ದೃಷ್ಟಿಯಿಂದಷ್ಟೇ ಅಲ್ಲದೆ, ನಮ್ಮ ಕಾಲದ ದೃಷ್ಟಿಯಿಂದ ಕೂಡ, ಅತ್ಯಂತ ಪ್ರಸಿದ್ಧರೂ, ಗಮನಾರ್ಹರೂ ಆದ ಈ ಮೂವರಲ್ಲಿ ಒಬ್ಬನಾದ ಸಾಯಣನು ವೇದಗಳ ವಿಶೇಷ ವ್ಯಾಖ್ಯಾನಕಾರನಾಗಿದ್ದ. ಸಾಯಣನ ವ್ಯಾಖ್ಯಾನಗಳ ನೆರವು ಇಲ್ಲದೆ ಹೋಗಿದ್ದರೆ, ಮುಂದಿನ ಯಾವ ತಲೆಮಾರುಗಳವರೂ ವೇದಗಳನ್ನು ಅರ್ಥಮಾಡಿಕೊಳ್ಳುವುದು ಖಂಡಿತವಾಗಿಯೂ ಸಾಧ್ಯವಾಗುತ್ತಿರಲಿಲ್ಲವೆಂದು ಮ್ಯಾಕ್ಸ್ ಮುಲ್ಲರ್ ಹೇಳಿದ್ದಾನೆ. ಸಾಯಣನ ಕಾಲದ ಹಿಂದೆ ಕೂಡ ವೇದಗಳ ಬಗೆಗೆ ವ್ಯಾಖ್ಯಾನ ಬರೆದಿರುವವರು ಇದ್ದುದರಲ್ಲಿ ಸಂಶಯವಿಲ್ಲ. ಆದರೆ ಅವರ ಎಲ್ಲ ವ್ಯಾಖ್ಯಾನಗಳೂ ಈಗ ಸಂಪೂರ್ಣವಾಗಿ ಉಳಿದಿಲ್ಲ. ಅವುಗಳ ಕೆಲವು ಭಾಗಗಳಷ್ಟೇ ಈಗ ಲಭ್ಯವಾಗಿವೆ. ಆದರೆ ಪಾಣಿನಿಯ 'ಅಷ್ಟಾಧ್ಯಾಯಿ'ಯ ಬಗೆಗಿನ ಸಾಯಣನ ವ್ಯಾಖ್ಯಾನವು ಹಿಂದಿನ ಎಲ್ಲ ವ್ಯಾಖ್ಯಾನಗಳನ್ನು ಮೀರಿದೆ. ವೇದಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ಅರ್ಥವ್ಯಾಖ್ಯಾನ ಮಾಡಲು ಸಾಯಣನು ಬಹಳ ಶ್ರಮ ಪಟ್ಟಿದ್ದಾನೆ. ಸಾಯಣನ ವ್ಯಾಖ್ಯಾನವಿಲ್ಲದೆ ಹೋಗಿದ್ದರೆ, ಇದು ಹತ್ತೊಂಬತ್ತನೆಯ ಶತಮಾನದಲ್ಲಿಯೂ ಮುಖ್ಯವೆನಿಸಿದ ಕೃತಿಯಾಗಿ ಉಳಿಯುತ್ತಿರಲಿಲ್ಲ.

ವೇದಗಳನ್ನು ಕುರಿತ ವ್ಯಾಖ್ಯಾನಗಳ ಮೂಲಕ ಪ್ರಾಚೀನ ಧರ್ಮಗ್ರಂಥಗಳ ಜ್ಞಾನವನ್ನು ಸಾಯಣನು ರಕ್ಷಿಸಿದಂತೆ, ಅವನ ಸಹೋದರನೂ(?) ಸ್ವತಃ ವಿಜಯನಗರದ ರಾಜನ ಸಚಿವನೂ ಆಗಿದ್ದ ಮಾಧವಾಚಾರ್ಯನು ಅಷ್ಟೇ

ಮುಖ್ಯವಾದ ಇನ್ನೊಂದು ಕೃತಿಯನ್ನು ರಚಿಸಿದನು. ಆ ಕಾಲದ ಅಗತ್ಯಗಳನ್ನು ಪೂರೈಸುವ ರೀತಿಯಲ್ಲಿ 'ಧರ್ಮಶಾಸ್ತ್ರ'ಗಳನ್ನು ಕುರಿತಂತೆ ಅವನು ರಚಿಸಿದ ವ್ಯಾಖ್ಯಾನವಾದ 'ಪರಾಶರ ಮಾಧವೀಯ'ವು ಅಧಿಕೃತ ಪಠ್ಯದ ಬಗೆಗಿನ ಒಂದು ಸಾಮಾನ್ಯವಾದ ವ್ಯಾಖ್ಯಾನ ಅಥವಾ ಸಂಹಿತೆಯಷ್ಟೇ ಆಗಿಲ್ಲ. 'ಪರಾಶರಸ್ಮೃತಿ'ಯ ವ್ಯಾಖ್ಯಾನದ ಸ್ವರೂಪವನ್ನು ಹೊಂದಿದ್ದರೂ ಅದು ಅತ್ಯಂತ ಸ್ವೋಪಜ್ಞವೆನಿಸಿದ್ದು, ಪರಾಶರನ ಮೂಲಕೃತಿಯಲ್ಲಿಯೂ ಕಂಡುಬರದ ಇತರ ಅನೇಕ ವಿಷಯಗಳ ಬಗ್ಗೆ ವಿಶ್ಲೇಷಣೆ ನಡೆಸುತ್ತದೆ. ಉದಾಹರಣೆಗೆ, ಮೂಲ ಕೃತಿಯಲ್ಲಿ ಯಾವ ಅಂಶವೂ ಸೂಕ್ಷ್ಮವಾಗಿ ಕೂಡ ಕಂಡುಬರದ 'ವ್ಯವಹಾರ'ವೆಂಬ ವಿಷಯಕ್ಕೇ ಮೀಸಲಾದ ಪರಾಶರ ಮಾಧವೀಯದ ಈ ವಿಭಾಗವು ಪರಿಗಣನಾರ್ಹವಾಗಿದೆ. ಅನೇಕ ರೀತಿಗಳಲ್ಲಿ, 'ಪರಾಶರ ಮಾಧವೀಯ'ವು ಆ ಕಾಲದ ಬದಲಾಗಿರುವ ಆರ್ಥಿಕ ಸ್ಥಿತಿಗತಿಗಳನ್ನು ವಿಶ್ಲೇಷಿಸುವುದರಿಂದ, ಅದು ಅನೇಕ ಆರ್ಥಿಕ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ನೀಡುತ್ತದೆ. ಉದಾಹರಣೆ, ಕಲೆ ಹಾಗೂ ಕರಕುಶಲ ಕಲೆಗಳಿಗೆ ಸಂಬಂಧಪಟ್ಟ ಉದ್ಯೋಗಗಳು/ವೃತ್ತಿಗಳು ಎಲ್ಲ ವರ್ಣದವರಿಗೂ ಮುಕ್ತವಾಗಿವೆಯೆಂದೂ, ಬ್ರಾಹ್ಮಣರೂ ಕೃಷಿ ಮತ್ತು ಇತರ ಲಾಭದಾಯಕ ವೃತ್ತಿ/ ಉದ್ಯೋಗಗಳಲ್ಲಿ ತೊಡಗಬಹುದೆಂದೂ ಮಾಧವಾಚಾರ್ಯನು ಪ್ರತಿಪಾದಿಸುತ್ತಾನೆ. 'ಧರ್ಮಶಾಸ್ತ್ರ'ದಂತೆ 'ಪರಾಶರ ಮಾಧವೀಯ'ವೂ ಶೂದ್ರರಿಗೆ ಬ್ರಾಹ್ಮಣರ ಮೇಲೆ ಇರುವ ಅವಲಂಬನವನ್ನು ಒತ್ತಿಹೇಳುತ್ತದೆ. ಅನೇಕ ಸಮಸ್ಯೆಗಳಿಗೆ ಅದು ನೀಡುವ ವಾಸ್ತವಿಕ ಪರಿಹಾರಮಾರ್ಗಗಳು ಗಮನಾರ್ಹವೆನಿಸಿವೆ. ಉದಾಹರಣೆಗೆ, ಗೃಹಸ್ಥನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಶೂದ್ರರಿಗೆ ಇರುವ ಹಕ್ಕುಗಳ ಬಗೆಗಿನ ಚರ್ಚೆ (೧,೫೩೭).

'ಧರ್ಮಶಾಸ್ತ್ರ' ಸಾಹಿತ್ಯವು, ಇಸ್ಲಾಮ್ ಸಂಪರ್ಕದ ಫಲವಾಗಿ ಉದ್ಭವಿಸಿದ ಸಮಸ್ಯೆಗಳನ್ನು ಪರಿಹರಿಸಲು ಅನುಸರಿಸಬಹುದಾದ ಪುನರ್ಹೊಂದಾಣಿಕೆಗಳು ಹಾಗೂ ಆ ಕಾಲದ ಸಾಮಾಜಿಕ ಕ್ರಾಂತಿಗಳನ್ನು ಅಡಗಿಸಲು ಕೈಗೊಳ್ಳಬಹುದಾದ ಮಾರ್ಗಗಳನ್ನು ವಿವರಿಸುವುದರಿಂದ, ಅದು ವಿಶೇಷ ಪ್ರಾಮುಖ್ಯವನ್ನು ಹೊಂದಿದೆ. 'ಧರ್ಮಶಾಸ್ತ್ರ'ವನ್ನು ಕುರಿತಂತೆ ಹೊಸ ಹೊಸ ವ್ಯಾಖ್ಯಾನಗಳನ್ನು ರಚಿಸಿದ ಪ್ರಮುಖ ಲೇಖಕರೆಲ್ಲ, ಚಂಡೀಶ್ವರ ಮತ್ತು ಮಾಧವರಂತೆ, ಸ್ವತಃ ರಾಜಕೀಯ ಜೀವನದಲ್ಲಿ ಉನ್ನತ ಸ್ಥಾನಮಾನಗಳನ್ನು ಹೊಂದಿದವರೇ ಆಗಿದ್ದರು ಎಂಬುದು ಸ್ವಾರಸ್ಯಕರ ವಿಷಯವಾಗಿದೆ. ಅಲ್ಲದೆ, ಬಹುತೇಕ ಪ್ರಮುಖ ವ್ಯಾಖ್ಯಾನ ಕೃತಿಗಳು ಸ್ವತಂತ್ರ ಸಾಮ್ರಾಜ್ಯಗಳ ರಾಜಧಾನಿ ನಗರಗಳಲ್ಲಿಯೇ ರಚಿತವಾಗಿವೆ.

ಈಗ ನಾವು ಕಲೆ ಮತ್ತು ಸಾಹಿತ್ಯಗಳ ಇನ್ನೊಂದು ಕ್ಷೇತ್ರದತ್ತ ಗಮನ ಹರಿಸಬಹುದು. ಇದು ರಾಷ್ಟ್ರೀಯ ಜೀವನದ ಆಧ್ಯಾತ್ಮಿಕ ಪುನರುಜ್ಜೀವನವನ್ನು

ಪ್ರತಿಬಿಂಬಿಸುತ್ತದೆ. ಈ ದೃಷ್ಟಿಯಿಂದ, ನಮ್ಮ ಪರಿಗಣನೆಯಲ್ಲಿರುವ ೧೩೩೦ ಹಾಗೂ ೧೪೩೦ರ ನಡುವಣ ಈ ನಿರ್ಣಾಯಕ ಕಾಲಾವಧಿಯ ಬಹಳ ವಿಶಿಷ್ಟವೆನಿಸಿದೆ. ಏಕೆಂದರೆ, ಈ ಕಾಲದಲ್ಲಿ, ಅನೇಕ ಪ್ರಾದೇಶಿಕ ಭಾಷೆಗಳು, ಸಂಸ್ಕೃತದ ಪ್ರಭಾವದಿಂದ, ಅತ್ಯುತ್ಕೃಷ್ಟ ಸಾಹಿತ್ಯ ಕೃತಿಗಳನ್ನು ರಚಿಸಬಹುದಾದಷ್ಟು ಬೆಳವಣಿಗೆಯನ್ನು ಹೊಂದಿವೆ. ಆದರೆ ಈ ಕಾಲದಲ್ಲಿ ಸಂಸ್ಕೃತವು ನಿರ್ಲಕ್ಷ್ಯಕ್ಕೆ ಒಳಗಾಗಿಲ್ಲ. ವಾಸ್ತವವಾಗಿ ಹೇಳುವುದಾದರೆ, ಈ ಕಾಲವು ಮುಂದಿನ ಸಂಸ್ಕೃತ ಸೃಜನಶೀಲ ಕಾರ್ಯಚಟುವಟಿಕೆಗಳ ಮಹಾಯುಗಗಳಲ್ಲಿ ಒಂದಾಗಿದೆ. ಅಷ್ಟೇ ಅಲ್ಲ, ಈ ಕಾಲದಲ್ಲಿ ಸಂಗೀತ, ವಾಸ್ತುಶಿಲ್ಪ ಹಾಗೂ ಚಿತ್ರಕಲೆ ಮೊದಲಾದವು ಕೂಡ ಗಮನಾರ್ಹವಾದ ಬೆಳವಣಿಗೆಯನ್ನು ಹೊಂದಿವೆ.

ಮೊದಲು ಸಂಸ್ಕೃತ ಸಾಹಿತ್ಯವನ್ನು ತೆಗೆದುಕೊಳ್ಳೋಣ. ಗುಪ್ತಯುಗಾನಂತರದ ಯಾವ ಕಾಲದಲ್ಲಿಯೂ ಈ ಕಾಲದಲ್ಲಿ ರಚಿತವಾದಂತಹ ಯಾವ ಶ್ರೇಷ್ಠ ಕಾವ್ಯಗಳೂ ಸಂಸ್ಕೃತದಲ್ಲಿ ರಚಿತವಾಗಿಲ್ಲ. ಗುಪ್ತಯುಗದಲ್ಲಿ ಕಂಡುಬರುವುದಕ್ಕಿಂತಲೂ ಹೆಚ್ಚಾಗಿ, ಮುಸ್ಲಿಮರ ನೇರ ಆಡಳಿತಕ್ಕೆ ಒಳಪಟ್ಟಿರುವ ಗಂಗಾನದಿ ಕಣಿವೆ ಪ್ರದೇಶಗಳ ಹೊರಗಿನ ಭಾಗಗಳನ್ನು ಬಿಟ್ಟುಳಿದಂತೆ, ಭೌಗೋಳಿಕವಾಗಿ ಹೇಳುವುದಾದರೆ, ಭಾರತದ ಆದ್ಯಂತ ಈ ಬಗೆಯ ಸೃಜನಶೀಲ ಸಾಹಿತ್ಯ ಚಟುವಟಿಕೆಗಳು ನಡೆಯುತ್ತಿದ್ದವು. ಕೆಲವು ಮುಖ್ಯ ಕೃತಿಕಾರರು ಹಾಗೂ ಅವರ ಕೃತಿಗಳನ್ನು ಮಾತ್ರ ಇಲ್ಲಿ ನಾವು ಪ್ರಸ್ತಾಪಿಸಬಹುದು. ಈ ವಿಷಯದಲ್ಲಿ ವಿಜಯನಗರ ರಾಜಾಸ್ಥಾನವು ಅಗ್ರಗಣ್ಯವಾಗಿತ್ತು. ವಿಜಯನಗರದ ಸಾಮ್ರಾಜ್ಯದ ರಾಜರುಗಳು ಹರಿಹರ ಹಾಗೂ ಬುಕ್ಕರಿಂದ ಪ್ರಾರಂಭವಾದ ಸಂಸ್ಕೃತ ಪಾಂಡಿತ್ಯ ಮತ್ತು ಸಂಪ್ರದಾಯಗಳಿಗೆ ಉದಾರ ರಾಜಾಶ್ರಯವನ್ನು ನೀಡಿದ್ದರು. ಈ ಕಾಲದಲ್ಲಿ ವಿಜಯನಗರದಲ್ಲಿ ಸಮಾಜದ ಉನ್ನತ ವರ್ಗಕ್ಕೆ ಸೇರಿದ ವಿದ್ವಾಂಸರು ಸಂಸ್ಕೃತ ಭಾಷೆಯನ್ನು ವೇಗವಾಗಿ ಹೇಗೆ ಅಭಿವೃದ್ಧಿಪಡಿಸಿದರು ಎಂಬುದಕ್ಕೆ ಜ್ವಲಂತ ಉದಾಹರಣೆಗೆ ಮುಂದಿನ ಕೆಲವು ಕೃತಿಗಳನ್ನು ಹೆಸರಿಸಬಹುದು: ವಿದ್ಯಾರಣ್ಯರ 'ಶಂಕರ ವಿಜಯ', ಸಾಳುವ ನರಸಿಂಹನ 'ರಾಮಾಭ್ಯುದಯ', ಮಾಧವನ 'ನರಕಾಸುರ ವಿಜಯ', ರಾಣಿ ಗಂಗಾದೇವಿಯ 'ಮಧುರಾವಿಜಯಮ್' ಮತ್ತು ವಿಜಯನಗರದ ಇನ್ನೊಬ್ಬಳು ರಾಣಿ ತಿರುಮಲಾಂಬಾ ರಚಿಸಿದ 'ವರದಾಂಬಿಕಾ ಪರಿಣಯಮ್'. ಈ ಕಾಲದ ಕಲ್ಲಿಕೋಟೆಯ ಝಾಮೊರಿನ್ನರು ಕೂಡ ಸುಪ್ರಸಿದ್ಧ ಸಂಸ್ಕೃತ ಕವಿಗಳಾಗಿದ್ದರು. ಝಾಮೊರಿನ್ನರಲ್ಲಿ ಒಬ್ಬ ರಾಜನ ಆಸ್ಥಾನದಲ್ಲಿ, ಪ್ರವೃದ್ಧಮಾನಕ್ಕೆ ಬಂದ ಉದ್ದಂಡ ಎಂಬವನು 'ಕೋಕಿಲಾ ಸಂದೇಶ'ವನ್ನು ರಚಿಸಿದ. ಸಂಸ್ಕೃತ ಸಾಹಿತ್ಯದ ಬಹುತೇಕ ಎಲ್ಲ ಪ್ರಕಾರಗಳಲ್ಲಿಯೂ ಅನೇಕ ಅಸಾಮಾನ್ಯ ಕೃತಿಗಳನ್ನು ರಚಿಸಿದ ಬಹುಶ್ರುತ ಪಂಡಿತನಾದ ವಾಮನ ಭಟ್ಟನ ಹೆಸರನ್ನು ಇಲ್ಲಿ ಉಲ್ಲೇಖಿಸಬಹುದು.

ವಾರಂಗಲ್ ಹಾಗೂ ಹೊಯ್ಸಳ ರಾಜಮನೆತನದವರು, ನಮ್ಮ ಕಾಲಾವಧಿಯು ಪ್ರಾರಂಭವಾಗುವ ವೇಳೆಗೇ ಅಳಿದುಹೋಗಿದ್ದರೂ, ಅವರು ತಮ್ಮ ಹಿಂದೆ ಪ್ರತಾಪರುದ್ರ ಮತ್ತು ಮೂರನೆಯ ಬಲ್ಲಾಳರ ಶ್ರೀಮಂತ ಸಂಪ್ರದಾಯವನ್ನು ಬಿಟ್ಟುಹೋಗಿದ್ದರು. ಉತ್ತರ ಭಾರತದ ರಜಪೂತ ರಾಜರುಗಳ ಆಸ್ಥಾನದಲ್ಲಿ ಸಂಸ್ಕೃತ ವಿದ್ವತ್ತು ಹಾಗೂ ಕಾವ್ಯಗಳಿಗೆ ಪ್ರೋತ್ಸಾಹ ನೀಡುವ ಸಂಪ್ರದಾಯವಿತ್ತು. ನಮ್ಮ ಕಾಲಾವಧಿಯ ಪ್ರಾರಂಭ ಕಾಲದಲ್ಲಿದ್ದಂತಹ 'ಹಮ್ಮೀರ ಕಾವ್ಯ'ವನ್ನು ನಾವು ಗಮನಿಸಬಹುದು. ಇದು ಅಲಾಉದ್ದೀನ್ ಖಿಲ್ಜಿಯೊಂದಿಗೆ ರಣಥಂಬೋರಿನ ಚೌಹಾನ್ ರಾಜನಾದ ಹಮ್ಮೀರನು ನಡೆಸಿದ ಯುದ್ಧಗಳ ವಿವರಣೆಗಳನ್ನು ನೀಡುವ ಐತಿಹಾಸಿಕ ಕಾವ್ಯವಾಗಿದೆ. ಮಹಾರಾಣಾ ಕುಂಭನು ಕೂಡ ಪರಿಗಣನಾರ್ಹ ಪ್ರಾಮುಖ್ಯವನ್ನು ಹೊಂದಿದ ಲೇಖಕನಾಗಿದ್ದ. ಅವನು 'ಗೀತಗೋವಿಂದ'ವನ್ನು ಕುರಿತು ರಚಿಸಿದ 'ರಸಿಕಪ್ರಿಯ'ವೆಂಬ ವ್ಯಾಖ್ಯಾನವನ್ನು ಈಗ ಕೂಡ ಪರಿಗಣನಾರ್ಹವಾದ ಶ್ರೇಷ್ಠಕೃತಿಯೆಂದು ಭಾವಿಸಲಾಗಿದೆ.

ಈ ಕಾಲದಲ್ಲಿ ನಡೆದ ಧಾರ್ಮಿಕ ಪುನರುತ್ಥಾನದ ಫಲವಾಗಿ ಅನೇಕ ರೂಪಕಗಳೂ ನಾಟಕಗಳೂ ರಚಿತವಾದವು. ಚೈತನ್ಯ ಪಂಥಕ್ಕೆ ಸೇರಿದ ಬಹುಸಂಖ್ಯಾತ ಸಾಹಿತ್ಯ ಕೃತಿಗಳು ಅನಂತರದ ಕಾಲಾವಧಿಗೆ ಸೇರಿವೆಯಾದರೂ, ಈ ಕಾಲಾವಧಿಗೆ ಸೇರಿದ ಭಕ್ತಿ ಹಾಗೂ 'ಸ್ತೋತ್ರ' ಕಾವ್ಯಗಳನ್ನು, ವಿಶೇಷವಾಗಿ ವೇದಾಂತದೇಶಿಕರ ಕೃತಿಯನ್ನು ನಾವಿಲ್ಲಿ ಉಲ್ಲೇಖಿಸಲೇಬೇಕು. ಈ ಅವಧಿಯಲ್ಲಿ ಸಂಗ್ರಹಿಸಲಾದ ಕೃತಿಗಳಲ್ಲಿ ಅತ್ಯಂತ ಮುಖ್ಯವಾದುದೇ 'ಸಾರಂಗಧರ ಪದ್ಧತಿ' (೧೩೬೩). ೧೬೩ ವಿಭಾಗಗಳಲ್ಲಿ ೪೬೮೯ಕ್ಕಿಂತ ಹೆಚ್ಚು ಶ್ಲೋಕಗಳನ್ನೂ ಹೊಂದಿರುವ ೩೦೦ ಮಂದಿ ಕವಿಗಳ ಕೃತಿಗಳಿಂದ ಕೂಡಿರುವ ಈ ಅಮೂಲ್ಯ ಗ್ರಂಥದಿಂದ, ಸಂಸ್ಕೃತ ಸಾಹಿತ್ಯದ ವೈವಿಧ್ಯ ಮತ್ತು ಶ್ರೀಮಂತಿಕೆಗಳನ್ನು ತಿಳಿಯಲು ನಮಗೆ ಸಾಧ್ಯವಾಗುತ್ತದೆ.

ವಿಮರ್ಶೆ ಹಾಗೂ ವ್ಯಾಖ್ಯಾನ ರೂಪದ ಕೃತಿಗಳು ಹೆಚ್ಚು ಹೆಚ್ಚು ರಚಿತವಾದ ಈ ಕಾಲದಲ್ಲಿ ಇನ್ನೊಬ್ಬ ಮುಖ್ಯ ಕೃತಿಕಾರನೇ ಮಲ್ಲಿನಾಥ. ಇವನನ್ನು ಮಹಾವ್ಯಾಖ್ಯಾನಕಾರನೆಂದು ಪರಿಗಣಿಸಬಹುದು. 'ಅಲಂಕಾರಶಾಸ್ತ್ರ' ಗ್ರಂಥಗಳಲ್ಲಿ ಅತ್ಯುತ್ಕೃಷ್ಟವಾದುದೇ 'ಪ್ರತಾಪರುದ್ರ ಯಶೋಭೂಷಣ'. ನಾಟಕ ಹಾಗೂ ಇತರ ಕಲಾಕ್ಷೇತ್ರಗಳಿಗೆ ಸಂಬಂಧಿಸಿದ ಕೃತಿಗಳಲ್ಲಿ ಸಿಂಹಭೂಪಾಲನ 'ರಸಾರ್ಣವ ಸುಧಾಕರ'ವು ಸುಪ್ರಸಿದ್ಧವಾಗಿದೆ.

ಈ ಕಾಲದಲ್ಲಿ ನಡೆದ ಸಂಸ್ಕೃತ ಸಾಹಿತ್ಯ ಕೃತಿ ರಚನಾ ಚಟುವಟಿಕೆಯು ನಿಜವಾಗಿಯೂ ಆಶ್ಚರ್ಯಕರವಾಗಿದೆ. ಕಾವ್ಯ, ಭಕ್ತಿ ಕಾವ್ಯ, ನೀತಿಕಾವ್ಯ, ನಾಟಕ, ಅಲಂಕಾರಶಾಸ್ತ್ರ ಮತ್ತು 'ಧರ್ಮಶಾಸ್ತ್ರ'ವೇ ಮುಂತಾದ ಪ್ರತಿಯೊಂದು ಪ್ರಕಾರಗಳಲ್ಲಿಯೂ, ಈ ಹಿಂದೆ ಯಾವ ಕಾಲದಲ್ಲಿಯೂ ರಚಿತವಾಗಿರದಷ್ಟು

ಹೆಚ್ಚಿನ ಸಂಖ್ಯೆಯ ಕೃತಿಗಳು ರಚಿತವಾದವು. ವೇದಗಳ ಮೇಲಿನ ಸಾಯಣನ ವ್ಯಾಖ್ಯಾನ ಅಥವಾ ಮಾಧವನ 'ಪರಾಶರ ಮಾಧವೀಯ' ಮತ್ತು ಮಲ್ಲಿನಾಥನ ವ್ಯಾಖ್ಯಾನಗ್ರಂಥಗಳಂತಹ ಅತ್ಯುತ್ಕೃಷ್ಟ ಕೃತಿಗಳನ್ನು ಹೊರತುಪಡಿಸಿದ್ದಾಗ್ಯೂ, ಉಳಿದ ಕೃತಿಗಳ ಸಾಮಾನ್ಯ ಗುಣಮಟ್ಟ ಕೂಡ, ಹಿಂದಿನ ಕೃತಿಗಳಿಗಿಂತ ಕಡಮೆಯೇನಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಹೀಗೆ ಹಿಂದೂ ರಾಷ್ಟ್ರೀಯ ಪುನರುತ್ಥಾನವನ್ನು ಸಾಬೀತುಪಡಿಸುವ ರೀತಿಯಲ್ಲಿ ೧೩೩೦ ಹಾಗೂ ೧೩೫೦ರ ನಡುವಣ ಅವಧಿಯಲ್ಲಿ ಸಂಸ್ಕೃತ ಗ್ರಂಥರಚನೆಗೆ ಸಂಬಂಧಿಸಿದ ಚಟುವಟಿಕೆಗಳು ವಿಪುಲವಾಗಿ ನಡೆದವು.

ಈ ಕಾಲದಲ್ಲಿ ನಡೆದ ಸಂಸ್ಕೃತದ ಮೂಲಕವಷ್ಟೇ ಹಿಂದೂ ಪುನರುತ್ಥಾನಕ್ಕೆ ಸಂಬಂಧಿಸಿದ ಕಾರ್ಯಚಟುವಟಿಕೆಗಳು ನಡೆದುವೆಂದು ಭಾವಿಸಬಾರದು. ಹಿಂದಿನ ಶತಮಾನಗಳಲ್ಲಿ ಕೇವಲ ಭಾಷೆಗಳಾಗಿದ್ದು, ಸಾಹಿತ್ಯ ರಚನಾ ಸಾಮರ್ಥ್ಯವುಳ್ಳ ಭಾಷೆಗಳಾಗಿ ನಿಧಾನವಾಗಿ ಅಭಿವೃದ್ಧಿಹೊಂದುತ್ತಿದ್ದ ಭಾರತದ ಅನೇಕ ಪ್ರಾದೇಶಿಕ ಭಾಷೆಗಳೂ ಈ ಕಾಲದಲ್ಲಿ ದೇಶಾದ್ಯಂತ ಗಮನಾರ್ಹವಾದ ರೀತಿಯ ಪ್ರಗತಿಯನ್ನು ಸಾಧಿಸಿದವು. ಕನಿಷ್ಠಪಕ್ಷ ಕ್ರಿ.ಪೂ. ಒಂದನೆಯ ಶತಮಾನದಷ್ಟು ಪ್ರಾಚೀನ ಸಾಹಿತ್ಯ ಇತಿಹಾಸವನ್ನು ಹೊಂದಿದ್ದ ಏಕಮಾತ್ರ ತಮಿಳು ಭಾಷೆಯನ್ನು ಬಿಟ್ಟುಳಿದಂತೆ, ಇತರ ಎಲ್ಲ ಭಾರತೀಯ ಭಾಷೆಗಳೂ ಸಾಹಿತ್ಯ ರಚನಾ ಚಟುವಟಿಕೆಗಳಲ್ಲಿ ತೊಡಗಿದ್ದು, ಹಾಗೂ ಉತ್ಕೃಷ್ಟ ಸೃಜನಶೀಲ ಕಾರ್ಯಚಟುವಟಿಕೆಗಳ ಸಾಧನಗಳಾಗಿ ರೂಪುಗೊಂಡದ್ದು ಕೂಡ ೧೩೩೦ ಮತ್ತು ೧೫೩೦ರ ನಡುವಣ ನಿರ್ಣಾಯಕ ಕಾಲಾವಧಿಯಲ್ಲಿಯೇ.

ಮೌರ್ಯರ ಕಾಲದಲ್ಲಿ ಮಾಗಧಿ ಪ್ರಾಂತಭಾಷೆ ಹಾಗೂ ಸಂಸ್ಕೃತ ಭಾಷೆಗಳ ನಡುವಣ ಪ್ರತಿಸ್ಪರ್ಧೆಯೇ ಸಾಂಸ್ಕೃತಿಕ ಸಂಘರ್ಷದ ಮೂಲಕಾರಣವಾಗಿತ್ತು ಮತ್ತು ಸಂಸ್ಕೃತದ ವಿಜಯದಿಂದ ಭಾರತದಲ್ಲಿ ಸಾಂಸ್ಕೃತಿಕ ಒಗ್ಗಟ್ಟು ಮೂಡಿ, ಭಾರತೀಯ ಸಂಸ್ಕೃತಿಯು ತನ್ನ ವಿಶೇಷ ಗುಣಲಕ್ಷಣಗಳಿಂದ ವಿಶ್ವದ ಗಮನವನ್ನು ಸೆಳೆಯಲು ಸಾಧ್ಯವಾಯಿತು ಎಂದು ನಾವು ಈಗಾಗಲೇ ನೋಡಿದ್ದೇವೆ. ಉತ್ತರ ಭಾರತದಲ್ಲಿ ಹಿಂದೀ, ಬಂಗಾಳಿ, ಮರಾಠಿ, ಗುಜರಾತಿ ಮುಂತಾದ ಭಾಷೆಗಳೂ ದಕ್ಷಿಣ ಭಾರತದಲ್ಲಿ ಪ್ರಮುಖ ದ್ರಾವಿಡ ಭಾಷೆಗಳೂ ಬೇರೆ ಬೇರೆ ನೆಲೆಗಳಲ್ಲಿ ಅಭಿವೃದ್ಧಿಹೊಂದಿದವು. ಮೊದಲನೆಯದಾಗಿ, ಅವು ಸರ್ವೋತ್ಕೃಷ್ಟ ಭಾಷೆಗಳಾಗಿರಲಿಲ್ಲ. ಯಾವುದೇ ಸಾಮ್ರಾಜ್ಯವೂ ಅಧಿಕೃತ ಭಾಷೆಗಳೆಂದು ಘೋಷಿಸಿದ ಭಾಷೆಗಳಾಗಿರಲಿಲ್ಲ ಅಥವಾ ಅಖಿಲ ಭಾರತ ಮಾನ್ಯತೆಯನ್ನು ಹೊಂದಿದಂತಹ ಪೂಜ್ಯ (ಪವಿತ್ರ) ಭಾಷೆಗಳೂ ಆಗಿರಲಿಲ್ಲ. ವಾಸ್ತವವಾಗಿ ಹೇಳುವುದಾದರೆ, ಯಾವುದೇ ಪ್ರಾದೇಶಿಕ ಭಾಷೆಗಳೂ ಸಂಸ್ಕೃತದ ಪ್ರತಿಸ್ಪರ್ಧಿ ಭಾಷೆಗಳಾಗಿರಲಿಲ್ಲ. ಅಷ್ಟೇ ಅಲ್ಲ, ಸಾಹಿತ್ಯ ಕೃತಿ ರಚನೆಯ

ಉಪಕರಣವಾಗಿ ಕೂಡ, ಅವು ಸಂಸ್ಕೃತದ ಸಂರಕ್ಷಣೆ ಅಥವಾ ಆಶ್ರಯದಲ್ಲಿಯೇ ಇದ್ದವು. ಸಂಸ್ಕೃತದ ಮಹಾಕೃತಿಗಳನ್ನು ಅನುವಾದಿಸಿ, ರೂಪಾಂತರಿಸಿ ಜನಪ್ರಿಯಗೊಳಿಸುವುದೇ ಆ ಕಾಲದ ಪ್ರಾದೇಶಿಕ ಭಾಷೆಗಳಲ್ಲಿ ನಡೆದ ಅಪರಿಮಿತ ಕಾರ್ಯಚಟುವಟಿಕೆಗಳ ಸಾಮಾನ್ಯ ಗುಣಲಕ್ಷಣವಾಗಿತ್ತು. ಸ್ಪಷ್ಟವಾಗಿ ಹೇಳುವುದಾದರೆ, ಈ ಕಾಲದಲ್ಲಿ ಭಾರತದ ಆದ್ಯಂತ ನಡೆದ 'ರಾಮಾಯಣ', 'ಮಹಾಭಾರತ' ಹಾಗೂ ಪುರಾಣಗಳ ಸಂಕ್ಷಿಪ್ತ ಭಾಷಾಂತರಗಳೇ ಇಂದಿನ ಹಿಂದೂ ಸಂಸ್ಕೃತಿಗೆ ಸುಭದ್ರವಾದ ಅಡಿಪಾಯವನ್ನು ಹಾಕಿಕೊಟ್ಟವೆ. ಎಲ್ಲೆಡೆ ಚದುರಿಹೋಗಿರುವ ಹಿಂದೂಗಳಿಗೆ ಪರಂಪರಾಗತವಾದ ಧಾರ್ಮಿಕ ಹಾಗೂ ಬೌದ್ಧಿಕ ವಿಚಾರಗಳು, ಈ ಪ್ರಯತ್ನದಿಂದಾಗಿ ಲಭ್ಯವಾದುದರಿಂದ ಇದು ಕೂಡ ಹಿಂದೂ ಪುನರುತ್ಥಾನಕ್ಕೆ ಸಂಬಂಧಿಸಿದ ಒಂದು ಮುಖ್ಯಾಂಶವಾಗಿದೆ. ಮುಸ್ಲಿಮರ ಆಡಳಿತಕ್ಕೆ ಒಳಪಟ್ಟ ಪ್ರದೇಶಗಳ ಭಾಷೆಯಾದ ಹಿಂದೀಯಲ್ಲಿ ಇಂತಹ ಅಭಿವೃದ್ಧಿ ಉಂಟಾಗುವುದು ಕೊಂಚ ತಡವಾಯಿತು. ಆದರೆ ಮುಂದೆ ಅನತಿ ಕಾಲದಲ್ಲಿಯೇ ರಚಿತವಾದ ತುಲಸೀದಾಸನ 'ರಾಮಚರಿತ ಮಾನಸ'ವು ಉತ್ತರ ಭಾರತದ ಭಾಷೆ, ನೀತಿಶಾಸ್ತ್ರ ಹಾಗೂ ನೈತಿಕ ವಿಚಾರಗಳ ಮೇಲೆ ಅತ್ಯಂತ ಗಾಢವಾದ ಪ್ರಭಾವವನ್ನು ಬೀರಿತು.

ಬಂಗಾಳಿಯಲ್ಲಂತೂ ಇದೇ ಮೊತ್ತಮೊದಲ ಮಹಾ ಸೃಜನಶೀಲ ಯುಗವಾಗಿದೆ. ಕೃತ್ತಿವಾಸ, ಕವೀಂದ್ರ ಮತ್ತು ಚಂಡೀದಾಸರು ಈ ಕಾಲಕ್ಕೇ ಸೇರಿದ್ದಾರೆ. ಕೃತ್ತಿವಾಸನ 'ರಾಮಾಯಣ' ಹಾಗೂ ಚಂಡೀದಾಸನ ಭಾವಗೀತೆಗಳು ಒಂದು ರೀತಿಯಲ್ಲಿ ಬಂಗಾಳಿ ಸಾಂಸ್ಕೃತಿಕ ಜೀವನದ ಬುನಾದಿಯನ್ನು ಹಾಕಿದವು ಎಂದು ಭಾವಿಸಬಹುದು. ಮೈಥಿಲಿಗಳೂ ಬಂಗಾಳಿಗಳೂ ಮಹಾಕವಿಯೆಂದು ಭಾವಿಸಿದಂತಹ ವಿದ್ಯಾಪತಿಯೂ ೧೩೫೦ ಮತ್ತು ೧೫೫೦ರ ನಡುವಣ ಅವಧಿಯಲ್ಲಿಯೇ ಜೀವಿಸಿದ್ದ. ಮಹಾವಿದ್ವಾಂಸನೂ ಅನೇಕ ಸಂಸ್ಕೃತ ವಿದ್ವತ್ ಗ್ರಂಥಗಳ ಲೇಖಕನೂ ಆದ ಅವನನ್ನು ಭಾವಗೀತೆಗಳನ್ನು ರಚಿಸಿದ ಭಾರತದ ಸುಪ್ರಸಿದ್ಧ ಕವಿಗಳಲ್ಲಿ ಒಬ್ಬನೆಂದು ಗೌರವಿಸಲಾಗುತ್ತಿದೆ. ರಾಧೆ ಮತ್ತು ಕೃಷ್ಣರ ಅಮರಪ್ರೇಮವೇ ವಿದ್ಯಾಪತಿಯ ಭಾವಗೀತೆಗಳ ಪ್ರಮುಖ ವಸ್ತುವಾಗಿದೆ. ವಿದ್ಯಾಪತಿಯನ್ನು ಚಂಡೀದಾಸನಂತಹ ಒಬ್ಬ ಭಕ್ತಕವಿಯೆಂದು ಪರಿಗಣಿಸಲು ಸಾಧ್ಯವಾಗದಿದ್ದರೂ ಅವನ ಗೀತೆಗಳು, ಆ ಕಾಲದಲ್ಲಿ ಭಾರತದಲ್ಲಿ ನಡೆಯುತ್ತಿದ್ದ ಧಾರ್ಮಿಕ ಪುನರುತ್ಥಾನ ಮತ್ತು ಸೃಜನಶೀಲ ಸಾಹಿತ್ಯ ರಚನೆ – ಇವುಗಳ ನಡುವಣ ಸಂಬಂಧವನ್ನು ಸ್ಪಷ್ಟವಾಗಿ ತೋರಿಸುತ್ತವೆ ಎಂಬುದು ಗಮನಾರ್ಹವಾಗಿದೆ.

ಗುಜರಾತಿನ ಮಹಾಕವಿಯಾದ (೧೫೧೫–೧೫೮೧) ನರಸಿಂಹ ಮೆಹ್ತಾನ ಕೃತಿಗಳಲ್ಲಿಯೂ ಧರ್ಮ ಮತ್ತು ಹೊಸ ಸಾಹಿತ್ಯಗಳ ನಡುವೆ ಇರುವ ಇದೇ ಬಗೆಯ ಸಂಬಂಧವನ್ನು ನಾವು ಗುರುತಿಸಬಹುದು. 'ಜ್ಞಾನಿ' ಕವಿಯೂ 'ಭಕ್ತಿ'

ಕವಿಯೂ ಆದ ಅವನ ಕೃತಿಗಳು ಆ ಕಾಲದ ಧಾರ್ಮಿಕ ಪುನರುತ್ಥಾನವನ್ನು ಸಂಪೂರ್ಣವಾಗಿ ಪ್ರತಿನಿಧಿಸುತ್ತವೆ. ಅಷ್ಟೇ ಅಲ್ಲ, ಅವನ ಎಲ್ಲ ಕೃತಿಗಳಲ್ಲಿಯೂ ಧಾರ್ಮಿಕ ಪುನರುಜ್ಜೀವನವು ಅಭಿವ್ಯಕ್ತವಾಗಿದೆ. ಭಾಲನನ 'ಭಾಗವತ ಪುರಾಣ'ದ ಭಾಷಾಂತರದಲ್ಲಿಯೂ ಇದೇ ಬಗೆಯ ಉದ್ದೇಶವನ್ನು ನಾವು ಗುರುತಿಸಬಹುದು. ಒಟ್ಟಿನಲ್ಲಿ ಹೇಳುವುದಾದರೆ, ಪ್ರಾದೇಶಿಕ ಭಾಷೆಗಳಲ್ಲಿ ಕೃತಿರಚನೆ ಮಾಡುವುದರ ಮೂಲಕ ಭಾರತದ ಆಧ್ಯಾತ್ಮಿಕ ಪರಂಪರೆಯನ್ನು ಜನಪ್ರಿಯಗೊಳಿಸುವುದು ಆ ಕಾಲದ ಗ್ರಂಥಕರ್ತರ ಉದ್ದೇಶವಾಗಿತ್ತು. ಮರಾಠಿಯ ನಾಮದೇವನೂ (ಮರಣ, ೧೩೫೦) ಇದೇ ಕಾಲಕ್ಕೆ ಸೇರಿದ್ದಾನೆ.

ದಕ್ಷಿಣ ಭಾರತದಲ್ಲಿ ಕೂಡ, ಉತ್ತರ ಭಾರತದ ಭಾಷೆಗಳಿಗೆ ಸಂಬಂಧಿಸಿದಂತೆ ನಾವು ಗಮನಿಸಿದ ಗುಣಲಕ್ಷಣಗಳು ಕಂಡುಬರುತ್ತವೆ. ಉದಾಹರಣೆಗೆ, ಮಹಾಕಾವ್ಯಗಳು ಮತ್ತು ಪುರಾಣಗಳ ಅನುವಾದ ಹಾಗೂ ರೂಪಾಂತರಗಳು, ರಾಮ ಮತ್ತು ಕೃಷ್ಣರ ಕಥೆಗಳನ್ನು ಜನಪ್ರಿಯಗೊಳಿಸುವುದು, ದೈವಭಕ್ತಿಯ ಮೇಲೆ ಆಧಾರಿತವಾದ ಭಾವಗೀತಾ ಸಾಹಿತ್ಯದ ಬೆಳವಣಿಗೆ ಇತ್ಯಾದಿ. ತಮಿಳಿನಲ್ಲಿ ಈ ಕಾಲವು 'ಮಹಾಭಾರತ'ವನ್ನು ತಮಿಳಿಗೆ ಭಾಷಾಂತರಿಸಿದ ವಿಲ್ಲಿಪುತ್ತೂರರ ಯುಗವಾಗಿತ್ತು. ತಮಿಳಗಮ್‌ನ ಎಲ್ಲ ಪ್ರದೇಶಗಳಲ್ಲಿರುವ ಜನರು ಈಗ ಕೂಡ ಈ ಕೃತಿಯ ವಾಚನ ಮತ್ತು ಪಾರಾಯಣಗಳನ್ನು ಮಾಡುತ್ತಾರೆ. ಹದಿನಾಲ್ಕನೆಯ ಶತಮಾನಕ್ಕೆ ಸೇರಿದ ಶಿವಚನಾರನು ಸ್ಕಂದನ ಕೃತಿಗಳನ್ನು ತಮಿಳಿನಲ್ಲಿ ಜನಪ್ರಿಯಗೊಳಿಸಿದ್ದಾನೆ. ಅವನ ಕೃತಿಯ ವೀರಕಾವ್ಯಕ್ಕಿಂತ ಹೆಚ್ಚು ಮಹತ್ತ್ವವನ್ನು ಪಡೆದಿದ್ದು, ವಿಮರ್ಶಕನೊಬ್ಬ ವಿವರಿಸಿದಂತೆ, ಅದು 'ಧಾರ್ಮಿಕ ಸಿದ್ಧಾಂತಕ್ಕೆ ಸಂಬಂಧಿಸಿದ ಒಂದು ಕೈಪಿಡಿ' ಎನಿಸಿದೆ. ಈ ಕಾಲವು ತಮಿಳಿನ ಮಹಾಯುಗಗಳಲ್ಲಿ ಒಂದಾಗಿರದಿದ್ದರೂ, ತಮಿಳು ನಾಡಿನಲ್ಲಿ ಸಾಹಿತ್ಯದ ಮೂಲಕ ಧಾರ್ಮಿಕ ಪುನರುತ್ಥಾನದ ಸೂಚನೆ ಕಂಡುಬಂದುದರಲ್ಲಿ ಸಂಶಯವಿಲ್ಲ.

ತೆಲುಗಿನಲ್ಲಿ ಕೂಡ ಈ ಕಾಲದಲ್ಲಿ ಸಾಹಿತ್ಯ ಚಟುವಟಿಕೆಗಳ ಮೂಲಕ ಧಾರ್ಮಿಕ ಪುನರುತ್ಥಾನವು ಗಮನಾರ್ಹ ರೀತಿಯಲ್ಲಿ ನಡೆಯಿತು. ವಿಜಯನಗರದ ರಾಜರುಗಳು ಸಂಸ್ಕೃತದ ಆಶ್ರಯದಾತರಾಗಿದ್ದರೂ ಅವರು ತೆಲುಗು ಮತ್ತು ಕನ್ನಡ ಭಾಷೆಗಳನ್ನು ನಿರ್ಲಕ್ಷಿಸಲಿಲ್ಲ. ಆ ಕಾಲದ ಮಹಾ ತೆಲುಗು ಕವಿಯಾಗಿದ್ದ ಶ್ರೀನಾಥನನ್ನು, ವಿಜಯನಗರದ ಎರಡನೆಯ ದೇವರಾಯನು 'ಕನಕಾಭಿಷೇಕ'ದ ಮೂಲಕ ಗೌರವಿಸಿದ. ಆ ಕಾಲದಲ್ಲಿ ಭಾರತದ ಆದ್ಯಂತ ಕೃತಿರಚನೆ ಮಾಡಿದ ಇತರ ಕವಿಗಳಂತೆ, ಶ್ರೀನಾಥನೂ ಸಂಸ್ಕೃತದ ಕೃತಿಗಳನ್ನು ತೆಲುಗಿಗೆ ಭಾಷಾಂತರಿಸಿದ್ದಾನೆ. 'ಶ್ರೀಮದ್ ಭಾಗವತ'ವನ್ನು ತೆಲುಗಿಗೆ ಭಾಷಾಂತರಿಸಿದ ಆ ಕಾಲದ ಇನ್ನೊಬ್ಬ ಖ್ಯಾತ ಕವಿ ಪೋತನ. ಇವನ ಈ ಕೃತಿಯು ಈಗ ಕೂಡ ತೆಲುಗಿನ ಅತ್ಯುತ್ಕೃಷ್ಟ

ನಿಧಿಗಳಲ್ಲಿ ಒಂದೆನಿಸಿದೆ. ಖ್ಯಾತ ವಿಮರ್ಶಕರೊಬ್ಬರ ಮಾತಿನಲ್ಲಿ ಹೇಳುವುದಾದರೆ, "ನಿರೂಪಣೆಯ ಜೀವಂತಿಕೆ ಹಾಗೂ ಕಾವ್ಯಾತ್ಮಕ ಶೈಲಿ ಕಂಡುಬರುವ ಸ್ವಾರಸ್ಯ ಮತ್ತು ಭಕ್ತಿಭಾವವನ್ನು ಉತ್ತೇಜಿಸುವ ಸಾಮರ್ಥ್ಯ ಇವೆರಡೂ ದೃಷ್ಟಿಗಳಿಂದ ಈ 'ಭಾಗವತ'ವು ತೆಲುಗು ಸಾಹಿತ್ಯದಲ್ಲಿಯೇ ಅತ್ಯಂತ ಜನಪ್ರಿಯವಾದ ಕೃತಿಯಾಗಿದೆ."

ಕನ್ನಡದಲ್ಲಿ ಕೂಡ ಇದೇ ಬಗೆಯ ಸಾಹಿತ್ಯ ಚಟುವಟಿಕೆಗಳು ನಡೆದವು. ವೀರಶೈವ ಸಾಹಿತ್ಯದ ಪುನಶ್ಚೈತನ್ಯವಷ್ಟೇ ಅಲ್ಲದೆ, ಇತರ ಭಾಷೆಗಳಲ್ಲಿ ನಡೆದಂತೆ, ಸಂಸ್ಕೃತ ಮಹಾಕಾವ್ಯಗಳನ್ನು ಜನಪ್ರಿಯಗೊಳಿಸುವ ಪ್ರಯತ್ನವೂ ನಡೆಯಿತು. ಕುಮಾರವ್ಯಾಸನು ಮಾಡಿದ 'ಮಹಾಭಾರತ'ದ ಅನುವಾದವು ಈ ಕಾಲದ ಅತ್ಯಂತ ಪ್ರಸಿದ್ಧವಾದ ಕೃತಿಗಳಲ್ಲಿ ಒಂದಾಗಿದೆ.

ಈ ಮೇಲಿನ ಮಾತಿಗೆ ಮಲೆಯಾಳಂ ಭಾಷೆಯೇನೂ ಹೊರತಾಗಿಲ್ಲ. ಹಿಂದಿನ ಶತಮಾನಗಳಲ್ಲಿಯೇ ಅದು ತಮಿಳು ಭಾಷೆಯ ಮೇಲಿನ ಅವಲಂಬನವನ್ನು ಬಿಟ್ಟುಬಿಟ್ಟು ಸ್ವತಂತ್ರವಾಗಿತ್ತು. ಆದರೆ ಮಲೆಯಾಳಿ ಭಾಷೆಯ ಸಾಹಿತ್ಯಕ ಪ್ರೌಢಿಮೆಯನ್ನು ಗಳಿಸಿದ್ದು ನಮ್ಮ ಈ ನಿರ್ಣಾಯಕ ಕಾಲಾವಧಿಯಲ್ಲಿಯೇ. ೧೩೩೦ ಮತ್ತು ೧೪೩೦ರ ನಡುವಣ ಅವಧಿಯಲ್ಲಿ ಜೀವಿಸಿದ್ದ 'ನಿರನಮ್' ಪಂಥದ ಕವಿಗಳು ಮಾಡಿದ 'ರಾಮಾಯಣ', 'ಭಗವದ್ಗೀತಾ', 'ಮಹಾಭಾರತ' ಮತ್ತು 'ಭಾಗವತ'ಗಳ ಭಾಷಾಂತರಗಳಿಂದ, ಮಲೆಯಾಳಿ ಭಾಷೆಯ ಪ್ರಪ್ರಥಮ ಸ್ವತಂತ್ರ ಸಾಹಿತ್ಯ ರಚನಾಯುಗ ಪ್ರಾರಂಭವಾಯಿತು. ಹೀಗೆ, ಆಗ ಭಾರತದಲ್ಲಿ ನಡೆಯುತ್ತಿದ್ದ ಧಾರ್ಮಿಕ ಪುನರುತ್ಥಾನದ ಪ್ರವಾಹದಲ್ಲಿ ಕೇರಳವೂ ಸೇರಿತು.

ಮುಸ್ಲಿಮರ ನೇರ ಆಡಳಿತಕ್ಕೆ ಒಳಪಡದ ಪ್ರದೇಶಗಳಲ್ಲಿನ ಸಾಹಿತ್ಯ ಚಟುವಟಿಕೆಗಳಿಗೆ ಸಂಬಂಧಪಟ್ಟ ಈ ಮೇಲಿನ ಸಂಕ್ಷಿಪ್ತ ಅವಲೋಕನದಿಂದ ಎರಡು ವಿಷಯಗಳು ಸ್ಪಷ್ಟವಾಗಿ ತಿಳಿದುಬರುತ್ತವೆ. ಉತ್ತರ ಭಾರತದ ಮಿಥಿಲಾದಿಂದ ದಕ್ಷಿಣ ಭಾರತದ ಕೇರಳದವರೆಗಿನ ಎಲ್ಲ ಪ್ರದೇಶಗಳಲ್ಲಿಯೂ, ಪ್ರಾದೇಶಿಕ ಭಾಷೆಗಳ ಮೂಲಕ, ಮಹಾಕಾವ್ಯಗಳು, ಪುರಾಣಗಳು ಹಾಗೂ ಸಂಸ್ಕೃತದ ಇತರ ಧಾರ್ಮಿಕ ಕೃತಿಗಳನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ಕೂಡಿದ ವಿಪುಲ ಪ್ರಮಾಣದ ಸಾಹಿತ್ಯಿಕ ಕಾರ್ಯ ಚಟುವಟಿಕೆಗಳು ನಡೆದವು. ಇದರಿಂದಾಗಿ ಜನಸಮುದಾಯಕ್ಕೆ ಮೊತ್ತಮೊದಲ ಬಾರಿಗೆ ಹಿಂದೂ ಸಂಸ್ಕೃತಿಯ ಪರಿಚಯವಾಯಿತು. ಭಾರತದ ಆದ್ಯಂತ ಎಲ್ಲ ಪ್ರದೇಶಗಳಲ್ಲಿಯೂ 'ರಾಮಾಯಣ', 'ಮಹಾಭಾರತ' ಮತ್ತು 'ಭಾಗವತ'ಗಳ ಭಾಷಾಂತರ ಅಥವಾ ರೂಪಾಂತರಗಳೇ ಪ್ರಮುಖ ಸಾಹಿತ್ಯ ಚಟುವಟಿಕೆಯಾಗಿದ್ದರೂ, ಅದೇ ಕಾಲದಲ್ಲಿ ಮುಖ್ಯವಾಗಿ ರಾಧೆ ಹಾಗೂ ಕೃಷ್ಣರ ಅಮರ ಪ್ರೇಮಕ್ಕೆ ಸಂಬಂಧಪಟ್ಟ ಕೃತಿಗಳೂ ಅಧಿಕಪ್ರಮಾಣದಲ್ಲಿ ರಚಿತವಾದವು. ಈ ವಿಪುಲ ಪ್ರಮಾಣದ ಕೃತಿಗಳಿಂದಾಗಿ, ಭಾರತದ ಪ್ರಾದೇಶಿಕ ಭಾಷೆಗಳ

ಸಾಹಿತ್ಯಾಭಿವ್ಯಕ್ತಿಯ ಸಮರ್ಥ ಸಾಧನಗಳಾದವು. ನಾವು ಈಗಾಗಲೇ ಗಮನಿಸಿದಂತೆ, ಮೌರ್ಯರ ರಾಜ್ಯಭಾರದ ಕಾಲಾವಧಿಯ ಮಾಗಧೀಯ ಪ್ರಾಕೃತದ ಸಂದರ್ಭವನ್ನು ಬಿಟ್ಟುಳಿದಂತೆ, ಪ್ರಾದೇಶಿಕ ಭಾಷೆಗಳಲ್ಲಿ ನಡೆದ ಈ ಸಾಹಿತ್ಯದ ಕಾರ್ಯಚಟುವಟಿಕೆಯು ಸಂಸ್ಕೃತದ ಜೊತೆಗೆ ನಡೆಸಿದ ಪ್ರತಿಸ್ಪರ್ಧೆಗಳ ಪರಿಣಾಮವಾಗಿರಲಿಲ್ಲ. ಅಲ್ಲದೆ, ಅದು ಒಂದು ರೀತಿಯಲ್ಲಿ ಸಂಸ್ಕೃತಿಯನ್ನು ಒಂದುಗೂಡಿಸುವ ಪ್ರಕ್ರಿಯೆಯಾಗಿತ್ತು; ಹಿಂದೂಧರ್ಮ ಹಾಗೂ ಸಿದ್ಧಾಂತಗಳ ಶ್ರೀಮಂತಿಕೆಯನ್ನು ಜನಸಾಮಾನ್ಯರಿಗೆ ಪರಿಚಯಿಸುವ ವ್ಯವಸ್ಥಿತ ಪ್ರಯತ್ನವಾಗಿತ್ತು.

ಮುಸ್ಲಿಮ್ ರಾಜ್ಯಭಾರದ ಪ್ರದೇಶಗಳ ಹೊರಗೆ, ವಾಸ್ತುಶಿಲ್ಪವೂ ಗಮನಾರ್ಹವಾಗಿ ಪುನರುಜ್ಜೀವನಗೊಂಡಿತ್ತು. ಗಂಗಾನದಿ ಕಣಿವೆ ಪ್ರದೇಶ, ಗುಜರಾತ್, ಮಾಳ್ವ ಮತ್ತು ಜಯಪುರಗಳಲ್ಲಿ ಇಂಡೋ–ಮುಸ್ಲಿಮ್ ವಾಸ್ತುಶಿಲ್ಪದ ಸಮರ್ಥವಾದ ಒಂದು ಪಂಥವು ಅಭಿವೃದ್ಧಿ ಹೊಂದಿ, ಭಾರತೀಯ ಕಲಾ ಪರಂಪರೆಯ ಶ್ರೀಮಂತಿಕೆಯನ್ನು ಹೆಚ್ಚಿಸಿತು. ಹಿಂದೂ ಪುನರುತ್ಥಾನವು ಕಂಡುಬಂದ ಹೊರಗಿನ ಪ್ರದೇಶಗಳಲ್ಲಿ ಎಂದರೆ ರಾಜಸ್ಥಾನದಲ್ಲಿ ಹಾಗೂ ದಕ್ಷಿಣ ಭಾರತದಲ್ಲಿ ಕಲೆ ಮತ್ತು ವಾಸ್ತುಶಿಲ್ಪಗಳ ಕ್ಷೇತ್ರದಲ್ಲಿ ಆರೋಗ್ಯಕರ ಬೆಳವಣಿಗೆಯ ಲಕ್ಷಣಗಳು ತೋರಿಬಂದವು. ಮಹಾರಾಣಾ ಕುಂಭನು ಮಹಾಕೋಟೆಗಳನ್ನೂ ದೇವಾಲಯಗಳನ್ನು ಅರಮನೆಗಳನ್ನೂ ನಿರ್ಮಿಸಿದ್ದ. ಜೋಧಪುರದ ರಾಮಪುರದಲ್ಲಿ ಅವನು ನಿರ್ಮಿಸಿದ ಚೌಮುಖ ದೇವಾಲಯವು ಅತ್ಯುತ್ಕೃಷ್ಟ ನಿರ್ಮಾಣವೆನಿಸಿದೆ. ಚಿತ್ತೂರಿನ ಜಯಸ್ತಂಭವು ಎಲ್ಲ ದೃಷ್ಟಿಗಳಿಂದ, ರೋಮಿನಲ್ಲಿರುವ ಟ್ರಾಜನನ ಪ್ರಖ್ಯಾತ ಜಯಸ್ತಂಭಕ್ಕಿಂತಲೂ ಅತ್ಯುತ್ತಮವಾದ ಕಲಾಸೃಷ್ಟಿಯೆಂದು ಫರ್ಗ್ಯುಸನ್ ಬಣ್ಣಿಸಿದ್ದಾನೆ. ಗ್ವಾಲಿಯರ್‌ನಲ್ಲಿರುವ ಮಾನ್‌ಸಿಂಗ್ ತಾಮರನ ಅರಮನೆಯೂ ಈ ಸಂದರ್ಭದಲ್ಲಿ ಉಲ್ಲೇಖಾರ್ಹವಾಗಿದೆ. ಅದು ಉತ್ತರಭಾರತದಲ್ಲಿರುವ ಪರಿಪೂರ್ಣ ಹಿಂದೂ ವಾಸ್ತುಶೈಲಿಯ ಏಕಮಾತ್ರ ನಿದರ್ಶನವಾಗಿರುತ್ತದೆ.

ರಾಜಸ್ಥಾನದ ಹೊರಗಿನ ಪ್ರದೇಶಗಳನ್ನು ಗಮನಕ್ಕೆ ತೆಗೆದುಕೊಂಡರೆ, ಹಿಂದೂ ಪುನರುತ್ಥಾನದ ಬಗೆಗಿನ ನಿಜವಾದ ಉತ್ಸಾಹ ಕಂಡುಬರುವುದು ದಕ್ಷಿಣ ಭಾರತದಲ್ಲಿಯೇ. ರಾಜಧಾನಿಯಾಗಿ ಮಾತ್ರವಲ್ಲದೆ, ಹಿಂದೂ ಧರ್ಮದ ರಕ್ಷಣಾದುರ್ಗವಾಗಿ ಕೂಡ, ಯೋಜಿಸಿ ನಿರ್ಮಿಸಲಾದ ವಿಜಯನಗರ ನಗರವು ಹಿಂದೂ ವಾಸ್ತುಶಿಲ್ಪ ಪ್ರತಿಭೆಗೆ ಅಪರಿಮಿತ ಅವಕಾಶಗಳನ್ನು ಒದಗಿಸಿದೆ. ವಿದೇಶೀ ಪ್ರವಾಸಿಗಳ ಒಮ್ಮತದಿಂದ ಸಾಬೀತಾಗುವಂತೆ, ವಿಜಯನಗರವು ಆ ಕಾಲದ ಅತ್ಯಂತ ಭವ್ಯ ನಗರಗಳಲ್ಲಿ ಒಂದಾಗಿತ್ತು. ಈಗ ಹಂಪಿಯಲ್ಲಿ ಕಂಡುಬರುವ ಅಪರಿಮಿತ ಹಾಗೂ ಭಾವೋತ್ಪಾದಕವಾದ ಅವಶೇಷಗಳು ಆ ಕಾಲದ ದೇವಾಲಯಗಳು, ಅರಮನೆಗಳು ಮತ್ತು ಇತರ ಸಾರ್ವಜನಿಕ ಕಟ್ಟಡಗಳ

ವಾಸ್ತುಶಿಲ್ಪಸೌಂದರ್ಯಕ್ಕೆ ಸಾಕ್ಷ್ಯಗಳಾಗಿವೆ. ವಿಜಯನಗರವೇ ಈಗ ಒಂದು ಅವಶೇಷವೆನಿಸಿದ್ದರೂ, ಆಕಾಲದ ವಾಸ್ತುಶಿಲ್ಪವು ಬಹುಮಟ್ಟಿಗೆ ಉಳಿದುಬಂದಿದೆ. ಆ ಕಾಲದ ಧಾರ್ಮಿಕ ಪುನರುತ್ಥಾನ ಹಾಗೂ ವಾಸ್ತುಶಿಲ್ಪದ ಅಭಿವೃದ್ಧಿಗಳಿಗೆ ಸಾಕ್ಷ್ಯವಾದಂತಹ ಬೃಹತ್ ದೇವಾಲಯಗಳಾಗಲಿ, ಪ್ರಮುಖ ಪುಣ್ಯಕ್ಷೇತ್ರಗಳಾಗಲಿ, ದಕ್ಷಿಣಭಾರತದಲ್ಲಿ ಇನ್ನೆಲ್ಲಿಯೂ ಇಲ್ಲ. ಸಮಗ್ರ ದಕ್ಷಿಣ ಭಾರತವೇ, ವಿಜಯನಗರದ ರಾಜರುಗಳೂ ಅವರ ಪ್ರತಿನಿಧಿಗಳೂ ನಿರ್ಮಿಸಿರುವ ಗೋಪುರಗಳು, ಮಂಟಪಗಳು ಮತ್ತು ದೇವಾಲಯಗಳಿಂದ ತುಂಬಿದೆ.

೧೩೩೦ ಮತ್ತು ೧೪೩೦ರ ನಡುವಣ ಕಾಲಾವಧಿಯು ಹಿಂದೂಗಳ ಪಾಲಿಗೆ ಒಂದು ಸುವರ್ಣಯುಗವಾಗಿತ್ತು ಎಂದು ತೋರಲು ಈ ಸ್ಥೂಲ ಸರ್ವೇಕ್ಷಣೆಯೇ ಸಾಕು. ಈ ಅವಧಿಯ ಪ್ರಾರಂಭದ ಕಾಲವು ಮಸುಕಾಗಿದ್ದಂತೆ ಕಂಡುಬರುತ್ತದೆ. ಆಗ ಭಾರತದ ಯಾವುದೇ ಪ್ರದೇಶದಲ್ಲಿಯೂ ಯಾವುದೇ ಒಂದು ಪ್ರಭಾವಶಾಲಿ ಪ್ರತಿಭಟನಾ ಕೇಂದ್ರವು ಇರಲಿಲ್ಲ. ೧೪೩೦ರ ವೇಳೆಗೆ ಸಮಗ್ರ ಸನ್ನಿವೇಶವೇ ಪರಿವರ್ತನೆ ಹೊಂದಿತ್ತು. ಕೊನೆಯ ಹಿಂದೂ ಸಾಮ್ರಾಜ್ಯವು (ಬಾಲಂಬಂಗನ್) ಮುಸ್ಲಿಮರ ಕೈವಶವಾದದ್ದು ೧೬ನೆಯ ಶತಮಾನದಲ್ಲಷ್ಟೇ (೧೬೩೯) ಎಂಬುದನ್ನು ಏನೇ ಆಗಲಿ, ನಾವು ಮರೆಯಕೂಡದು. ಹೀಗಿರುವಾಗ ಈಗಲೂ ಬಾಲಿ ಪ್ರದೇಶದ ಕೆಲವು ಪಂಗಡಗಳಿಗೆ ಮಾತ್ರ ಹಿಂದೂ ಧರ್ಮವು ಸೀಮಿತವಾಗಿರದೆ ಇದ್ದರೆ ಅಥವಾ ಜಾವಾದ ಅರಣ್ಯಪ್ರದೇಶಗಳ ಕೆಲವು ಜನರು ಹಿಂದೂಧರ್ಮವನ್ನು ಕುಲಗೆಟ್ಟ (ಭ್ರಷ್ಟ) ರೂಪದಲ್ಲಾದರೂ ಆಚರಿಸುತ್ತ ಇದ್ದರೆ, ಅದಕ್ಕೆ ಈ ಕಾಲದ ಹಿಂದೂ ಧಾರ್ಮಿಕ ಹಾಗೂ ರಾಜಕೀಯ ಪುನರುತ್ಥಾನವೇ ಕಾರಣ. ಪ್ರೋಲಯ ನಾಯಕ, ಬುಕ್ಕ, ಹರಿಹರ, ವಿದ್ಯಾರಣ್ಯ, ಹಮ್ಮೀರ ಮತ್ತು ಕುಂಭರು ಈ ಪುನರುತ್ಥಾನದ ನಾಯಕರಾಗಿದ್ದರು. ಮುಂದಿನ ಶತಮಾನಗಳಲ್ಲಿ ಹಿಂದೂಗಳು ಒಗ್ಗೂಡಿರುವಂತೆ ಮಾಡಿದ್ದು ಇವರ ಸಂಪ್ರದಾಯವೇ ಆಗಿರುತ್ತದೆ. ತನ್ನಲ್ಲಿ ಮುಖ್ಯ ಅಂಶವನ್ನಾಗಿ ಮುಸ್ಲಿಮ್ ರಾಷ್ಟ್ರೀಯ ಮನೋಭಾವವನ್ನು ಹೊಂದಿದ್ದರೂ, ಭಾರತವು ಎಂದೆಂದಿಗೂ ಬಹುಸಮಾಜವಾಗಿಯೇ ಉಳಿದು ಬಂದಿದೆ.

ಹದಿನಾಲ್ಕನೆಯ ಶತಮಾನದಲ್ಲಿ ಇಸ್ಲಾಂ ಧರ್ಮವು ಯಾವುದೇ ಒಂದು ಪ್ರದೇಶಕ್ಕೆ ಸೀಮಿತವಾಗಿರಲಿಲ್ಲ. ಆದರೆ, ಮಧುರಾ ಮತ್ತು ರಾಮೇಶ್ವರಮ್‌ಗಳ ವರೆಗೂ ವ್ಯಾಪಿಸಿದ್ದ ಆ ಧರ್ಮವು ಎಲ್ಲೆಡೆಗಳಲ್ಲಿ ಚಿಕ್ಕವೇ ಆಗಿದ್ದರೂ, ಪ್ರಭಾವಶಾಲಿಯಾದ ಮುಸ್ಲಿಮ್ ಸಮುದಾಯಗಳು ಉದಯಿಸುವಂತೆ ಮಾಡಿತ್ತು. ಹಿಂದೂ ಪುನರುತ್ಥಾನದ ಸ್ವರೂಪ ಮತ್ತು ವ್ಯಾಪಕತೆಗಳು ಹೇಗೆಯೇ ಇರಲಿ,

ಭಾರತವು ಹೀಗೆ ಒಂದು ಮುಸ್ಲಿಮ್ ದೇಶವಾಗಲು ಇದರಿಂದಾಗಿ ಸಾಧ್ಯವಾಗಲಿಲ್ಲ. ಸಮರ್ಥವಾದ ಧಾರ್ಮಿಕ ಬಂಧನದಿಂದಷ್ಟೇ ಅಲ್ಲದೆ, ಪ್ರಬಲವಾದ ಸಾಮುದಾಯಿಕ ಪರಿಕಲ್ಪನೆಯಿಂದ ಕೂಡ, ಪರಿಗಣನಾರ್ಹವಾದ ಮುಸ್ಲಿಮ್ ಸಮುದಾಯದೊಂದಿಗೆ ಭಾರತವು ಹಿಂದೂ ರಾಷ್ಟ್ರವಾಗಿಯೇ ಮುಂದುವರಿಯಲು ೧೩೩೦ ಮತ್ತು ೧೪೩೦ರ ನಡುವೆ ನಡೆದ ಧಾರ್ಮಿಕ ಮತ್ತು ಸಾಹಿತ್ಯಕ ಕಾರ್ಯ ಚಟುವಟಿಕೆಗಳು ನೆರವಾದವು. ಆ ಕಾಲದ ಘಟನೆಗಳಿಂದಲೇ ಭಾರತದಲ್ಲಿ ಬೇರೆ ಬೇರೆ ಕೋಮುಗಳಿಗೆ ಸೇರಿದ ಜನರು ಪರಸ್ಪರ ಒಳ್ಳೆಯ ಸಂಬಂಧವನ್ನು ಬೆಳೆಸಿಕೊಂಡು ಬಾಳಲು ಸಾಧ್ಯವಾಯಿತು.

* * * *

೩. ಪಾಶ್ಚಾತ್ಯರೊಂದಿಗೆ ಹೋರಾಟ

ಹತ್ತೊಂಬತ್ತನೆಯ ಶತಮಾನದಲ್ಲಿ ಭಾರತವು ಎದುರಿಸಬೇಕಾಗಿ ಬಂದಂತಹ ಸಮಸ್ಯೆಯು, ನಾವು ಈಗಾಗಲೇ ಚರ್ಚಿಸಿದ ಹಿಂದಿನ ಎರಡು ನಿರ್ಣಾಯಕ ಕಾಲಾವಧಿಗಳಲ್ಲಿ ಅದು ಎದುರಿಸಿದ ಸಮಸ್ಯೆಗಿಂತ ಕೆಲಮಟ್ಟಿಗೆ ಆಮೂಲಾಗ್ರವಾಗಿ ಭಿನ್ನವಾಗಿದೆ. ನಂದರು ಮತ್ತು ಮೌರ್ಯರ ರಾಜ್ಯಭಾರದ ಕಾಲದಲ್ಲಿ, ಸಮಸ್ಯೆಯು ಕೇವಲ ವಿಸ್ತರಣೆಗೆ ಸಂಬಂಧಪಟ್ಟಿತ್ತು. ಹಿಂದೂ ಸಂಸ್ಕೃತಿಯು ಭಾರತದ ಆದ್ಯಂತ ವ್ಯಾಪಿಸುವ ಸಾಮರ್ಥ್ಯವನ್ನು ಹೊಂದಿದೆಯೇ, ಒಂದು ಸಮುದಾಯವಾಗಿ ಒಗ್ಗಟ್ಟು ಸಾಧಿಸಿ, ಹಿಂದೂಗಳ ಸಂಪರ್ಕ ಮಾಧ್ಯಮವಾಗಿ ವಿಕಾಸ ಹೊಂದುವಷ್ಟು ಆ ಸಂಸ್ಕೃತಿ ಪ್ರಬಲವಾಗಿದೆಯೇ ಎಂಬುದು ಮುಖ್ಯ ಪ್ರಶ್ನೆಯಾಗಿತ್ತು. ಭಾರತದ ಅತಿ ವಿಸ್ತಾರ, ಉತ್ತರ ಹಾಗೂ ದಕ್ಷಿಣ ಭಾರತಗಳನ್ನು ಪ್ರತ್ಯೇಕಿಸಿದ ವಿಶೇಷ ಭೌಗೋಳಿಕ ಗುಣಲಕ್ಷಣಗಳು ಮತ್ತು ಸಂಸ್ಕೃತದ ಪ್ರತಿಸ್ಪರ್ಧಿ ಭಾಷೆಯಾಗುವ ಭಯವನ್ನು ಮೂಡಿಸಿದ ಒಂದು ದೇಸೀ ಭಾಷೆಗೆ– ಮಾಗಧೀ ಪ್ರಾಕೃತಕ್ಕೆ– ದೊರೆತ ರಾಜಾಶ್ರಯ– ಇವುಗಳೇ ಮುಖ್ಯ ಸವಾಲುಗಳಾಗಿದ್ದವು.

ಹದಿನಾಲ್ಕನೆಯ ಶತಮಾನದಲ್ಲಿ ಇಸ್ಲಾಮ್ ಧರ್ಮವನ್ನು ಎದುರಿಸುವುದೇ ಹಿಂದೂ ಧರ್ಮದ ಮುಖ್ಯ ಸಮಸ್ಯೆಯಾಗಿತ್ತು. ಭಾರತೀಯ ಅವಿಚ್ಛಿನ್ನತೆಯನ್ನು, ಎಂದರೆ ಸಂಸ್ಕೃತಿ, ಸಾಮಾಜಿಕ ಸಂಘಟನೆ, ಧರ್ಮ ಮತ್ತು ಚಿಂತನಾಪದ್ಧತಿಗಳಲ್ಲಿ ಭಾರತವು ಹೊಂದಿದ್ದ ಪ್ರತ್ಯೇಕ ಅನನ್ಯತೆಯನ್ನು ಉಳಿಸಿಕೊಂಡು ಬರಲು ಸಾಧ್ಯವೇ ಅಥವಾ ವಿಸ್ತರಿಸುತ್ತಿರುವ ಇಸ್ಲಾಂ ಜನಸಮುದಾಯದೊಂದಿಗೆ ಐಕ್ಯವಾಗಬೇಕೇ ಎಂಬುದು ಮುಖ್ಯ ಪ್ರಶ್ನೆಯಾಗಿತ್ತು. ೧೮೧೮ ಮತ್ತು ೧೯೧೮ರ ನಡುವಣ ಅವಧಿಯಲ್ಲಿ ಭಾರತಕ್ಕೆ ಎದುರಾದ ಅಪಾಯಗಳು ಹೆಚ್ಚು ಹೆಚ್ಚು ಸಂಕೀರ್ಣ ಸ್ವರೂಪದ, ಬೇರೆಯೇ ರೀತಿಯ ಅಪಾಯಗಳಾಗಿದ್ದವು. ಹಿಂದೂ ಧರ್ಮದ ಉಳಿವು ಅಥವಾ ಹಿಂದೂಗಳು ಒಂದು ಸಮುದಾಯವಾಗಿ ಮುಂದುವರಿಯುವುದು ಆ ಕಾಲದ ಸಮಸ್ಯೆಯಾಗಿರಲಿಲ್ಲ. ಪ್ರಾಚೀನವಾದ, ಸ್ಥಾಯೀ ಸ್ವಭಾವದ ಹಾಗೂ ಅವನತಿ ಹೊಂದುತ್ತಿರುವಂತೆ ಕಂಡುಬರುವ ಹಿಂದೂ ಸಂಸ್ಕೃತಿಯ ಮೇಲ್ಮಟ್ಟದ, ತುಂಬ ಕ್ರಿಯಾಶಕ್ತವಾದ ಹಾಗೂ ವಿಸ್ತರಿಸುತ್ತಿರುವ ಪಾಶ್ಚಾತ್ಯ ನಾಗರಿಕತೆಯೊಂದಿಗೆ ಹೋರಾಡುವುದೇ ಮುಖ್ಯ ವಿಷಯವೆನಿಸಿತ್ತು. ಹಿಂದೂ ಮತ್ತು ಮುಸ್ಲಿಮ್–

ಇವೆರಡೂ ಸಮುದಾಯಗಳಿಗೆ ಪರಕೀಯವಾದ ಪಾಶ್ಚಾತ್ಯ ಪ್ರಭುತ್ವದಲ್ಲಿ, ಹೊಸ ಸನ್ನಿವೇಶಗಳಲ್ಲಿ, ಹಿಂದೂಗಳು ಮತ್ತು ಮುಸ್ಲಿಮರು ಒಟ್ಟಿಗೆ ಜೀವಿಸಬೇಕಾಗಿತ್ತು.

ಹತ್ತೊಂಬತ್ತನೆಯ ಶತಮಾನದ ಮೂರನೆಯ ದಶಕದ ವರ್ಷಗಳಲ್ಲಿ ಬಂಗಾಳವನ್ನು ಹತ್ತಿರದಿಂದ ನೋಡಿದ, ಸಮರ್ಥನಾದರೂ ಸಹಾನುಭೂತಿ ಪರನಲ್ಲದ, ಮಹಾಇತಿಹಾಸಕಾರನಾದ ಟಿ.ಬಿ. ಮೆಕಾಲೆಯು ಆಗ ಭಾರತೀಯ ಸಮಾಜವು ವಿಘಟನೆ ಹೊಂದುವ ಹಂತದಲ್ಲಿದೆಯೆಂದು ಭಾವಿಸಿದ್ದ. ಭಾರತೀಯ ಸಮಾಜದಲ್ಲಿ ಮೂಢನಂಬಿಕೆಗಳೂ, ಅನಾಗರಿಕವೆಂದು ಕಂಡುಬರದಿದ್ದರೂ ಪುರಾತನವೆನಿಸಿದ ರೀತಿರಿವಾಜುಗಳೇ ಮುಂತಾದ ನಿರ್ಬಂಧಗಳೂ ತಾಂಡವವಾಡುತ್ತಿದ್ದವು. ಬಾಲ್ಯವಿವಾಹ ಹಾಗೂ ಕಡ್ಡಾಯ ವೈಧವ್ಯಗಳಂತಹ ದುಷ್ಟ ಸಾಮಾಜಿಕ ಪದ್ಧತಿಗಳಿದ್ದವು. ಜನರಲ್ಲಿ ಸಾಮುದಾಯಿಕ ಮನೋಭಾವವು ಕಣ್ಮರೆಯಾಗಿತ್ತು. ಆ ಕಾಲದಲ್ಲಿ ಸರ್ವಸಾಮಾನ್ಯವಾದ ಧರ್ಮ, ನೀತಿನಿಯಮ ಬದ್ಧತೆಯಿಂದ ಕೂಡಿದ ಜನಸಮುದಾಯ ಮತ್ತು ಸ್ಪಷ್ಟವಾದ ಏಕೀಕೃತ ಸಂಸ್ಕೃತಿ– ಇವುಗಳಿಂದ ಹಿಂದೂಗಳೆಲ್ಲ ಒಟ್ಟಾಗಿ ಬಾಳಬೇಕು ಎಂಬ ಭಾವನೆ ನಿಸ್ಸಂದೇಹವಾಗಿಯೂ ಜನರಲ್ಲಿರಲಿಲ್ಲ.

ಹೀಗೆ, ಆಗ ಹಿಂದೂ ಸಮಾಜವು ತುಂಬ ಕ್ರಿಯಾಸಮರ್ಥವಾದ ನಾಗರಿಕತೆಯೊಂದಿಗೆ ಹೋರಾಟ ನಡೆಸಬೇಕಾಗಿತ್ತು. ಅಸದೃಶವಾದ ನೈತಿಕ ಮಹತ್ತ್ವ, ಆರ್ಥಿಕ ಸಾಮರ್ಥ್ಯ, ತಾಂತ್ರಿಕ ಮತ್ತು ವೈಜ್ಞಾನಿಕ ಶ್ರೇಷ್ಠತೆಗಳಿಂದ ಕೂಡಿದ ಆ ಪಾಶ್ಚಾತ್ಯ ಸಂಸ್ಕೃತಿಯು, ತಾನು ಪ್ರತಿನಿಧಿಸುತ್ತಿರುವುದೇ ಇತರರೆಲ್ಲರೂ ಒಪ್ಪಲೇಬೇಕಾದ ಜೀವನಶೈಲಿ ಎಂಬ ದೃಢವಿಶ್ವಾಸವನ್ನು ಹೊಂದಿತ್ತು. ಹೀಗಾಗಿ ಇದು ಕಳೆದ ಎರಡು ನಿರ್ಣಾಯಕ ಕಾಲಾವಧಿಗಳಿಗಿಂತಲೂ ಹೆಚ್ಚು ಪ್ರಬಲವಾದ ಸಮಸ್ಯೆಯಾಗಿತ್ತು. ಈ ಸಮಸ್ಯೆಯನ್ನು ಪರಿಹರಿಸಲು ಭಾರತಕ್ಕೆ ಸಾಧ್ಯವಾಗದಿದ್ದರೆ, ೧೪ನೆಯ ಶತಮಾನದಲ್ಲಾದಂತೆ ಹಿಂದೂ ಧರ್ಮವು ಕಣ್ಮರೆಯಾಗುವ ಅಪಾಯವಷ್ಟೇ ಅಲ್ಲದೆ, ಭಾರತೀಯರು ಒಂದು ಜನಸಮುದಾಯವಾಗಿ, ಪ್ರಗತಿಯ ಓಟದಲ್ಲಿ ಎಂದೆಂದೂ ಹಿಂದುಳಿಯುವ ಹಾಗೂ ಜಗತ್ತಿಗೆ ಯಾವ ಕೊಡುಗೆಯನ್ನೂ ನೀಡುವ ಶಕ್ತಿಯಿಲ್ಲದ ಅರೆ–ನಾಗರಿಕರಾಗಿ ಮತ್ತು ಪ್ರಭಾವಹೀನ ಜನರಾಗಿ ಇರಬೇಕಾದ ಅಪಾಯವೂ ಇತ್ತು. ಪ್ರಾಚೀನ ಭಾರತದ ವಿವಿಧ ತತ್ತ್ವಗಳನ್ನೂ ದರ್ಶನಗಳನ್ನೂ, ಪ್ರಾಚೀನ ಈಜಿಪ್ತಿನವರ ಧ್ಯೇಯೋದ್ದೇಶಗಳನ್ನು ಈಗ ಅಧ್ಯಯನ ನಡೆಸುತ್ತಿರುವ ರೀತಿಯಲ್ಲಿ ಕುತೂಹಲದಿಂದ ಮತ್ತು ಪಾಂಡಿತ್ಯಪೂರ್ಣವಾಗಿ ಅಭ್ಯಾಸಮಾಡಬೇಕು. 'ಬುಕ್ ಆಫ್ ದಿ ಡೆಡ್' ಅಥವಾ 'ಗಿಲ್ಗಮಿಷ್'ಗಳಿಂದ ಆಯ್ದ ಉದ್ಧೃತಿಗಳ ಸಂಕಲನಗಳು ಈಜಿಪ್ತಿನ ಮುಖ್ಯ ಸಾಹಿತ್ಯ ಕೃತಿಗಳಾಗಿದ್ದು, ಇವು ಯಾವುದೇ ಜೀವಂತ ನಾಗರಿಕತೆಯೊಂದಿಗೂ ಸಂಬಂಧವನ್ನು ಹೊಂದಿರದ ಜನರ ಸಾಹಿತ್ಯದಂತಿವೆ.

ಪಾಶ್ಚಾತ್ಯ ಹಾಗೂ ಭಾರತೀಯ ಸಂಸ್ಕೃತಿಗಳ ಮುಖಾಮುಖಿಯ ಪರಿಣಾಮವಾಗಿ, ಭಾರತೀಯ ಜೀವನವು ಸ್ವತಃ ಸುಧಾರಣೆಗೊಳ್ಳಬಹುದಾಗಿತ್ತು ಅಥವಾ ಆದರ್ಶಪ್ರಾಯವಾದ ಪ್ರಾಚೀನ ಭಾವನೆಗಳಲ್ಲಿ ಹೊಸ ಶಕ್ತಿಯನ್ನು ಗುರುತಿಸಬಹುದಾಗಿತ್ತು ಅಥವಾ ಆಧುನಿಕ ಜೀವನಶೈಲಿಗೆ ಹೊಂದುವ ರೀತಿಯಲ್ಲಿ ತನ್ನ ಪದ್ಧತಿಗಳನ್ನು ಆಚರಣೆಗಳನ್ನು ಬದಲಾಯಿಸಿಕೊಳ್ಳಬಹುದಾಗಿತ್ತು. ಆದರೆ ಹಾಗೆ ಮಾಡದೆ, ಅದು, ಮೆಕಾಲೆಯಂತಹ ಆಶಾವಾದಿಗಳಿಗೆ ಕಂಡುಬಂದಂತೆ, ಇನ್ನಷ್ಟು ಶಿಥಿಲಗೊಳ್ಳುವ, ಹಾಗೂ ಹಿಂದೂಗಳನ್ನು ಮತಾಂತರಗೊಳಿಸಲು ದೀರ್ಘಕಾಲದಿಂದ ಕಾಯುತ್ತಿದ್ದ ವಿವಿಧ ಚರ್ಚ್‌ಗಳಿಗೆ ಕಂಡುಬಂದಂತೆ, ಪಾಶ್ಚಾತ್ಯ ಕ್ರೈಸ್ತಮತದ ಪೇಲವ ಪ್ರತಿರೂಪವಾಗಿ ಮಾರ್ಪಡುವ ಅವಕಾಶವನ್ನು ತಾನೇ ಕಲ್ಪಿಸಿಕೊಟ್ಟಿತು. ಹೀಗಾಗಿ ಈಗ ನಾವು ಹೆಮ್ಮೆಪಡುವಂತಹ ಭಾರತೀಯ ಇತಿಹಾಸದ ಅವಿಚ್ಛಿನ್ನತೆಯ ಗತಕಾಲದ ವಿಷಯವಷ್ಟೇ ಆಗಿ ಇದರ ಅಸ್ಪಷ್ಟ ನೆನಪನ್ನು ನಾವು ಆಗಾಗ ಮಾಡಿಕೊಳ್ಳುತ್ತಿದ್ದೇವೆ. ನಮ್ಮ ಜೀವನಕ್ಕೆ ಸಂಬಂಧಪಡದಿರುವ ಸಂದರ್ಭಗಳಲ್ಲಿ ಮಾತ್ರ ಈ ಕುರಿತ ಪ್ರಸ್ತಾಪವನ್ನು ಮಾಡುತ್ತಿದ್ದೇವೆ. ನಿಜವಾಗಿ ಹೇಳುವುದಾದರೆ ಪಶ್ಚಿಮ ಹಾಗೂ ಪೂರ್ವ ಭಾರತದ ಕೆಲವು ಇತಿಹಾಸಪ್ರಸಿದ್ಧ ಪ್ರದೇಶಗಳಲ್ಲಿ ಹಾನಿಯುಂಟಾಗಿದ್ದರೂ, ಭಾರತದಲ್ಲಿ ಪ್ರಾಚೀನ ಸಂಪ್ರದಾಯಗಳು ಇನ್ನೂ ಬೇರೂರಿರಲು ಮತ್ತು ಅದರ ಅನನ್ಯತೆಯನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗಿರುವುದಕ್ಕೆ ೧೮೧೮ ಮತ್ತು ೧೯೧೮ರ ನಡುವಣ ನೂರು ವರ್ಷಗಳ ಅವಧಿಯಲ್ಲಿ ಉಂಟಾದ ಅಭಿವೃದ್ಧಿಗಳೇ ಕಾರಣ.

೧೮೧೮ನೆಯ ಇಸವಿಗೆ ಒಂದು ವಿಶೇಷ ಮಹತ್ತ್ವವಿದೆ. ಪಂಜಾಬಿನ ಹೊರಗಿರುವ ಇಡೀ ಭಾರತವು ಈಸ್ಟ್ ಇಂಡಿಯಾ ಕಂಪನಿಯ ಆಡಳಿತಕ್ಕೆ ಒಳಪಟ್ಟಿತ್ತು. ಬ್ರಿಟಿಷರ ಪ್ರಭುತ್ವವೂ ಆ ವರ್ಷವೇ ಪ್ರಾರಂಭವಾಯಿತೆಂದು ನಿಸ್ಸಂದೇಹವಾಗಿ ಭಾವಿಸಬಹುದು. ೧೯೧೮ರಲ್ಲಿ ಮೊದಲನೆಯ ಮಹಾಯುದ್ಧವು ಕೊನೆಗೊಂಡಿತು. ಅನಂತರ ಹೊಸ ಆಕ್ರಮಣಕಾರಿ ಸ್ವರೂಪಗಳನ್ನು ತಳೆದ ರಾಷ್ಟ್ರೀಯತಾ ಚಳವಳಿಯು, ೧೯೨೦ರ ಅಸಹಕಾರ ಚಳವಳಿ ಹಾಗೂ ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯು ಅಂತ್ಯಗೊಳ್ಳಲು ಕಾರಣವಾದ ಸುದೀರ್ಘ ಸ್ವಾತಂತ್ರ್ಯ ಹೋರಾಟಕ್ಕೆ (೧೯೨೦ರಿಂದ ೧೯೪೭) ಸದವಕಾಶವನ್ನು ಕಲ್ಪಿಸಿಕೊಟ್ಟಿತು.

ಈ ನೂರು ವರ್ಷಗಳ ಅವಧಿಯು ಭಾರತೀಯ ಇತಿಹಾಸದಲ್ಲಿ ಅತ್ಯಂತ ಮುಖ್ಯವಾದ ಕಾಲವಾಗಿದೆ. ಈ ಕಾಲದಲ್ಲಿ ಭಾರತವು ವಿದೇಶೀಯರ ಸಮರ್ಥ ಆಡಳಿತಕ್ಕೆ ಒಳಪಟ್ಟಿತ್ತು; ತನ್ನದಲ್ಲದ ನಾಗರಿಕತೆಯೊಂದಿಗೆ ಮುಖಾಮುಖಿಯಾಗಿತ್ತು. ಈ ಹೊಸ ವಾಸ್ತವ ಪರಿಸ್ಥಿತಿಗಳಿಗೆ ಭಾರತೀಯರು ಹೇಗೆ ಪ್ರತಿಕ್ರಿಯೆ ತೋರಿಸಿದರು ಎಂಬುದೇ ನಾವಿಲ್ಲಿ ಚರ್ಚಿಸಬೇಕಾದ ವಿಷಯ. ರಾಜಕೀಯ ಪ್ರಭುತ್ವಕ್ಕೆ

ಸಮಬಂಧಿಸಿರುವಷ್ಟರ ಮಟ್ಟಿಗೆ ಹೇಳುವುದಾದರೆ, ಬಹುಮಟ್ಟಿಗೆ ನಮ್ಮ ನಿರ್ಣಾಯಕ ಕಾಲಾವಧಿಯ ಅಂತ್ಯದವರೆಗೆ (೧೯೧೮) ಹಾಗೂ ಸ್ಪಷ್ಟವಾಗಿ ಶತಮಾನದ ಪ್ರಾರಂಭದವರೆಗೆ, ಒಟ್ಟಿನಲ್ಲಿ ಬ್ರಿಟಿಷ್ ಆಡಳಿತವನ್ನು ಪ್ರಯೋಜನಕರವೆಂದೇ ಭಾವಿಸಲಾಗಿತ್ತು. ಬ್ರಿಟಿಷರ ಆಡಳಿತದಲ್ಲಿ ಭಾರತವನ್ನು ಇರಿಸಿದುದಕ್ಕಾಗಿ, ಸ್ವತಃ ರಾಜಾರಾಮ್ ಮೋಹನ್ ರಾಯ್ ಅವರೇ, ಸಾರ್ವಜನಿಕ ವೇದಿಕೆಯಲ್ಲಿ, ದೇವರಿಗೆ ಪ್ರಣಾಮವನ್ನು ಸಲ್ಲಿಸಿದ್ದರು. ನಿಜವಾಗಿ ಹೇಳುವುದಾದರೆ, ಈ ಶತಮಾನದ ಕೊನೆಯವರೆಗೆ, ಸ್ವಾತಂತ್ರ್ಯದ ಕನಸನ್ನು ಇರಿಸಿಕೊಂಡಂತಹ ಕೆಲವು ಚಿಕ್ಕಪುಟ್ಟ ಪಂಗಡಗಳಿದ್ದರೂ, ಒಟ್ಟಿನಲ್ಲಿ ಬ್ರಿಟಿಷ್ ಆಡಳಿತದ ಬಗ್ಗೆ ದ್ವೇಷದಿಂದ ಕೂಡಿದ ಮನೋಭಾವವು ಜನರಲ್ಲಿ ಇರಲಿಲ್ಲ. ಉದಾಹರಣೆಗೆ, ಪ್ರಸನ್ನ ಕುಮಾರ್ ಠಾಗೋರ್ ಹೇಳಿದಂತೆ, 'ಇಂಗ್ಲಿಷ್ ಸರ್ಕಾರ ಅಥವಾ ಇನ್ನಾವುದೇ ಸರ್ಕಾರ – ಇವುಗಳಲ್ಲಿ ಯಾವುದನ್ನು ನೀವು ಇಷ್ಟಪಡುತ್ತೀರಿ' ಎಂದು ಯಾರಾದರೂ ಪ್ರಶ್ನಿಸಿದರೆ, 'ಇಂಗ್ಲಿಷ್ ಸರ್ಕಾರವನ್ನೇ; ಹಿಂದೂ ಸರ್ಕಾರಕ್ಕಿಂತಲೂ ಹೆಚ್ಚಾಗಿ' ಎಂದೇ ನಾವೆಲ್ಲ ಉತ್ತರಿಸುತ್ತೇವೆ. ಭಾರತೀಯರನ್ನು ಒಂದುಗೂಡಿಸುವ ಶಕ್ತಿಯಾಗಿ ರಾಷ್ಟ್ರೀಯ ಭಾವನೆಯು ಬೆಳೆದದ್ದು ೧೯ನೆಯ ಶತಮಾನದಲ್ಲಿಯೇ.

ಪಾಶ್ಚಾತ್ಯರು ಹಿಂದೂ ಸಮಾಜದ ಮೇಲೆ ಬೀರಿದ ಪ್ರಭಾವಕ್ಕೆ ಭಾರತೀಯರು ತೋರಿಸಿದ ವಿಶಿಷ್ಟ ಮನೋಭಾವದ ಪರಿಣಾಮವಾಗಿ, ರಾಜಕೀಯ ಚಳವಳಿಯ ಹೊಸ ಶಕ್ತಿಯನ್ನು ಪಡೆಯಿತು. ಹಿಂದೂ ಮತ್ತು ಇಸ್ಲಾಮ್ ಧರ್ಮಗಳೆರಡಕ್ಕೂ ಬ್ರಿಟಿಷರು ಸಮಾನವಾದ ಸ್ಥಾನಮಾನಗಳನ್ನು ನೀಡಿದ್ದುದರಿಂದ, ಬಂಗಾಳ ಹಾಗೂ ಗಂಗಾನದೀ ಕಣಿವೆ ಪ್ರದೇಶಗಳಲ್ಲಿನ ಹಿಂದೂ ಧಾರ್ಮಿಕ ಮುಖಂಡರು ಬ್ರಿಟಿಷ್ ಆಡಳಿತವನ್ನು ಸ್ವಾಗತಿಸಿದರು. ಮೊಹಮ್ಮದ್ ಘೋರಿಯು ಮೊತ್ತಮೊದಲ ಬಾರಿಗೆ ಹಿಂದೂಗಳನ್ನು ಜಯಿಸಿದುದರಿಂದ ಹಿಡಿದು, ಬ್ರಿಟಿಷರು ಗಂಗಾನದೀ ಕಣಿವೆ ಪ್ರದೇಶಗಳನ್ನು ತಮ್ಮ ಪ್ರಭುತ್ವಕ್ಕೆ ಸೇರಿಸಿಕೊಳ್ಳುವವರೆಗೆ ಹಿಂದೂ ಧರ್ಮವು ಪರಾಧೀನ ಜನರ ಧರ್ಮವಷ್ಟೇ ಆಗಿ ಉಳಿದಿತ್ತು. ಆದರೆ, ಇಸ್ಲಾಮ್‌ಗೆ ಸರಿಸಮನಾದ ಸ್ಥಾನಮಾನಗಳು ದೊರೆತಾಗ, ಪಂಡಿತರು ವಾರನ್ ಹೇಸ್ಟಿಂಗ್ಸ್‌ನಿಗೆ ಮಾಡಿಕೊಂಡ ಮನವಿಯಿಂದ ತಿಳಿದುಬರುವಂತೆ, ತಮ್ಮ ಸ್ಥಾನಮಾನಗಳನ್ನು ಏರಿಸಿದ ಬ್ರಿಟಿಷರಿಗೆ ಹಿಂದೂಗಳು ಕೃತಜ್ಞತೆಯನ್ನು ಸಮರ್ಪಿಸಿದರು. ಕಾಳಿದಾಸನ 'ಶಾಕುಂತಲ' ನಾಟಕವನ್ನು ಇಂಗ್ಲಿಷಿಗೆ ಭಾಷಾಂತರಿಸಿದ ಸರ್ ವಿಲಿಯಮ್ ಜೋನ್ಸ್ ಮತ್ತು 'ಭಗವದ್ಗೀತೆ'ಯನ್ನು ಇಂಗ್ಲಿಷಿಗೆ ಅನುವಾದಿಸಿ, ಅನಂತರ ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ಸ್‌ನ ಪ್ರಸ್ತಾವನೆಯೊಂದಿಗೆ ಪ್ರಕಟಿಸಿದ ಚಾರ್ಲ್ಸ್ ವಿಲ್ಕಿನ್ಸ್– ಇವರ ಕಾರ್ಯಚಟುವಟಿಕೆಗಳು ಕೂಡ, ಬ್ರಿಟಿಷ್ ಆಡಳಿತದ ಸನ್ನಿವೇಶದಲ್ಲಿ ಉಂಟಾದ ಬದಲಾವಣೆಯನ್ನು

ಸೂಚಿಸುತ್ತವೆ. ಬ್ರಿಟಿಷರ ಇಂತಹ ಸಹಕರಿಸುವ ಮನೋಭಾವವು ಕೊನೆಯವರೆಗೂ ಮುಂದುವರಿಯಿತು.

ಹೀಗೆ ಹಿಂದೂಗಳು ರಾಜಕೀಯ ದೃಷ್ಟಿಯಿಂದ ಅಸಂತೃಪ್ತರಾಗಿರಲಿಲ್ಲ. ಅವರು ಬ್ರಿಟಿಷರ ಆಡಳಿತವನ್ನು ದ್ವೇಷಿಸುತ್ತಲೂ ಇರಲಿಲ್ಲ. ಆದರೂ ಹಿಂದೂ ಧರ್ಮ ಹಾಗೂ ಪಾಶ್ಚಾತ್ಯರ ಸಾಮಾಜಿಕ ಸಂಘಟನೆ– ಇವುಗಳ ನಡುವೆ ಇರುವ ಮೂಲಭೂತ ವ್ಯತ್ಯಾಸಗಳನ್ನು ಅವರು ಮನಗಂಡಿದ್ದರು. ಇಂತಹ ತಿಳಿವಳಿಕೆಯಿಂದಾಗಿಯೇ, ಉತ್ತರ ಭಾರತದಲ್ಲಿ ಬ್ರಹ್ಮಸಮಾಜದ ಮೂಲಕ ರಾಜಾ ರಾಮ್ ಮೋಹನ್ ರಾಯ್ ಅವರು ದಕ್ಷಿಣ ಭಾರತದಲ್ಲಿ ಶ್ರೀ ನಾರಾಯಣ ಗುರು ಅವರೂ ವಿವಿಧ ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಣೆಗಳನ್ನು ಕೈಗೊಳ್ಳಲು ಸಾಧ್ಯವಾಯಿತು. ಸದ್ದುಗದ್ದಲವಿಲ್ಲದೆ ನಡೆಸಿದ್ದಾಗ್ಯೂ, ಅಸಾಧಾರಣವೆನಿಸಿದ ಈ ಧಾರ್ಮಿಕ ಪುನರುತ್ಥಾನವು ಹಿಂದೂ ಧರ್ಮಕ್ಕೆ ನವಚೈತನ್ಯವನ್ನು ನೀಡಿತು. ಈ ಬಗ್ಗೆ ಹೆಚ್ಚು ಚರ್ಚಿಸುವ ಉದ್ದೇಶ ನಮಗಿಲ್ಲ. ಯಾವುದೇ ಅಪೌರುಷೇಯ ಪತ್ಯ, ಸರ್ವೋಚ್ಚ ಪ್ರಮಾಣಗ್ರಂಥ ಹಾಗೂ ಅಧಿಕೃತ ಸಿದ್ಧಾಂತಗಳನ್ನು ಹೊಂದಿರದ, ಮತ್ತು ಅಸಂಖ್ಯಾತ ಪಂಥಗಳಾಗಿ ಒಡೆದುಹೋದ ಈ ಪ್ರಾಚೀನ ಹಿಂದೂ ಧರ್ಮವು ಕೇವಲ ನೂರು ವರ್ಷಗಳ ಅವಧಿಯಲ್ಲಿ, ಮುನ್ನೂರು ಮಿಲಿಯದಷ್ಟು ಜನರ ಜೀವನಕ್ಕೆ ಮೂಲಾಧಾರವಾಗಿ ತನ್ನಂತಾನೇ ರೂಪಾಂತರಗೊಂಡಿತೆಂಬುದು, ಭಾರತೀಯ ಇತಿಹಾಸದ ಅತ್ಯಂತ ಮುಖ್ಯ ಅಧ್ಯಾಯಗಳಲ್ಲಿ ಒಂದಾಗಿದೆ. ಈ ಮಹಾ ಉತ್ಥಾನಕ್ಕೆ ಸಂಬಂಧಿಸಿದ ಎರಡು ಅಂಶಗಳನ್ನು ಹೇಳಿದರೆ ಸಾಕೆನಿಸುತ್ತದೆ. ಮೊದಲನೆಯದಾಗಿ, ಈ ಕಾಲದಲ್ಲಿ ಜನಪ್ರಿಯತೆಯನ್ನು ಗಳಿಸಿದ ಪ್ರತಿಯೊಂದು ಪಂಥ, ಪಂಗಡ ಅಥವಾ ಸುಧಾರಣಾ ಚಳವಳಿಯು, ಯಾವುದೇ ಹೊಸ ಧಾರ್ಮಿಕ ಸಂದೇಶವನ್ನು ತಿಳಿಯಪಡಿಸುವ ಉದ್ದೇಶವನ್ನು ಹೊಂದಿರಲಿಲ್ಲ. ಬದಲಾಗಿ, ಪ್ರಾಚೀನ (ಧಾರ್ಮಿಕ) ಕೃತಿಗಳಿಗೆ ವ್ಯಾಖ್ಯಾನ ನೀಡುವುದರ ಮೂಲಕ, ಹಿಂದೂಗಳಲ್ಲಿ ಸಾಮಾಜಿಕ ಅರಿವನ್ನು ಮೂಡಿಸುವುದು ಅವುಗಳ ಪ್ರಯತ್ನವಾಗಿತ್ತು. ಬ್ರಹ್ಮಸಮಾಜವು ನಿರ್ದಿಷ್ಟವಾಗಿ ಯಾವುದೇ ಜಾತಿಯನ್ನು ಗಣನೆಗೆ ತೆಗೆದುಕೊಳ್ಳದೆ, ಆಧುನಿಕ ವಿಚಾರಗಳಿಗೆ ವಿರುದ್ಧವೆಂದು ಕಂಡುಬರುವ ಎಲ್ಲ ಸಾಮಾಜಿಕ ಆಚರಣೆಗಳನ್ನು ನಿಷೇಧಿಸಿತು. ಆರ್ಯಸಮಾಜವೂ ಸರ್ವಸಮಾನವತಾಭಾವದ ಸಿದ್ಧಾಂತಗಳ ಹೊರತಾಗಿ, ಇನ್ನಾವ ಸಾಮಾಜಿಕ ಉದ್ದೇಶವನ್ನು ಇರಿಸಿಕೊಂಡಿರಲಿಲ್ಲ. ಸಮಾಜಸೇವೆಯು ರಾಮಕೃಷ್ಣ ಮಿಷನ್ (ಮಠದ) ಮೂಲಭೂತ ಉದ್ದೇಶಗಳಲ್ಲಿ ಒಂದಾಗಿತ್ತು. ಸುಮಾರು ೫೦ ವರ್ಷಗಳಿಗಿಂತ ಹೆಚ್ಚು ಕಾಲ ಸಕ್ರಿಯ ಚಟುವಟಿಕೆಗಳನ್ನು ನಡೆಸಿ, ಅದು ಹೆಚ್ಚು ಹೆಚ್ಚು ಶಕ್ತಿಯನ್ನೂ ಜನಪ್ರಿಯತೆಯನ್ನೂ ಗಳಿಸಿತು. ಸ್ಥೂಲವಾಗಿ ಹೇಳುವುದಾದರೆ, ಸಮಾಜಸೇವೆಯೇ ಈ ಕಾಲದ ಎಲ್ಲ

ಹಿಂದೂ ಧಾರ್ಮಿಕ ಚಳವಳಿಗಳ ಉದ್ದೇಶವಾಗಿದ್ದು, ಒಟ್ಟಿನಲ್ಲಿ ಇವು ಹಿಂದೂಗಳಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಿದವು– ಆ ಹಿಂದೆ ಹಿಂದೂಗಳಲ್ಲಿ ಸಾಮಾಜಿಕ ಪ್ರಜ್ಞೆ ಇಲ್ಲದಿದ್ದುದೇ ಹಿಂದೂ ಧರ್ಮದ ಮುಖ್ಯ ದೌರ್ಬಲ್ಯವಾಗಿತ್ತು.

ಎರಡನೆಯದಾಗಿ, ಆಗ ಪ್ರಾರಂಭವಾದ ಧಾರ್ಮಿಕ ಸುಧಾರಣೆಗಳು ಮೂಲತಃ ಸ್ಥಳೀಯ ಪಂಥಗಳನ್ನು ಆಧರಿಸಿದ್ದರೂ, ಅನತಿಕಾಲದಲ್ಲಿಯೇ ಅವು ಅಖಿಲ–ಭಾರತ ಗುಣಲಕ್ಷಣಗಳನ್ನು ಹೊಂದಿ, ಹಿಂದೂ ಧರ್ಮದ ಮೇಲೆ ಗಾಢವಾದ ಪ್ರಭಾವವನ್ನು ಬೀರಿದವು. ಬ್ರಹ್ಮ ಸಮಾಜವು ಕಾರ್ಯತಃ ಬಂಗಾಳಕ್ಕಷ್ಟೇ ಸೀಮಿತವಾಗಿತ್ತು. ಆರ್ಯ ಸಮಾಜವೂ ಮುಖ್ಯವಾಗಿ ಒಂದು ಪಂಜಾಬಿ ಚಳವಳಿಯಾಗಿತ್ತು. ರಾಧಾ ಸೋಮಿಗಳು ಪಂಜಾಬ್ ಮತ್ತು ಉತ್ತರ ಪ್ರದೇಶಗಳಲ್ಲಿ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಹೀಗೆ ನಿರ್ದಿಷ್ಟ ಪ್ರದೇಶಗಳಿಗೆ ಸೀಮಿತವಾಗಿ ಮಾತ್ರ ಧಾರ್ಮಿಕ ಚಳವಳಿಗಳು ಮುಂದುವರಿದಿದ್ದರೆ, ಆಗ ಹಿಂದೂಗಳು ಒಗ್ಗೂಡುವುದಕ್ಕೆ ಮಾತ್ರವಲ್ಲದೆ, ಭಾರತದ ರಾಜಕೀಯ ಏಕತೆಗೇ ಅಪಾಯವು ಎದುರಾಗುತ್ತಿತ್ತು. ೧೯ನೆಯ ಶತಮಾನದ ಕೊನೆಯ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ, ಈ ಅಪಾಯಕರ ಪ್ರವೃತ್ತಿ ಮುಂದುವರಿಯದಂತೆ ತಡೆದ ಇಬ್ಬರು ಮಹಾನುಭಾವರೇ ಸ್ವಾಮಿ ವಿವೇಕಾನಂದ ಹಾಗೂ ಲೋಕಮಾನ್ಯ ತಿಲಕ್. ಅಖಿಲ ಭಾರತ ಖ್ಯಾತಿಯನ್ನು ಹೊಂದಿದ ಸ್ವಾಮಿ ವಿವೇಕಾನಂದರು ಯಾವುದೇ ಒಂದು ನಿರ್ದಿಷ್ಟ ಪಂಗಡದ ಪಂಥವಾಗಿ ಹಿಂದೂ ಧರ್ಮವನ್ನು ಬೋಧಿಸಲಿಲ್ಲ. ಅವರು ವೇದಾಂತದ ಆಧಾರದ ಮೇಲೆ ಹಿಂದೂ ಧರ್ಮಕ್ಕೆ ವಿಶ್ವವ್ಯಾಪಿ ಮಾನ್ಯತೆಯನ್ನು ಒದಗಿಸಿಕೊಟ್ಟರು. ಲೋಕಮಾನ್ಯ ತಿಲಕರು 'ಭಗವದ್ಗೀತೆ'ಯಿಂದ ಸ್ಫೂರ್ತಿ ಪಡೆದು, ಹಿಂದೂ ಧರ್ಮದ ಕ್ರಿಯಾತ್ಮಕ ಗುಣಲಕ್ಷಣಗಳನ್ನು ಆಧರಿಸಿದ ಹೊಸ ಧಾರ್ಮಿಕ ರಾಷ್ಟ್ರೀಯತಾ ಚಳವಳಿಗೆ ಚಾಲನೆ ನೀಡಿದರು.

ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ವಿಸ್ತರಿಸಿದ ಏಕಮಾತ್ರ ರಾಷ್ಟ್ರವಾಗಿ ನಾವು ಒಗ್ಗೂಡಿದ್ದಾಗಲೂ ೧೯ನೆಯ ಶತಮಾನದ ಪ್ರಾರಂಭದಲ್ಲಿ ತನ್ನ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಏಕತೆಗಳನ್ನೂ ಕಳೆದುಕೊಳ್ಳುವ ಅವನತ ಸ್ಥಿತಿಯನ್ನು ಭಾರತವು ತಲುಪಿತ್ತು ಎಂಬುದು ಈಗ ನಮಗೆ ಮರೆತುಹೋಗುತ್ತಿದೆ. ಆಗ ಭಾರತದಲ್ಲಿ ಇದ್ದಂತಹ ರಾಷ್ಟ್ರಪ್ರೇಮದ ಭಾವನೆ ಸ್ಥಳೀಯವಾಗಿತ್ತು. ಅಥವಾ ಇತರರನ್ನು ಪ್ರಚೋದಿಸುವಂತಿತ್ತು ಅಷ್ಟೇ! ಭಾರತೀಯ ವಿದ್ಯಾಭವನದ ಉದ್ಘಾಟನಾ ಸಮಾರಂಭದ ತಮ್ಮ ಉಪನ್ಯಾಸಗಳಲ್ಲಿ ಡಾ. ಆರ್.ಸಿ. ಮಜುಮ್‌ದಾರ್ ಅವರು ಸ್ಪಷ್ಟಪಡಿಸಿದಂತೆ, ೧೯ನೆಯ ಶತಮಾನದ ಪ್ರಾರಂಭ ಕಾಲದಲ್ಲಿ ಭಾರತೀಯರಲ್ಲಿ ರಾಷ್ಟ್ರೀಯತಾ ಮನೋಭಾವ ಇದ್ದಿರಲಿಲ್ಲ. ವಾಸ್ತವವಾಗಿ ಹೇಳುವುದದರೆ, ೧೮ನೆಯ ಶತಮಾನದ ಭಾರತದ ರಾಜರುಗಳು ಬಹುತೇಕ ಸಂದರ್ಭಗಳಲ್ಲಿ ಬ್ರಿಟಿಷರೊಂದಿಗೆ ಮೈತ್ರಿಯನ್ನು

ಬೆಳೆಸಿಕೊಂಡು ಭಾರತದ ಇತರ ರಾಜರುಗಳ ವಿರುದ್ಧ ಹೋರಾಡುತ್ತಿದ್ದರೇ ವಿನಾ, ತಾವು ತಾವೇ ಒಂದುಗೂಡಿ, ಬ್ರಿಟಿಷರ ವಿರುದ್ಧವಾಗಿ ಹೋರಾಡುತ್ತಿರಲಿಲ್ಲ. ಉದಾಹರಣೆಗೆ, ಔಧ್‌ನ ನವಾಬನು ಬ್ರಿಟಿಷರ ಸ್ನೇಹ ಬೆಳೆಸಿ ಮರಾಠರ ವಿರುದ್ಧ ಯುದ್ಧ ನಡೆಸಿದ್ದ. ಅಂತೆಯೇ ರಜಪೂತ್ ದೊರೆಗಳು ಕೂಡ ಮರಾಠರಿಂದ ರಕ್ಷಣೆ ಪಡೆಯಲು ಬ್ರಿಟಿಷರ ಗೆಳೆತನ ಬೆಳೆಸಿದ್ದರು. ಪೂನಾದಲ್ಲಿ ಪೇಶ್ವೆಗಳೊಂದಿಗೆ ಹೋರಾಡುವಾಗ ರಘೋಬಾ ತನ್ನನ್ನೇ ಬ್ರಿಟಿಷರಿಗೆ ಮಾರಿಕೊಂಡಿದ್ದ. ಟಿಪ್ಪುವಿನೊಡನೆ ಯುದ್ಧ ಮಾಡುವ ಸಂದರ್ಭದಲ್ಲಿ ನಿಜಾಮನ ಸೇನೆಗಳು ದಂಡಯಾತ್ರೆ ಮಾಡಿದ್ದೂ ಬ್ರಿಟೀಷರ ಸೇನೆಗಳೊಂದಿಗೇ.

ಪ್ರಾದೇಶಿಕ ಭಾಷೆಗಳ ಬೆಳವಣಿಗೆ ಹಾಗೂ ಸ್ಥಳೀಯ ಧಾರ್ಮಿಕ ಪಂಥಗಳ ಉದಯಗಳೊಂದಿಗೆ, ಭಾರತವು ಒಡೆದುಹೋಗುವ ಗಂಭೀರವಾದ ಅಪಾಯಕರ ಪರಿಸ್ಥಿತಿ ಎದುರಾಗಿತ್ತು. ಇದಕ್ಕೆ ಬ್ರಿಟಿಷರ ಉದ್ದೇಶಪೂರ್ವಕವಾದ ಕಾರ್ಯಚಟುವಟಿಕೆ ಕಾರಣವಾಗಿರಲಿಲ್ಲ. ಭಾರತೀಯರಲ್ಲಿ ರಾಷ್ಟ್ರೀಯತೆಯ ಹಾಗೂ 'ಸ್ವಧರ್ಮ'ದ ಮನೋಭಾವ ಇಲ್ಲದಿದ್ದುದೇ ಇದಕ್ಕೆ ನಿಜವಾದ ಕಾರಣ. ಈ ದುರದೃಷ್ಟಕರ ಪರಿಸ್ಥಿತಿಯಿಂದ ಭಾರತವನ್ನು ರಕ್ಷಿಸಿದ ಕೀರ್ತಿಯು ಬಂಗಾಳಕ್ಕೆ ಸಲ್ಲುತ್ತದೆ. ೧೯ನೆಯ ಶತಮಾನದಲ್ಲಿ ಬಂಗಾಳದ ನಾಯಕರು ನಡೆಸಿದ ಕಾರ್ಯ ಚಟುವಟಿಕೆ ಸ್ತುತ್ಯರ್ಹವಾಗಿದೆ. ೧೯ನೆಯ ಶತಮಾನದಷ್ಟು ಹಿಂದೆಯೇ ಬಂಗಾಳದ ಪ್ರಜ್ಞಾವಂತ ಮುಖಂಡರು ಬೆಳೆಸಿಕೊಂಡ ರಾಷ್ಟ್ರೀಯತೆಯ ತೀಕ್ಷ್ಣ ಮನೋಭಾವವು, ಪ್ರಾರಂಭದಲ್ಲಿ ಬಂಗಾಳದಲ್ಲಷ್ಟೇ ಕೇಂದ್ರೀಕೃತವಾಗಿದ್ದರೂ, ಅನಂತರ ಭಾರತದ ಆದ್ಯಂತ ವ್ಯಾಪಿಸಿತು. ನಿಜವಾಗಿ ಹೇಳುವುದಾದರೆ, ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಗಲು (೧೮೮೫) ಕೂಡ ಬಂಗಾಳದ ಮುಖಂಡರುಗಳ ಪರಿಶ್ರಮ ಮತ್ತು ದೂರದೃಷ್ಟಿಗಳೇ ಕಾರಣ. ರಾಷ್ಟ್ರೀಯ ಗುಣಲಕ್ಷಣಗಳನ್ನು ಹೊಂದಿದ ಅವರ ಬಹುತೇಕ ಕಾರ್ಯಚಟುವಟಿಕೆಗಳು ಮೊದಮೊದಲು ಬಂಗಾಳಕ್ಕಷ್ಟೇ ಸೀಮಿತವಾಗಿದ್ದವು. ೧೭೬೫ರಿಂದಲೂ ಬಂಗಾಳವು ಈಸ್ಟ್ ಇಂಡಿಯಾ ಕಂಪನಿಯ ನೇರ ಆಡಳಿತದಲ್ಲಿತ್ತು. ಕಂಪನಿಯು ಮರಾಠರ ತಾಯ್ನಾಡನ್ನು ಜಯಿಸಿ, ಅದನ್ನು ತನ್ನ ಆಡಳಿತ ಪ್ರದೇಶಗಳಿಗೆ ಸೇರಿಸಿಕೊಳ್ಳುವುದಕ್ಕಿಂತಲೂ ಮೊದಲೇ ಬಂಗಾಳದಲ್ಲಿ ಸುಶಿಕ್ಷಿತ ಮಧ್ಯಮ ವರ್ಗವೊಂದು ಬೆಳೆದುಬಂದಿತ್ತು. ಮದ್ರಾಸಿನಲ್ಲಿ ಕೂಡ ಇಂತಹ ಪರಿಸ್ಥಿತಿಯಿತ್ತು. ಶತಮಾನದ ಪ್ರಾರಂಭದಲ್ಲಿ ಆರ್ಕಾಟಿನ ನವಾಬನಿಗೆ ಸೇರಿದ ಪ್ರದೇಶಗಳನ್ನು ಕಂಪನಿಯು ವಶಪಡಿಸಿಕೊಳ್ಳುವವರೆಗೆ ಬ್ರಿಟಿಷರ ಆಡಳಿತವು ಆರ್ಕಾಟ್ ನಗರಕ್ಕಷ್ಟೇ ಸೀಮಿತವಾಗಿತ್ತು. ಕಾರಣವೇನೇ ಇದ್ದಿರಲಿ, ಈ ಶತಮಾನದ ಮೊದಲ ೫೦ ವರ್ಷಗಳಿಗಿಂತ ಹೆಚ್ಚು ಕಾಲ, ಬಂಗಾಳದ ಜನರ ಮೇಲೆ ಬ್ರಿಟಿಷರು ದಟ್ಟ ಪ್ರಭಾವವನ್ನು ಬೀರಿದ್ದರು. ಅಲ್ಲದೆ ಕಲ್ಕತ್ತವು ಭಾರತದ ರಾಜಧಾನಿಯಾಗಿದ್ದು, ಅಲ್ಲಿ ಉತ್ಸಾಹದಿಂದ

ಕೂಡಿದಂತಹ ಮುದ್ರಣ ಹಾಗೂ ಪತ್ರಿಕೋದ್ಯಮ ಚಟುವಟಿಕೆಗಳು ಆ ಮುನ್ನವೇ ಪ್ರಾರಂಭವಾಗಿದ್ದವು.

೧೯ನೆಯ ಶತಮಾನದ ಮೊದಲ ಐವತ್ತು ವರ್ಷಗಳ ಅವಧಿಯಲ್ಲಿ ಬಂಗಾಳದ ಸುಶಿಕ್ಷಿತ ಮಧ್ಯಮ ವರ್ಗಕ್ಕೆ ಸೇರಿದ ಜನರು, ನಿಸ್ಸಂದೇಹವಾಗಿ, ಭಾರತದಲ್ಲಿ ರಾಷ್ಟ್ರೀಯತಾ ಭಾವನೆಯನ್ನು ಮೂಡಿಸಿದ ಮೊದಲಿಗರಾಗಿದ್ದಾರೆ. ಆಂಶಿಕವಾಗಿ ರಾಜಾರಾಮ್ ಮೋಹನ್ ರಾಯ್ ಅವರು ನಡೆಸಿದ ಪ್ರತಿಭಟನೆಯ ಪರಿಣಾಮವಾಗಿ ಹಾಗೂ ಆಂಶಿಕವಾಗಿ, ತಮ್ಮದೇ ಆದ ಹಕ್ಕುಗಳನ್ನು ನೀಡಲು ಆಗ್ರಹಿಸುತ್ತಿರುವ, ಅಧಿಕಾರದಲ್ಲಿ ಇಲ್ಲದ, ಐರೋಪ್ಯೇತರ ಸಮುದಾಯವಿರುವುದರಿಂದಾಗಿ, (ಉದಾಹರಣೆಗೆ, ಸಿಲ್ಕ್ ಬಕ್ಕಿಂಗ್ ಹ್ಯಾಮ್‌ನ ಅಪೂರ್ವ ಪ್ರಕರಣ) ಭಾರತದಲ್ಲಿ (೧೮೩೫ರಿಂದಲೂ) ಮುದ್ರಣ ಚಟುವಟಿಕೆಗಳಿಗೆ ಸ್ವಾತಂತ್ರ್ಯವಿತ್ತು. ಈ ಸ್ವಾತಂತ್ರ್ಯವನ್ನು ಬಂಗಾಳಿಗಳು ಮಾತ್ರ ಸದುಪಯೋಗಪಡಿಸಿಕೊಂಡರು. ರಾಷ್ಟ್ರೀಯ ಉದ್ದೇಶಗಳನ್ನು ಸಮರ್ಥಿಸುವ ಬಂಗಾಳಿಗಳ ಉತ್ಸಾಹಪೂರ್ಣ ಪತ್ರಿಕೋದ್ಯಮವು ೧೯ನೆಯ ಶತಮಾನದ ಪೂರ್ವಾರ್ಧ ಭಾಗದಲ್ಲಿ ವಿಶೇಷ ಪ್ರಾಮುಖ್ಯವನ್ನು ಗಳಿಸಿತ್ತು. ಸಿಪಾಯಿಗಳ ದಂಗೆಯಿಂದಾಗಿ ಭಾರತದ ಆದ್ಯಂತ ಭಯದ ಕತ್ತಲೆ ಆವರಿಸಿದ್ದರೂ, ರಾಷ್ಟ್ರೀಯತಾ ಮನೋಭಾವವು ಬೆಳೆಯುವುದು ಮುಂದುವರಿದಿತ್ತು. ಈ ಭಾವನೆಯು ಬಂಗಾಳದಿಂದ ಭಾರತದ ಇತರ ಎಲ್ಲ ಭಾಗಗಳಿಗೆ ಪ್ರಸಾರವಾದ್ದರಿಂದಲೇ ೧೮೮೫ರಲ್ಲಿ ಭಾರತೀಯ ರಾಷ್ಟ್ರೀಯತಾ ಕಾಂಗ್ರೆಸ್‌ನ ಉದಯವಾಯಿತು.

ಆಧುನಿಕ ಅರ್ಥದಲ್ಲಿ ರಾಷ್ಟ್ರೀಯತೆಯ ಭಾವನೆಯನ್ನು ಸಮಗ್ರ ಭಾರತದಲ್ಲಿ ವೈಯಕ್ತಿಕವಾಗಿ ಪ್ರಚುರಪಡಿಸಿದ ಕೀರ್ತಿ ರಾಮ್‌ನಾರಾಯಣ ಬಸು ಅವರಿಗೆ ಸಲ್ಲಬೇಕಾಗಿದೆ. ಆದರೆ ಬಂಗಾಳದ ಹೊರಗಿನ ಪ್ರದೇಶಗಳಿಗೆ ಇವರ ಬಗ್ಗೆ ಹೆಚ್ಚು ತಿಳಿದಿಲ್ಲ. ಅವರು ಶ್ರೀ ಅರವಿಂದರ ತಾಯಿಯ ತಂದೆ ಎಂಬುದು ಸ್ವಾರಸ್ಯಕರವಾದ ವಿಷಯವಾಗಿದೆ. ೧೮೬೧ರಷ್ಟು ಹಿಂದೆಯೇ, ಮಹಾದಂಗೆಯನ್ನು ಅಡಗಿಸಿದ ಮೂರು ವರ್ಷಗಳ ತರುವಾಯ, ರಾಷ್ಟ್ರೀಯತಾ ಮನೋಭಾವವನ್ನು ಪ್ರಸಾರ ಮಾಡುವ ಉದ್ದೇಶದಿಂದ ರಾಮ್‌ನಾರಾಯಣ್ ಬಸು ಅವರು ಒಂದು ಸಂಸ್ಥೆಯನ್ನು ಸ್ಥಾಪಿಸಿದರು. ಆ ಕಾಲದಲ್ಲಿಯೇ ಅವರು ಹೀಗೆ ಬರೆದಿದ್ದರು: "ಭಾರತವು ನಮ್ಮ ಜನ್ಮಭೂಮಿ; ನಮ್ಮ ಪ್ರಾಣವನ್ನು ತೆತ್ತಾದರೂ ನಾವು ದೇಶದ ಸೇವೆಯನ್ನು ಮಾಡಬೇಕು. ನಾವು ಮುಸ್ಲಿಮರೊಂದಿಗೆ ಕೈಜೋಡಿಸುತ್ತೇವೆ... ಪ್ರಾಚೀನ ಭಾರತದಲ್ಲಿ ಕಂಡುಬಂದಂತೆ, ದೇಶಕ್ಕೆ ಉನ್ನತ ಗೌರವ ನೀಡುವಂತೆ ಅವರನ್ನು ಪ್ರಚೋದಿಸುತ್ತೇವೆ... ಹಿಂದಿನ ಗೌರವಕ್ಕಿಂತಲೂ ಅಧಿಕವಾದ ಘನತೆ–ಗೌರವಗಳು ಭಾರತಕ್ಕೆ ಲಭಿಸುವಂತೆ ನಾವು ಮಾಡುತ್ತೇವೆ." ನಿವಾಗಿಯೂ ಇದು ಭಾರತದ ರಾಷ್ಟ್ರೀಯ ಉತ್ಸಾಹದ ಪ್ರಪ್ರಥಮ ಅಭಿವ್ಯಕ್ತಿಯಾಗಿದೆ.

೪೦೦ ವರ್ಷಗಳಿಗಿಂತ ಹೆಚ್ಚು ಕಾಲ ಒಟ್ಟೋಮನ್ ಆಡಳಿತದಲ್ಲಿದ್ದ ಬಾಲ್ಕನ್ ಎಂಬ ಅತಿ ಚಿಕ್ಕ ಪರ್ಯಾಯದ್ವೀಪದ ೧೯ನೆಯ ಶತಮಾನದಲ್ಲಿ ಉದಾಹರಣೆಯು ತೋರಿಸುವಂತೆ, ಬ್ರಿಟಿಷರ ಅಧೀನದಲ್ಲಿ ಸ್ವಾತಂತ್ರ್ಯವನ್ನು ಕಳೆದುಕೊಂಡುದರ ಪರಿಣಾಮವಾಗಿ ಜನರಲ್ಲಿ ಮೂಡಿದ ರಾಜಕೀಯ ರಾಷ್ಟ್ರೀಯ ಮನೋಭಾವದಿಂದ ಮಾತ್ರವೇ ಭಾರತವನ್ನು ರಕ್ಷಿಸಲು ಸಾಧ್ಯವಾಗುತ್ತಿರಲಿಲ್ಲ. ಭಾರತದ ರಾಷ್ಟ್ರೀಯತೆಗೆ ಕ್ರಿಯಾಸಾಮರ್ಥ್ಯವನ್ನು ನೀಡಿ, ಕನಿಷ್ಠಪಕ್ಷ ಭಾರತದ ಪ್ರಮುಖ ಪ್ರದೇಶಗಳು ಒಂದು ರಾಷ್ಟ್ರವಾಗಿ ಒಗ್ಗೂಡುವಂತೆ ಮಾಡಿದ ಕೀರ್ತಿ ಸ್ವಾಮಿ ವಿವೇಕಾನಂದರಿಗೆ ಸಲ್ಲುತ್ತದೆ. ಅವರು ಹಿಂದೂಗಳಲ್ಲಿ 'ನಾವೆಲ್ಲ ಒಂದೇ ಸಮುದಾಯಕ್ಕೆ ಸೇರಿದವರು' ಎಂಬ ಭಾವನೆಯನ್ನು ಮೂಡಿಸಿದರು. ಈ ಹೊಸ ಶಂಕರಾಚಾರ್ಯರನ್ನು ಹಿಂದೂ ಭಾವನೆಗಳನ್ನು ಒಂದುಗೂಡಿಸಿದ ಮಹಾನುಭಾವರೆಂದು ನಾವು ಪರಿಗಣಿಸಬಹುದು. ಭಾರತದ ಆದ್ಯಂತ ಪ್ರವಾಸವನ್ನು ಕೈಗೊಂಡ ಸ್ವಾಮಿ ವಿವೇಕಾನಂದರು ಜನರಲ್ಲಿ ಹಿಂದೂ ಮನೋಭಾವವನ್ನು ಬೆಳೆಸಿದುದಷ್ಟೇ ಅಲ್ಲದೆ, ನವ ಹಿಂದೂ ಸುಧಾರಣೆಯ ಹಿನ್ನೆಲೆಯಾಗಿ ಸಾರ್ವತ್ರಿಕ ವೇದಾಂತದ ತತ್ತ್ವಗಳನ್ನು ಬೋಧಿಸಿದರು. ಹಿಂದೆಯೇ ನಾವು ಗಮನಿಸಿದಂತೆ, ಅವರಿಗಿಂತ ಮೊದಲು ನಡೆದ ಹಿಂದೂ ಧಾರ್ಮಿಕ ಚಳವಳಿಗಳೆಲ್ಲ ಸ್ಥಳೀಯವೂ ಪಂಥೀಯವೂ ಆಗಿದ್ದವು. ಅವು ಅಖಿಲ ಭಾರತದ ಮೇಲೆ ಪ್ರಭಾವ ಬೀರುವಷ್ಟು ಮುಖ್ಯವಾಗಿರಲಿಲ್ಲ. ಆರ್ಯಸಮಾಜ, ಬ್ರಹ್ಮಸಮಾಜ, ದೇವಸಮಾಜಗಳು ಹಾಗೂ ಮತ್ತಿತರ ಸಂಘ ಸಂಸ್ಥೆಗಳ ಚಳವಳಿಗಳು ತಮ್ಮಷ್ಟಕ್ಕೆ ಅತ್ಯಂತ ಉಪಯುಕ್ತವಾಗಿದ್ದರೂ, ಅವು ಸುಧಾರಣಾ ಚಳವಳಿಗಳ ಪ್ರಾದೇಶಿಕ ಗುಣಲಕ್ಷಣಗಳನ್ನಷ್ಟೇ ಹೊಂದಿದ್ದವು. ಆದರೆ ಸ್ವಾಮಿ ವಿವೇಕಾನಂದರು ಹಿಂದೂ ಧಾರ್ಮಿಕ ಚಳವಳಿಗಳಿಗೆ ರಾಷ್ಟ್ರೀಯತೆಯ ಸಂವೇದನೆಯನ್ನು ನೀಡಿ, ಅವು ಅಖಿಲ ಭಾರತ ವ್ಯಾಪ್ತಿಯನ್ನು ಪಡೆಯುವಂತೆ ಮಾಡಿದರು.

ಇತರ ಸಂಘ ಸಂಸ್ಥೆಗಳು ಮುಖ್ಯವಾಗಿ ಭಾರತದ ಆದ್ಯಂತ ಕಾರ್ಯ ಚಟುವಟಿಕೆಗಳನ್ನು ಕೈಗೊಂಡ ಥಿಯಾಸೊಫಿಷಲ್ ಸೊಸೈಟಿ ಕೂಡ ಈ ಬೆಳವಣಿಗೆಗೆ ತಮ್ಮ ಕೊಡುಗೆಯನ್ನು ನೀಡಿವೆ. ಆದರೆ ಥಿಯಾಸೊಫಿಕಲ್ ಸೊಸೈಟಿಯೂ ಬಂಗಾಳದ ಕೊಡುಗೆಯಾಗಿದೆ. ಹೀಗೆ ೧೯ನೆಯ ಶತಮಾನದಲ್ಲಿ ಭಾರತವು ರೂಪುಗೊಳ್ಳಲು ಮೂಲತಃ ಬಂಗಾಳಕ್ಕೆ ಸಂಬಂಧಿಸಿದ ಎರಡು ಮುಖ್ಯಾಂಶಗಳೇ ಕಾರಣ. ಮೊದಲನೆಯದಾಗಿ, ಕಾಲಕ್ರಮೇಣ ಭಾರತದ ಆದ್ಯಂತ ವಿಸ್ತರಿಸಿದ ರಾಷ್ಟ್ರೀಯತೆಯ ಸಂದೇಶ ಮತ್ತು ಎರಡನೆಯದಾಗಿ, ಅಖಿಲ ಭಾರತ ವ್ಯಾಪ್ತಿಯ ಧಾರ್ಮಿಕ ಭಾವನಾಶಾಸ್ತ್ರದ ಉದಯ. ಇವುಗಳಿಂದಾಗಿ, ಭಾರತದ ಹಿಂದೂಗಳೆಲ್ಲ ತಾವು ಒಂದೇ ಸಮುದಾಯಕ್ಕೆ ಸೇರಿದವರು ಎಂಬ ಭಾವನೆಯನ್ನು ಬೆಳೆಸಿಕೊಂಡರು;

ಪರಿಣಾಮವಾಗಿ ಧಾರ್ಮಿಕ ಸುಧಾರಣೆಯ ಎಲ್ಲ ಸ್ಥಳೀಯ ಚಳವಳಿಗಳು ಪರಸ್ಪರ ಸಾಮರಸ್ಯವನ್ನು ಬೆಳೆಸಿಕೊಂಡು ಕಾರ್ಯ ನಿರ್ವಹಿಸತೊಡಗಿದವು.

ಇವು ಅತ್ಯಂತ ಮುಖ್ಯವಾದ ಬೆಳವಣಿಗೆಗಳಾಗಿವೆ. ಆದರೆ ಬ್ರಿಟಿಷರ ಪ್ರಭುತ್ವವನ್ನು ವಿರೋಧಿಸಲು ಸಾಧ್ಯವಾಗುವಷ್ಟು ಸಾಮರ್ಥ್ಯವನ್ನು ಭಾರತೀಯರ ರಾಷ್ಟ್ರೀಯತಾ ಮನೋಭಾವಕ್ಕೆ ಸ್ವತಃ ಇವೇ ಒದಗಿಸಿದವು ಎಂದು ಹೇಳಲು ಸಾಧ್ಯವಿಲ್ಲ. ಇವುಗಳಿಗಿಂತ ಮುಖ್ಯವಾದ ಮೂರನೆಯ ಒಂದು ಅಂಶವನ್ನು ಗಮನಿಸಬೇಕು. ೧೯ನೆಯ ಶತಮಾನದಲ್ಲಿ ಭಾರತದ ಇತಿಹಾಸವನ್ನು ಪುನರ್ರಚಿಸುವ ಪ್ರಯತ್ನಗಳು ಪ್ರಾರಂಭವಾದವು. ಇವು ಭಾರತೀಯ ಇತಿಹಾಸಕ್ಕೆ ಸಮರ್ಥವಾದ ಚೌಕಟ್ಟನ್ನೂ ಪ್ರಚೋದಕವಾಗಿ ದರ್ಶನವನ್ನೂ ಒದಗಿಸಿದವು. ಡಾ. ಮಜುಮ್‌ದಾರರು ಪ್ರತಿಪಾದಿಸಿದಂತೆ, ಜೇಮ್ಸ್ ಮಿಲ್ ಭಾರತದ ಅತ್ಯುತ್ಕೃಷ್ಟವಾದ ಇತಿಹಾಸವನ್ನು ಬರೆಯುವವರೆಗೆ, ಮುಸ್ಲಿಮ್ ವಿಜಯಕ್ಕಿಂತ ಹಿಂದಿನ ಭಾರತದ ಬಗ್ಗೆ ಹೆಚ್ಚೇನೂ ತಿಳಿದಿರಲಿಲ್ಲ. ಕೆಲವು ಅಪವಾದಗಳನ್ನು ಹೊರತುಪಡಿಸಿದಂತೆ, ಬ್ರಿಟಿಷ್ ಆಡಳಿತಗಾರರು ಮತ್ತು ರಾಜಕೀಯ ಇತಿಹಾಸಕಾರರು, ಬಹುಮಟ್ಟಿಗೆ ಭಾರತದಲ್ಲಿ ಬ್ರಿಟಿಷರ ಆಡಳಿತವು ಕೊನೆಗೊಳ್ಳುವವರೆಗೂ, ವಿದೇಶೀಯರಿಂದ ಪರಾಜಿತರಾಗಿ, ಅವರ ಆಳ್ವಿಕೆಗೆ ಒಳಗಾಗುವುದು ಹಿಂದೂಗಳ ದುರದೃಷ್ಟವೆಂಬ ಅಭಿಪ್ರಾಯವನ್ನು ಪ್ರತಿಪಾದಿಸುತ್ತ ಬಂದರು. ಭಾರತೀಯರಲ್ಲಿ ಕೂಡ ಇದೇ ನಿರಾಶೆಯ ಭಾವನೆ ಬೆಳೆದುಬಂತು. ಆದರೆ ೧೯ನೆಯ ಶತಮಾನದಲ್ಲಿ ಅನೇಕ ವಿದ್ವಾಂಸರು ಭಾರತೀಯ ಇತಿಹಾಸವನ್ನು ಪುನರನ್ವೇಷಿಸುವ ಕಾರ್ಯವನ್ನು ಕೈಗೊಂಡುದರಿಂದಾಗಿ, ಭಾರತೀಯರ ಸಾಧನೆಗಳು ನಿಧಾನವಾಗಿ ಬೆಳಕಿಗೆ ಬಂದವು. ಪ್ರಿನ್ಸೆಪನು ಅಶೋಕನ ಶಾಸನಗಳ ಭಾಷೆಯನ್ನು ತಿಳಿದುಕೊಂಡು ಅವುಗಳ ಅರ್ಥವ್ಯಾಖ್ಯಾನ ಹಾಗೂ ಮೊಹೆಂಜದಾರೋ ಮತ್ತು ಹರಪ್ಪಗಳಲ್ಲಿ ನಡೆದ ಉತ್ಖನನ– ಇವೆರಡು ಐತಿಹಾಸಿಕ ಘಟನೆಗಳ ಕಾಲದ ನಡುವಣ ೬೦ ವರ್ಷಗಳ ಅವಧಿಯಲ್ಲಿ ನಡೆದ ಸಂಶೋಧನೆಗಳು ವಿಶ್ವದ ಅತ್ಯಂತ ಪ್ರಾಚೀನವಾದ ನಾಗರಿಕತೆಗಳಿಗಿಂತ ಹೆಚ್ಚು ವೈಭವದಿಂದ ಕೂಡಿದ ನಾಗರಿಕತೆಯನ್ನು ಭಾರತವು ಹೊಂದಿತ್ತು ಎಂದು ಆಧಾರಪೂರ್ವಕವಾಗಿ ತಿಳಿಸಿವೆ. ಹಿಂದೂಗಳು ಒಂದು ಜನಸಮುದಾಯವಾಗಿ ಭಾರತೀಯ ಇತಿಹಾಸದಲ್ಲಿ ಆಳವಾಗಿ ಬೇರೂರಿದ್ದರಷ್ಟೇ ಅಲ್ಲದೆ, ಅವರು ಮಹಾಸಾಮ್ರಾಜ್ಯಗಳನ್ನು ನಿರ್ಮಿಸಿದ್ದರು; ಭಾರತೀಯ ಸಂಸ್ಕೃತಿಯ ಸಂದೇಶಗಳನ್ನು ವಿಶ್ವಾದ್ಯಂತ ಸಾರಿದ್ದರು, ಸಮುದ್ರಯಾನ ಮಾಡಿದ್ದರು, ಮರುಭೂಮಿಗಳನ್ನು ದಾಟಿ ದೂರಪ್ರವಾಸ ಮಾಡಿದ್ದರು ಮತ್ತು ಜಾವಾ ಹಾಗೂ ಮಂಗೋಲಿಯಗಳಷ್ಟು ದೂರದ ಪ್ರದೇಶಗಳ ಜನರು ಮತ್ತು ಸಮುದಾಯಗಳ ಮೇಲೆ ಕೂಡ ಪ್ರಭಾವ ಬೀರಿದ್ದರು. ಭಾರತದ ಈ ಗಮನಾರ್ಹ ರಾಜಕೀಯ ಇತಿಹಾಸಕ್ಕಿಂತ ಮಿಗಿಲಾಗಿ, ಯೂರೋಪಿನ ವಿದ್ವಾಂಸರು ನಡೆಸಿದ

ಅಧ್ಯಯನ ಹಾಗೂ ಸಂಶೋಧನೆಗಳಿಂದ ನಮಗೆ ಇನ್ನಷ್ಟು ಹೊಸ ಹೊಸ ವಿಷಯಗಳು ತಿಳಿದುಬಂದಿವೆ. ಉದಾಹರಣೆಗೆ, ಬೌದ್ಧ ಧರ್ಮದ ವಿಸ್ತೃತ ದರ್ಶನ, ಭಾರತೀಯ ಕಲೆ, ಸಾಹಿತ್ಯ ಮತ್ತಿತರ ಪ್ರಮುಖ ಸಾಂಸ್ಕೃತಿಕ ಅಂಶಗಳು ಇತ್ಯಾದಿ. ಗೌತಮ ಬುದ್ಧನು ಚಿಕ್ಕಪುಟ್ಟ ಅವತಾರಗಳ ಕಲ್ಪನೆಯನ್ನು ದೂರಮಾಡಿ ಭಾರತೀಯ ಇತಿಹಾಸದಲ್ಲಿ ಸರಿಯಾದ ಸ್ಥಾನಮಾನಗಳನ್ನು ಗಳಿಸುವಲ್ಲಿ ಯಶಸ್ವಿಯಾದ. ಸಾರಿಪುತ್ತ ಮೊಗ್ಗಲನ, ಅಶ್ವಘೋಷ, ವಸುಬಂಧು, ಬುದ್ಧಘೋಷರೇ ಮೊದಲಾದ ಬೌದ್ಧಧರ್ಮದ ಮಹಾಸಂತರು ಮತ್ತು ತತ್ತ್ವಶಾಸ್ತ್ರಜ್ಞರ ಪರಂಪರೆಯು ಭಾರತದ ಶ್ರೀಮಂತ ಪರಂಪರೆಯ ಒಂದು ಅವಿಭಾಜ್ಯ ಅಂಗವಾಯಿತು.

ಹೀಗೆ ಭಾರತೀಯ ಇತಿಹಾಸದ ಪುನರ್ರಚನೆಯ ಪರಿಣಾಮವಾಗಿ, ಬೌದ್ಧ ಧರ್ಮದ ಚಿಂತನೆ ಮತ್ತು ಸಿದ್ಧಾಂತಗಳನ್ನು ಸೇರಿಸಿಕೊಂಡು ಹಿಂದೂ ಸಂಪ್ರದಾಯವು ಇನ್ನಷ್ಟು ಶ್ರೀಮಂತವಾದದ್ದು ೧೯ನೆಯ ಶತಮಾನದ ಜಾಗತಿಕ ಇತಿಹಾಸದ ಒಂದು ಪ್ರಮುಖ ಅಂಶವೆನಿಸಿದೆ. ಇದರಿಂದ ಏಷ್ಯದ ಇತಿಹಾಸದಲ್ಲಿದ್ದ ಕುಂದುಕೊರತೆಗಳು ದೂರವಾದವು; ಜಾಗತಿಕ ಬೆಳವಣಿಗೆಯ ಒಂದು ಸಹಜ ಅಂಶವಾಗಿ ಭಾರತೀಯ ಸಂಸ್ಕೃತಿಯನ್ನು ಎಲ್ಲರೂ ಗುರುತಿಸುವಂತಾಯಿತು. ದಕ್ಷಿಣದಲ್ಲಿ ಗುಜರಾತಿನ ಲೋಥಲ್ ತನಕ ವಿಸ್ತರಿಸಿದ ಮೊಹೆಂಜದಾರೋ ಸಂಸ್ಕೃತಿಯನ್ನು ಕುರಿತಂತೆ ಪ್ರಾಚೀನ ಶೋಧನಶಾಸ್ತ್ರಜ್ಞರು ನಡೆಸಿದ ಸಂಶೋಧನೆಗಳ ಪರಿಣಾಮವಾಗಿ ಪ್ರಾಚೀನ ಈಜಿಪ್ಟ್ ಮತ್ತು ಬ್ಯಾಬಿಲೋನ್‌ಗಳ ಜನರು ಸಮಕಾಲೀನರೆಂದೂ ಭಾರತೀಯರೂ ಸಮರ್ಥಿಸಲು ಸಾಧ್ಯವಾಯಿತು. ಹೀಗೆ ಭಾರತೀಯರ ಚಾರಿತ್ರಿಕ ಹಿನ್ನೆಲೆ ಇನ್ನಷ್ಟು ವಿಸ್ತರಿಸಿತು. ಚಾರಿತ್ರಿಕ ಮಹತ್ತ್ವದಿಂದ ಕೂಡಿದವರು ಹಾಗು ತಮ್ಮಲ್ಲಿ ರಾಜಕೀಯ ಒಗ್ಗಟ್ಟಿಲ್ಲದಿರುವವರು ಇಲ್ಲದಿರುವುದರಿಂದಾಗಿಯೇ ದುರದೃಷ್ಟವಶಾತ್, ಐತಿಹಾಸಿಕ ಖ್ಯಾತಿಯಿಂದ ವಂಚಿತರಾಗಬೇಕಾಯಿತು ಎಂಬ ಅರಿವು ೨೦ನೆಯ ಶತಮಾನದ ಪ್ರಾರಂಭದಲ್ಲಿ ಭಾರತೀಯರಲ್ಲಿ ಮೂಡಿತ್ತು. ಭಾರತೀಯರಲ್ಲಿ ರಾಷ್ಟ್ರೀಯತೆ ಮನೋಭಾವವು ಬೆಳೆಯಲು ಈ ತಿಳಿವಳಿಕೆಯೇ ಕಾರಣವಾಯಿತು ಎನ್ನಬಹುದು. ಹೀಗೆ ಭಾರತವು ಮತ್ತೆ ಇತರ ರಾಷ್ಟ್ರಗಳೊಂದಿಗೆ ಸರಿಸಾಟಿಯಾಗಿ ನಿಲ್ಲಲು ಸಾಧ್ಯವಾಯಿತು.

ಮುಖ್ಯವಾಗಿ ನಮ್ಮ ನಿರ್ಣಾಯಕ ಕಾಲಾವಧಿಯ ಕೊನೆಯ ಐವತ್ತು ವರ್ಷಗಳ ಕಾಲದಲ್ಲಿ ಇತಿಹಾಸ ಲೇಖಕರು ರಚಿಸಿದ ಅನೇಕ ಗ್ರಂಥಗಳು ಕೂಡ ರಾಷ್ಟ್ರೀಯ ಐಕ್ಯದ ಮನೋಭಾವದ ಬೆಳವಣಿಗೆಗೆ ತಮ್ಮ ಕೊಡುಗಡೆಯನ್ನು ನೀಡಿವೆ. ಇತಿಹಾಸವೆಂಬುದು ಭಾರತದ ಅಧಿಕೃತ 'ಶಾಸ್ತ್ರ'ಗಳಲ್ಲಿ ಒಂದು ಪ್ರಕಾರವಾಗಿಲ್ಲ. ಅದು ಒಂದು ಸಾಹಿತ್ಯ ಪ್ರಕಾರ ಕೂಡ ಅಲ್ಲ. 'ಪುರಾಣ'ಗಳಲ್ಲಿಯೇ ವಿಪುಲವಾದ ಚಾರಿತ್ರಿಕ ಸಂಗತಿಗಳು ಕಂಡುಬರುವಾಗ ಮತ್ತು ಭಾರತದ ಬಹುತೇಕ

ಪ್ರಮುಖ ರಾಜರೂ ಚಕ್ರವರ್ತಿಗಳೂ ತಮ್ಮ ಸಾಧನೆಗಳ ಬಗೆಗಿನ ದಾಖಲೆಗಳನ್ನು 'ಪ್ರಶಸ್ತಿ'ಗಳಲ್ಲಿ, ಕಾವ್ಯಗಳಲ್ಲಿ ಹಾಗೂ ಶಾಸನಗಳಲ್ಲಿ ಬಿಟ್ಟುಹೋಗಿರುವಾಗ, ಗ್ರೀಸ್, ರೋಮ್, ಚೀನಾ ಮತ್ತು ಇತರ ಅರಬ್ ರಾಷ್ಟ್ರಗಳಲ್ಲಿ ಕಂಡುಬರುವಂತಹ ಐತಿಹಾಸಿಕ ಗ್ರಂಥಗಳ ರಚನೆ ಸಂಸ್ಕೃತ–ಸಾಹಿತ್ಯದಲ್ಲಾಗಲೀ ಪ್ರಾಕೃತ ಸಾಹಿತ್ಯದಲ್ಲಾಗಲಿ ನಡೆಯದಿದ್ದುದು ಆಶ್ಚರ್ಯಕರವೇನೂ ಅಲ್ಲ. ಆದರೆ ಇಪ್ಪತ್ತನೆಯ ಶತಮಾನದಲ್ಲಿ ಇತಿಹಾಸ ಲೇಖಕರು ಭಾರತದ ಬಗ್ಗೆ ಹೆಚ್ಚು ಹೆಚ್ಚು ಗ್ರಂಥಗಳನ್ನು ಬರೆಯ ತೊಡಗಿದರು. ಚಾರಿತ್ರಿಕ ನಿವೇಶನಗಳ ಉತ್ಖನನ, ಪ್ರಶಸ್ತಿಗಳು ಮತ್ತು ಶಾಸನಗಳ ಅರ್ಥವ್ಯಾಖ್ಯಾನ, ಮುದ್ರೆಗಳು ಮತ್ತು ನಾಣ್ಯಗಳ ಅಧ್ಯಯನ ಮೊದಲಾದ ವಿಷಯಗಳಲ್ಲಿ ಯೂರೋಪ್ ವಿದ್ವಾಂಸರಿಂದ ತರಬೇತಿಯನ್ನು ಪಡೆದ ಹೊಸ ಪಂಥದ ಭಾರತೀಯ ಇತಿಹಾಸಲೇಖಕರು ಭಾರತದ ಮೇಲೆ ಪ್ರಭಾವ ಬೀರತೊಡಗಿದರು. ಆದರೆ ಸ್ಥಳೀಯ ರಾಜಮನೆತನಗಳು, ಪ್ರಾದೇಶಿಕ ಸಾಮ್ರಾಜ್ಯಗಳು ಹಾಗೂ ಮಹಾ ಚಕ್ರವರ್ತಿಗಳ ಸಾಧನೆಗಳಿಗೆ ಸಂಬಂಧಿಸಿದಂತೆ ಹೆಚ್ಚು ಗ್ರಂಥಗಳನ್ನು ರಚಿಸಲು ಅವರಿಗೆ ಸಾಧ್ಯವಾಗಲಿಲ್ಲ. ಅಂಥ ಕೃತಿಗಳಿಲ್ಲದೆ ಸಮಗ್ರ ಭಾರತದ ಬಗೆಗಿನ ನಿಜವಾದ ಚಿತ್ರಣ ನಮಗೆ ಲಭಿಸಲಾರದು.

ಏನೇ ಇರಲಿ, ಈ ಕಾಲಾವಧಿಯಲ್ಲಿ ಮೊತ್ತಮೊದಲ ಬಾರಿಗೆ ದಕ್ಷಿಣ ಭಾರತದ ಇತಿಹಾಸದ ರಾಷ್ಟ್ರೀಯ ಮಹತ್ತ್ವವನ್ನು ಗುರುತಿಸಲು ಸಾಧ್ಯವಾಯಿತು. ಜೌವೆಯು–ದುಬ್ರೈಲ್, ಮತ್ತು ಕೃಷ್ಣಸ್ವಾಮಿ ಅಯ್ಯಂಗಾರ್ ಅವರಿಂದ ಪ್ರೊಫೆಸರ್ ನೀಲಕಂಠ ಶಾಸ್ತ್ರಿಗಳವರೆಗಿನ ಪ್ರಖ್ಯಾತ ಇತಿಹಾಸಲೇಖಕರ ಕೃತಿಗಳಿಂದ, ದಕ್ಷಿಣ ಭಾರತವು ಹಿಂದೂ ನಾಗರಿಕತೆಗೆ ಆಶ್ರಯವನ್ನು ನೀಡಿದ ಸ್ಥಳವೂ, ಹಿಂದೂ ಧರ್ಮದ ಮುಖ್ಯ ಆಚಾರ್ಯರುಗಳ ಜನ್ಮಭೂಮಿಯೂ, ಹಿಂದೂ ಜೀವನದ ಅಖಂಡ ಪರಂಪರೆಯನ್ನು ಪ್ರತಿಪಾದಿಸಿದ ಪ್ರದೇಶವೂ ಆಗಿತ್ತು ಎಂಬುದನ್ನು ಭಾರತದ ಇತರ ಭಾಗಗಳವರೂ ತಿಳಿಯುವಂತಾಯಿತು.

ಬಹುತೇಕ ಐತಿಹಾಸಿಕ ಬರವಣಿಗೆಗಳ ಪ್ರಾದೇಶಿಕ ಗುಣಲಕ್ಷಣಗಳು ಜನರಲ್ಲಿ ಪ್ರತ್ಯೇಕತಾ ಮನೋಭಾವ ಬೆಳೆಯಲು ಸಹಾಯಕವಾಗಿರಬಹುದು. ಆದರೆ, ಇಸ್ಲಾಮ್ ಪ್ರಭುತ್ವದ ಅನುಭವವನ್ನು ಮರೆತ ಜನರು ೧೮೮೫ರ ಅನಂತರ ಮುಸ್ಲಿಮ್ ರಾಷ್ಟ್ರೀಯತೆಗೆ ಪರ್ಯಾಯವಾದಂತಹ ಇನ್ನೊಂದು ಚಳವಳಿಯಲ್ಲಿ ತೊಡಗಿದರು. ಭಾರತದಲ್ಲಿರುವ ಮುಸ್ಲಿಮರಲ್ಲಿ, ಹಿಂದೂಗಳಲ್ಲಿ ಇಲ್ಲದ ಐಕಮತ್ಯವಿತ್ತು; ಚಾರಿತ್ರಿಕ ತಿಳಿವಳಿಕೆಯಿಂದಾಗಿ ಅವರ ರಾಷ್ಟ್ರೀಯತಾ ಮನೋಭಾವವೂ ಬಲಗೊಂಡಿತು. ೧೮೫೭ರ ದಂಗೆಯಿಂದ ಮುಸ್ಲಿಮರು ಹತಾಶರಾದರು. ಆದರೆ ಮತ್ತೆ ಪುನಶ್ಚೈತನ್ಯಗೊಂಡು ಸರ್ ಸೈಯದ್ ಅಹ್ಮದ್ ಅವರ ನಾಯಕತ್ವದಲ್ಲಿ ಒಂದುಗೂಡಿ, ಬ್ರಿಟಿಷ್ ದೊರೆಗಳ ಆಶ್ರಯ ಹಾಗೂ ಸಹಕಾರಗಳಿಂದ, ಭಾರತದಲ್ಲಿ ಹೊಸ

ಇಸ್ಲಾಮ್ ರಾಷ್ಟ್ರೀಯತೆಯು ಉದಯಿಸುವಂತೆ ಮಾಡಿದರು. ರಾಷ್ಟ್ರೀಯತಾ ಮನೋಭಾವವನ್ನು ಬೆಳೆಸಿಕೊಂಡ ಹಿಂದೂ ಪುನರುತ್ಥಾನದ ಚಟುವಟಿಕೆಗಳನ್ನು ಭಯ ಹಾಗೂ ಅವಿಶ್ವಾಸಗಳೊಂದಿಗೆ ಗಮನಿಸತೊಡಗಿದರು. ಬ್ರಿಟಿಷರು ವಿಜಯಶಾಲಿಗಳಾಗುವವರೆಗೆ, ನಿಸ್ಸಂಶಯವಾಗಿ, ಹಿಂದೂಗಳೇ ಅಧಿಕ ಸಂಖ್ಯಾತರಾಗಿದ್ದರೂ, ಭಾರತವನ್ನು ಒಂದು ಮುಸ್ಲಿಮ್ ರಾಷ್ಟ್ರವೆಂದೇ (ದರ್–ಉಲ್ ಇಸ್ಲಾಮ್) ಭಾವಿಸಲಾಗಿತ್ತು. ಬ್ರಿಟಿಷರ ಆಡಳಿತದಲ್ಲಿ, ಹಿಂದೂಗಳಿಗೂ ಮುಸ್ಲಿಮರಿಗೂ ಭಾರತದ ಪೌರರಾಗಿ ಸಮಾನ ಸ್ಥಾನಮಾನಗಳು ದೊರಕಿದವು. ಆದರೆ ಹಿಂದೂಗಳು ಅಧಿಕ ಸಂಖ್ಯೆಯಲ್ಲಿದ್ದರು. ಅವರು ಹೊಸ ಶಿಕ್ಷಣ ವ್ಯವಸ್ಥೆಯ ಪ್ರಯೋಜನ ಪಡೆದು, ವ್ಯಾಪಾರ ವ್ಯವಹಾರಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡು, ಉದ್ಯಮಗಳನ್ನು ಪ್ರಾರಂಭಿಸಿ ಶ್ರೀಮಂತರಾಗತೊಡಗಿದಾಗ, ಸಹಜವಾಗಿಯೇ ಜಾಗ್ರತರಾದ ಮುಸ್ಲಿಮರಿಗೆ ತಾವು ಹೆಮ್ಮೆಯಿಂದ ಪ್ರತಿಪಾದಿಸುತ್ತಿದ್ದ 'ದರ್–ಉಲ್–ಇಸ್ಲಾಮ್'ನಲ್ಲಿ ತಾವೇ ಅಲ್ಪಸಂಖ್ಯಾತರಾಗುತ್ತಿದ್ದಂತೆ ಕಂಡುಬಂತು.

ಆಧುನಿಕ ಅರ್ಥದಲ್ಲಿ, ಹೋರಾಡುವ ಸ್ವಭಾವದ ಮುಸ್ಲಿಮ್ ರಾಷ್ಟ್ರೀಯತೆಯು ಎಂ.ಎ.ಓ. ಕಾಲೇಜು ಸ್ಥಾಪನೆಯಾದಂದಿನಿಂದ, ಬೆಳೆಯಲು ಪ್ರಾರಂಭವಾಯಿತು. ಕಾಂಗ್ರೆಸ್ ಚಳವಳಿಯು ಹೆಚ್ಚು ಹೆಚ್ಚು ಜನಪ್ರಿಯತೆ ಗಳಿಸತೊಡಗಿದಾಗ, ಮುಸ್ಲಿಮರು ತಮ್ಮಲ್ಲಿಯೂ ರಾಷ್ಟ್ರೀಯತಾ ಮನೋಭಾವವಿರುವುದನ್ನು ಪ್ರತಿಪಾದಿಸತೊಡಗಿದರು. ಮೊದಲಿನಿಂದಲೂ ವಿಶೇಷ ಪರಿಗಣನೆ ಹಾಗು ರಕ್ಷಣೆಗಾಗಿ ಆಗ್ರಹಪಡಿಸುತ್ತಿದ್ದ ಅವರು ತಮಗಾಗಿ ಪ್ರತ್ಯೇಕ ಜಾನಾಂಗಿಕ ಕ್ಷೇತ್ರವಿರಬೇಕೆಂಬ ಬೇಡಿಕೆಯನ್ನು ಮುಂದಿಟ್ಟರು. ಆಗ ಎಚ್ಚೆತ್ತುಕೊಂಡ ಹಿಂದೂಗಳಿಗೆ ಬ್ರಿಟಿಷರು ಮುಸ್ಲಿಮರೊಂದಿಗೆ ಮೈತ್ರಿ ಬೆಳೆಸಿಕೊಂಡಿರಬಹುದೆಂಬ ಸಂದೇಹ ಮೂಡತೊಡಗಿತು. ಭಾರತದ ಬಹುತೇಕ ಭಾಗಗಳಲ್ಲಿನ ಮುಸ್ಲಿಮ್ ಪ್ರಭುತ್ವಕ್ಕೆ ಸಂಬಂಧಿಸಿದ ನೆನಪುಗಳು ತೀರ ಇತ್ತೀಚಿನವು. ಅವು ನಮ್ಮ ನೆನಪಿನಲ್ಲಿ ಜೀವಂತವಾಗಿ ಇರುವುದಕ್ಕೂ ಚಾರಿತ್ರಿಕ ಸಂವೇದನೆಯೇ ಕಾರಣ. ಮುಖ್ಯವಾಗಿ ಮಹಾರಾಷ್ಟ್ರದಂತಹ ಪ್ರದೇಶಗಳಲ್ಲಿ, ಮೊಗಲರ ವಿರುದ್ಧವಾಗಿ ನಡೆದ ಹೋರಾಟವು ಜೀವಂತ ನೆನಪಾಗಿ ಉಳಿದಿದೆ. ಅಂತೆಯೇ ಮುಸ್ಲಿಮ್ ಆಡಳಿತವು ಕೊನೆಗೊಂಡ ಇತ್ತೀಚಿನ ಕಾಲದವರೆಗಿನ ಬಂಗಾಳ ಹಾಗೂ ಗಂಗಾನದೀ ಕಣಿವೆ ಪ್ರದೇಶಗಳೂ ನಮ್ಮ ನೆನಪಿನಲ್ಲಿ ಉಳಿದಿವೆ.

ಬ್ರಿಟಿಷರು ಮುಸ್ಲಿಮರೊಂದಿಗೆ ಸ್ನೇಹ ಬೆಳೆಸಿಕೊಂಡಿರಬಹುದೆಂಬ ಭಯದಿಂದಾಗಿ ಹಿಂದೂಗಳು ಮತ್ತೆ ಐಕಮತ್ಯದ ಭಾವನೆಯನ್ನು ಬೆಳೆಸಿಕೊಳ್ಳ ತೊಡಗಿದರು. ಭಾರತದ ಇತಿಹಾಸದಲ್ಲಿ ಹಿಂದೆಂದೂ ಕಂಡುಬರದ ರೀತಿಯಲ್ಲಿ ಅವರು ಮೊತ್ತಮೊದಲ ಬಾರಿಗೆ ಮುಸ್ಲಿಮರ ವಿರುದ್ಧವಾಗಿ ಒಗ್ಗೂಡಿದರು. ಯಾವಾಗ ಬೇಕಾದರೂ ಮುಸ್ಲಿಮರೊಂದಿಗೆ ಹೋರಾಟ ನಡೆಸಬಲ್ಲಂತಹ ಯಾವುದೇ ಹಿಂದೂ

ಒಗ್ಗೂಟ ಆವರೆಗೆ ಇದ್ದಿರಲಿಲ್ಲ. ಮರಾಠರೊಂದಿಗೆ ಹೋರಾಡಲು ಮೊಘಲರು ರಜಪೂತ್ ದೊರೆಗಳನ್ನು ನೇಮಿಸಿಕೊಂಡಿದ್ದರು. ಭಾರತೀಯರಲ್ಲಿ ಇತಿಹಾಸಪ್ರಸಿದ್ಧವೆನಿಸಿದ ಹೊಸ ಉತ್ಸಾಹ ಮಾಡಿದುದರ ಪರಿಣಾಮವಾಗಿ, ವಿಶೇಷವಾಗಿ ಮುಸ್ಲಿಮರಿಗೆ ಸಂಬಂಧಿಸಿದ ವಿಷಯಗಳಲ್ಲಾದರೂ, ಹಿಂದೂಗಳಲ್ಲಿ ತಾವೆಲ್ಲ ಒಂದೇ ಸಮುದಾಯಕ್ಕೆ ಸೇರಿದವರು ಎಂಬ ಏಕತೆಯ ಭಾವನೆ ಉದಯಿಸಿತು. ಇದಕ್ಕೆ ನಿದರ್ಶನವಾಗಿ, ಗಜ್ನಿ ಮಹ್ಮದ್‌ನು ಹಿಂದೂಗಳ ಮೇಲೆ ಆಕ್ರಮಣಗಳನ್ನು ನಡೆಸಿದ ಸಂದರ್ಭದಲ್ಲಿ ದಕ್ಷಿಣ ಭಾರತದ ಹಿಂದೂಗಳಲ್ಲಿ ಕೂಡ ಜಾಗೃತಿ ಮೂಡಿದುದನ್ನು ನಾವು ಗಮನಿಸಬಹುದು. ಇದೇ ರೀತಿಯಲ್ಲಿ ಔರಂಗಜೇಬನು ವಿಶ್ವನಾಥ ದೇವಾಲಯವನ್ನು ಹಾಳುಗೆಡವಿದ ಹಾಗೂ 'ಜಜಿಯಾ' ತೆರಿಗೆಗಳನ್ನು ಪುನಃ ವಿಧಿಸಿದ ಸಂದರ್ಭಗಳೂ ಸಮಕಾಲೀನ ಘಟನೆಗಳಂತೆ ಕಂಡುಬರುತ್ತವೆ. ಮುಸ್ಲಿಮರಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ಕೂಡ ಇದೇ ಮಾತು ಅನ್ವಯಿಸುತ್ತದೆ. ಮಹ್ಮದ್ ಗಜ್ನಿ, ಅಲ್ಲಾಉದ್ದೀನ್ ಖಿಲ್ಜಿ ಮತ್ತು ಔರಂಗಜೇಬರಂತಹ ಚಕ್ರವರ್ತಿಗಳನ್ನು ಮುಸ್ಲಿಮರು ಮೆಚ್ಚಲು, ಅವರು, ಹಿಂದೂಗಳೊಂದಿಗೆ ಯಾವುದೇ ರಾಜಿ ಮಾಡಿಕೊಳ್ಳಲು ಸಿದ್ಧರಾಗಿರದ ಸಾಂಪ್ರದಾಯಿಕ ಮುಸ್ಲಿಮ್ ದೊರೆಗಳಾಗಿದ್ದುದೇ ಕಾರಣವೆನ್ನಬಹುದು. ಹಿಂದೂ ದೇವಾಲಯಗಳನ್ನು ಹಾಳುಗೆಡಹುವ ಹಾಗೂ ದೇವಾಲಯದಲ್ಲಿರುವ ವಿಗ್ರಹಗಳನ್ನು ಒಡೆದುಹಾಕುವ ಕಾರ್ಯಗಳಲ್ಲಿ ಅವರು ಸದಾ ನಿರತರಾಗಿದ್ದುದರಿಂದಾಗಿ, ಮುಸ್ಲಿಮರು ಅವರಿಗೆ ವಿಶೇಷ ಗೌರವವನ್ನು ನೀಡಿದ್ದರು.

ಮಧ್ಯಕಾಲೀನ ಭಾರತೀಯ ಇತಿಹಾಸದ ಈ ವಿವಾದಾಸ್ಪದವಾದ ಅರ್ಥ ವ್ಯಾಖ್ಯಾನದಿಂದ ಆಗ ಭಾರತದಲ್ಲಿ ಹಿಂದೂ ಮತ್ತು ಮುಸ್ಲಿಮ್ ಎಂಬ ಎರಡು ಪ್ರತ್ಯೇಕ ರಾಷ್ಟ್ರೀಯತಾ ಭಾವನೆಗಳು ಹರಳುಗಟ್ಟುತ್ತಿದ್ದುದು ತಿಳಿದುಬರುತ್ತದೆ. ಮುಖ್ಯವಾಗಿ ಬಂಗಾಳ, ಗಂಗಾನದೀ ಕಣಿವೆ ಪ್ರದೇಶ ಹಾಗೂ ಪಂಜಾಬುಗಳಲ್ಲಿ ಹಿಂದೂಗಳು ಮತ್ತು ಮುಸ್ಲಿಮರು, ರಾಜಕಾರಣದಲ್ಲಿ ಮಾತ್ರವಲ್ಲದೆ, ಎಲ್ಲ ಪ್ರಮುಖ ಸಮಸ್ಯೆಗಳಿಗೆ ಪರಿಹಾರ ಹುಡುಕುವಲ್ಲಿ ಕೂಡ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರು. ದಕ್ಷಿಣದಲ್ಲಿ, ಅಸಫ್ ಜಾಹಿ ಕುಟುಂಬದ ರಾಜಪ್ರತಿನಿಧಿಗಳ ಮೂಲಕ ಮೊಗಲರ ಅಧಿಕಾರವು ಮುನ್ನಡೆಯುತ್ತಿರುವುದರಿಂದ, ಹಾಗೂ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇ. ೮೮ರಷ್ಟಿರುವ ತೆಲುಗು, ಮರಾಠಿ ಮತ್ತು ಕನ್ನಡ ಭಾಷೆಗಳನ್ನು ಮಾತನಾಡುವ ಜನರ ಮೇಲೆ ಕಡ್ಡಾಯವಾಗಿ ಉರ್ದು ಭಾಷೆಯನ್ನು ಹೊರಿಸಲು ಮತ್ತೆ ಮತ್ತೆ ಪ್ರಯತ್ನಿಸುವುದರಿಂದ ಸಮಸ್ಯೆಯು ಇನ್ನಷ್ಟು ಗಂಭೀರವಾಗಿತ್ತು. ಬ್ರಿಟಿಷ್ ಅಧಿಕಾರಿಗಳ ನಿರಂಕುಶ ಪ್ರಭುತ್ವದಲ್ಲಿ ಆಗ ಈ ಸಮಸ್ಯೆಗಳು ಎದ್ದು ಕಾಣುತ್ತಿರಲಿಲ್ಲ. ಆದರೆ ಬ್ರಿಟಿಷ್ ಪ್ರಭುತ್ವವು ಹಿಂದೂಗಳು ಮತ್ತು ಮುಸ್ಲಿಮರ

ರಾಷ್ಟ್ರೀಯತಾ ಚಳವಳಿಗಳನ್ನು ಹತ್ತಿಕ್ಕುವ ಪ್ರಯತ್ನದಲ್ಲಿ ತೊಡಗಿದ ತತ್‌ಕ್ಷಣ, ಹಿಂದೂಗಳು ರಾಷ್ಟ್ರೀಯ ಕಾಂಗ್ರೆಸ್ ಮೂಲಕ ಹಾಗೂ ಮುಸ್ಲಿಮರು ರಜ಼ಾಕರ್ ಚಳವಳಿಯ ಮೂಲಕ ಪ್ರತಿಭಟಿಸಲು ಪ್ರಾರಂಭಿಸಿದರು. ಆಗ ದಕ್ಕನ್ ಒಳಜಗಳಗಳ ಭೀಕರ ರಣರಂಗವಾಯಿತು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಸಂಘಟನೆ ಮತ್ತು ಧ್ಯೇಯೋದ್ದೇಶಗಳಿಗೆ ಸಂಬಂಧಿಸಿದಂತೆ, ಜಾತ್ಯತೀತವಾದ ಹಾಗೂ ಕೋಮುಭಾವನೆಯಿಲ್ಲದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿತ್ತು. ಆದುದರಿಂದ, ಹಿಂದೂಗಳ ಐಕಮತ್ಯದ ಬೆಳವಣಿಗೆಯಲ್ಲಿ ಮುಸ್ಲಿಮ್ ರಾಷ್ಟ್ರೀಯತೆಯು ಬೀರಿದ ಪ್ರಭಾವವು ಅಷ್ಟೇನೂ ಗಮನಕ್ಕೆ ಬರಲಿಲ್ಲ. ಆದರೆ, ಹಿಂದೂ–ಮುಸ್ಲಿಮ್ ಐಕಮತ್ಯವನ್ನು ಎತ್ತಿಹಿಡಿಯುವುದೂ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ರಕ್ಷಿಸಲು ಮುಂದಾಗುವುದೂ ರಾಷ್ಟ್ರೀಯ ಕಾಂಗ್ರೆಸ್ಸಿನ ಅಂಗೀಕೃತ ಧೋರಣೆಯಾಗಿತ್ತು. ಈ ಕಾರಣದಿಂದ ಅತ್ಯಧಿಕ ಸಂಖ್ಯೆಯಲ್ಲಿರುವ ಹಿಂದೂಗಳ ಅಭಿಪ್ರಾಯಗಳನ್ನೂ, ಪೂರ್ವಾಗ್ರಹಗಳನ್ನೂ ಪ್ರತಿಬಿಂಬಿಸಲು ಅದಕ್ಕೆ ಸಾಧ್ಯವಾಯಿತು. ರಾಷ್ಟ್ರೀಯತಾ ಚಳವಳಿಯ ತೀವ್ರವಾಗುತ್ತ ಬಂದಂತೆ, ಕಾಂಗ್ರೆಸ್ ಸಂಘಟನೆಯು ಪ್ರಬಲವಾಗುತ್ತ ಬಂದಂತೆ, ಮುಸ್ಲಿಮರೂ ತಮ್ಮ ರಾಷ್ಟ್ರೀಯತೆಯನ್ನು ಪ್ರತಿಪಾದಿಸತೊಡಗಿದರು. ಮುಸ್ಲಿಮರು ಯಾವಾಗಲೂ ತಾವು ಒಂದು ಸಮುದಾಯಕ್ಕೆ, ಒಂದು ಜನಾಂಗಕ್ಕೆ, ಒಂದು 'ಕೌಮಿ'ಗೆ (ಕೋಮಿಗೆ) ಸೇರಿದವರು ಎಂಬ ಮನೋಭಾವವನ್ನು ಬೆಳೆಸಿಕೊಂಡುಬಂದಿದ್ದರು. ಹೀಗಾಗಿ ಹಿಂದೂಗಳಲ್ಲೂ ಇದೇ ಭಾವನೆ ಮುಂದುವರಿಯಿತು. ಭಾರತದ ಆದ್ಯಂತ ವ್ಯಾಪಿಸಿದ್ದ, ಆದರೂ ಅಪೂರ್ಣಾವಸ್ಥೆಯಲ್ಲಿದ್ದ, ಹಿಂದೂ ಧರ್ಮದ ಅನುಯಾಯಿಗಳನ್ನು ಒಂದು ಸಮುದಾಯವನ್ನಾಗಿ ಒಗ್ಗೂಡಿಸುವುದರಲ್ಲಿ ಇಸ್ಲಾಮ್ ಮಹತ್ತರವಾದ ಕೊಡುಗೆಯನ್ನು ನೀಡಿದೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಈಗ ಕೂಡ ಹಿಂದೂ ಸಂಘಟನೆಯು ಪರಿಪೂರ್ಣ ಅವಸ್ಥೆಯನ್ನು ಹೊಂದಿಲ್ಲವೆಂಬುದು ಮಾತ್ರ ದುರದೃಷ್ಟಕರ.

ಹಿಂದೂಗಳ ಭವಿಷ್ಯವು ನಿರ್ಧಾರವಾಗಬೇಕಾಗಿ ಬಂದಂತಹ ಪ್ರತಿಯೊಂದು ಸಂದಿಗ್ಧ ಕಾಲದಲ್ಲಿಯೂ ಸಂಸ್ಕೃತ ಭಾಷಾಧ್ಯಯನ ಮತ್ತು ಸಾಹಿತ್ಯರಚನಾ ಕ್ಷೇತ್ರಗಳಲ್ಲಿ ಹೆಚ್ಚು ಹೆಚ್ಚಾಗಿ ನಡೆದ ಕಾರ್ಯಚಟುವಟಿಕೆಗಳನ್ನು ನಾವು ಹಿಂದಿನ ಉಪನ್ಯಾಸಗಳಲ್ಲಿ ಗಮನಿಸಿದ್ದೇವೆ. ನಂದ ಮತ್ತು ಮೌರ್ಯ ದೊರೆಗಳ ರಾಜ್ಯಭಾರದ ಕಾಲವು ಸಂಸ್ಕೃತವು ವಿಕಸನ ಹೊಂದಿ ಅಖಿಲ–ಭಾರತ ಚಿಂತನೆಯ ಏಕಮಾತ್ರ ಭಾಷೆಯಾದ ಅವಧಿಯಾಗಿತ್ತು. ೧೩೩೦ ಮತ್ತು ೧೪೩೦ರ ನಡುವಣ ಅವಧಿಯಲ್ಲಿ, ಮುಸ್ಲಿಮ್ ರಾಜ್ಯಗಳ ಹೊರಗಿನ ಪ್ರದೇಶಗಳಲ್ಲಿ ವೇದಗಳು, 'ಧರ್ಮಶಾಸ್ತ್ರ'ಗಳು ಮತ್ತು ಇತರ ಸಾಮಾನ್ಯ ಸಾಹಿತ್ಯಗಳ ಕ್ಷೇತ್ರದಲ್ಲಿ ಗಮನಾರ್ಹ ಅಭಿವೃದ್ಧಿಯುಂಟಾಯಿತು.

೧೯ನೆಯ ಶತಮಾನದಲ್ಲಿ ಕೂಡ, ಇನ್ನಷ್ಟು ತೀವ್ರವಾದ ಸ್ವರೂಪದಲ್ಲಿ ಇಂತಹ ಚಟುವಟಿಕೆಗಳು ನಡೆದುದನ್ನು ನಾವು ಗಮನಿಸಬಹುದು. ಹಳೆಯ ಹಾಗೂ ಸಾಂಪ್ರದಾಯಿಕ ರೂಪಗಳಲ್ಲಿ ಮಾತ್ರವಲ್ಲದೆ, ಯೂರೋಪಿನ ವಿದ್ವಾಂಸರುಗಳ ಸಹಕಾರದೊಂದಿಗೆ ನಡೆದ ತೌಲನಿಕ ಹಾಗೂ ವಿಮರ್ಶಾತ್ಮಕ ಸ್ವರೂಪಗಳಲ್ಲಿ ಕೂಡ, ಸಂಸ್ಕೃತ ಭಾಷೆ ಮತ್ತು ಸಾಹಿತ್ಯಗಳ ಪುನರಧ್ಯಯನ ನಡೆಯಿತು. ಯೂರೋಪಿನ ವಿದ್ವಾಂಸರು ಸಂಸ್ಕೃತದ ಮಹತ್ತ್ವವನ್ನು ಪ್ರಕಟಪಡಿಸಿ, ಪಾಶ್ಚಾತ್ಯ ರಾಷ್ಟ್ರಗಳ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿಯೂ ಸಂಸ್ಕೃತ ಅಧ್ಯಯನ ಪೀಠಗಳನ್ನು ಸ್ಥಾಪಿಸಿದಾಗ, ಸಂಸ್ಕೃತ ಭಾಷೆ ಹಾಗೂ ಅದರ ಸಾಹಿತ್ಯಸಂಪತ್ತಿನ ಬಗೆಗಿನ ಭಾರತದ ಹೆಮ್ಮೆ ಅಧಿಕವಾಗಿ, ಅದು ಅವರ ರಾಷ್ಟ್ರೀಯತಾ ಭಾವನೆಯನ್ನು ಇನ್ನಷ್ಟು ಪ್ರಬಲಗೊಳಿಸಿತು. ಯೂರೋಪಿನ ವಿಶ್ವವಿದ್ಯಾನಿಲಯಗಳಲ್ಲಿ ನಡೆದ ಸಂಸ್ಕೃತ ಅಧ್ಯಯನದ ಬಗ್ಗೆ ಹೆಚ್ಚು ವಿವರಿಸಲು ಇಲ್ಲಿ ಸಾಧ್ಯವಾಗುವುದಿಲ್ಲ. ಆದರೆ ಭಾರತೀಯರ ರಾಷ್ಟ್ರೀಯ ಪ್ರಜ್ಞೆಯನ್ನು ವಿಕಸನಗೊಳಿಸುವಲ್ಲಿ ಸಂಸ್ಕೃತವು ಬೀರಿದ ಪ್ರಭಾವ ಹಾಗೂ ಅವರ ಐಕಮತ್ಯದ ಭಾವನೆಯನ್ನು ಬಲಪಡಿಸುವುದರಲ್ಲಿ ಅದು ನೀಡಿದ ನೆರವು, ಇವುಗಳನ್ನಷ್ಟೇ ನಾವೀಗ ತಿಳಿದುಕೊಂಡರೆ ಸಾಕು. ಹಿಂದೂಗಳಲ್ಲಿ ಈ ಒಗ್ಗಟ್ಟು ಇಂದಿನವರೆಗೂ ಉಳಿದುಬಂದಿದೆ.

ಹಿಂದಿನ ಕಾಲದಲ್ಲಿ ಪಂಡಿತ ವರ್ಗಕ್ಕೆ ಸೇರಿದ ಕೆಲವೇ ಕೆಲವು ಹಿಂದೂಗಳು ಮಾತ್ರ ಸಂಸ್ಕೃತದ ಅತ್ಯುತ್ಕೃಷ್ಟ ಸಾಹಿತ್ಯವನ್ನಷ್ಟೇ ಅಲ್ಲದೆ, ಭಾರತೀಯ ಸೈದ್ಧಾಂತಿಕ ಚಿಂತನೆಗಳ ಏಕಸ್ವಾಮ್ಯವನ್ನು ಹೊಂದಿದ್ದರು. ಭಾರತದ ಬಹುತೇಕ ಪ್ರಾದೇಶಿಕ ಭಾಷೆಗಳಿಗೆ ಭಾಷಾಂತರಗೊಂಡ ಪುರಾಣೇತಿಹಾಸಗಳೇ ಮುಂತಾದ ಸಂವಾಹಕ ಸಾಹಿತ್ಯದ ಮೂಲಕ ಜನಸಾಮಾನ್ಯರು ಭಾರತೀಯ ಚಿಂತನೆಗಳಲ್ಲಿ ಪಾಲು ಪಡೆಯುವಂತಾಯಿತು. ಆದರೆ ಉಪನಿಷತ್ತುಗಳು, ಅವುಗಳ ಬಗ್ಗೆ ಆಚಾರ್ಯರುಗಳು ಬರೆದ ಉತ್ಕೃಷ್ಟ ವ್ಯಾಖ್ಯಾನ ಗ್ರಂಥಗಳು, 'ಬ್ರಹ್ಮಸೂತ್ರ', ಹಾಗೂ ಉನ್ನತ ಭಾರತೀಯ ಚಿಂತನೆಗಳಿಗೆ ಸಂಬಂಧಿಸಿದ ಇತರ ಆಧಾರಗ್ರಂಥಗಳು– ಇವೆಲ್ಲ ಸಂಸ್ಕೃತ ಭಾಷೆಯನ್ನು ಚೆನ್ನಾಗಿ ತಿಳಿದವರಿಗೆ ಮಾತ್ರ ಲಭ್ಯವಾಗಿದ್ದವು. ಈ ವಿದ್ವಾಂಸರು ಸಾಹಿತ್ಯಕ ಉದ್ದೇಶದಿಂದ ಮಾತ್ರ ಸಂಸ್ಕೃತ ಗ್ರಂಥಗಳನ್ನು ಬಳಸಿಕೊಳ್ಳುತ್ತಿರಲಿಲ್ಲ. ಇವರು ಅಗ್ರಗಣ್ಯ ಭಾರತೀಯ ಚಿಂತಕರೂ ಆಗಿದ್ದರು. ಸಂಸ್ಕೃತ ಗ್ರಂಥಗಳು ಇಂಗ್ಲಿಷಿಗೆ ಭಾಷಾಂತರಗೊಂಡ ಮೇಲೆ ಮಾತ್ರ ಅವು ಜನಪ್ರಿಯತೆಯನ್ನು ಗಳಿಸಿದವು. ಸಾಮಾನ್ಯರ ಕೈಗೂ ಎಟುಕತೊಡಗಿದವು. ಉದಾಹರಣೆಗೆ, 'ಭಗವದ್ಗೀತೆ'ಯನ್ನೇ ತೆಗೆದುಕೊಳ್ಳೋಣ. ಹಿಂದೆ ಭಾರತದ ಅನೇಕ ಪ್ರಾದೇಶಿಕ ಭಾಷೆಗಳಿಗೆ ಅನುವಾದಗೊಂಡಿದ್ದರೂ, ಅದು ಅತ್ಯಂತ ಜನಪ್ರಿಯವಾಗಿ, ಆಧುನಿಕ ಭಾರತದ ಹೊಸ ಸುಶಿಕ್ಷಿತ ಮಧ್ಯಮ ವರ್ಗದವರ ಶಾಸ್ತ್ರಗ್ರಂಥವೆನಿಸಿದ್ದು, ಅದರ ಇಂಗ್ಲಿಷ್ ಅನುವಾದ ಪ್ರಕಟಗೊಂಡ

ಅನಂತರವೇ. ಆದುದರಿಂದ ೧೯ನೆಯ ಶತಮಾನದ ಮಧ್ಯಭಾಗಕ್ಕೂ ಮೊದಲು, ಪ್ರಾಚೀನ ಹಿಂದೂ ಚಿಂತನೆ ಮತ್ತು ಜ್ಞಾನಗಳ ಅಮೋಘ ಸಂಪತ್ತಿನಲ್ಲಿ ಸುಶಿಕ್ಷಿತ ವರ್ಗದ ಸಾಮಾನ್ಯ ಜನರು ಯಾವುದೇ ಪಾಲನ್ನು ಪಡೆದಿರಲಿಲ್ಲ ಎಂದರೆ ತಪ್ಪಾಗಲಾರದು. ಸಂಪೂರ್ಣ ಸಂಸ್ಕೃತ ಜ್ಞಾನ ಸಂಪತ್ತೂ ಕೆಲವೇ ಕೆಲವು ಸಂಸ್ಕೃತ ವಿದ್ವಾಂಸರ ಏಕಸ್ವಾಮ್ಯತೆಯಲ್ಲಿತ್ತು.

ಬ್ರಿಟಿಷ್, ಜರ್ಮನ್, ಫ್ರೆಂಚ್ ಮತ್ತು ಇತರ ಪಾಶ್ಚಾತ್ಯ ರಾಷ್ಟ್ರಗಳ ಪ್ರಖ್ಯಾತ ವಿದ್ವಾಂಸರು ಶ್ರದ್ಧೆಯಿಂದ ಕೈಗೊಂಡ ಸಂಶೋಧನ ಕಾರ್ಯಗಳ ಪರಿಣಾಮವಾಗಿ ಈ ಏಕಸ್ವಾಮ್ಯತೆಯು ಕೊನೆಗೊಂಡಿತು. ಕ್ರಿ.ಪೂ. ೮ನೆಯ ಶತಮಾನದ ಬ್ರಾಹ್ಮಣರ ಕಾಲದಲ್ಲಿಯೇ ಹೆಚ್ಚುಕಡಿಮೆ ನಿಂತುಹೋಗಿದ್ದ ವೇದಗಳ ಅಧ್ಯಯನವನ್ನು ಆರ್ಯರ ಅತ್ಯಂತ ಪ್ರಾಚೀನವಾದ ಧರ್ಮಗ್ರಂಥಗಳಾಗಿ ಪುನಃ ಪ್ರಾರಂಭಿಸಲಾಯಿತು. ಸಂಸ್ಕೃತದ ಇತರ ಮಹಾಕೃತಿಗಳ ಇಂಗ್ಲಿಷ್ ಅನುವಾದಗಳೂ ಪ್ರಕಟವಾಗತೊಡಗಿದವು. ಹೀಗೆ ಸಂಸ್ಕೃತ ಕೃತಿಗಳು ಮೊತ್ತಮೊದಲ ಬಾರಿಗೆ ಮಧ್ಯಮವರ್ಗದ ಹಿಂದೂ ಜನಸಾಮಾನ್ಯರಿಗೆ ಲಭ್ಯವಾದವು. ಭಾರತದಲ್ಲಿ ಹೊಸ ರಾಷ್ಟ್ರೀಯತಾ ಮನೋಭಾವವೊಂದು ಉದಯಿಸುವಲ್ಲಿ, ಸಮರ್ಥ ವಿದ್ವಾಂಸರಿಂದ ವಿಮರ್ಶಾಪೂರ್ವಕವಾಗಿ ಸಂಪಾದಿತವಾದ, ಮ್ಯಾಕ್ಸ್ ಮುಲ್ಲರ್‌ನ *Sacred Books of the East* ಎಂಬ ಕೃತಿಯ ಇತಿಹಾಸ–ಪ್ರಸಿದ್ಧ ಮಾಲೆಯ ಕೃತಿಗಳ ಪ್ರಕಟಣೆಯು ಹಲವು ರೀತಿಗಳಲ್ಲಿ ಅತ್ಯಂತ ಮುಖ್ಯವಾದ ಘಟನೆಯಾಗಿದೆ. ಈ ಮಾಲೆಯ ಕೃತಿಗಳಲ್ಲಿ ಒಂದಾಗಿರುವ 'ಭಗವದ್ಗೀತೆ'ಗೆ ಕಾಶೀನಾಥ್ ತ್ರ್ಯಂಬಕ್ ತೆಲಂಗ್ ಅವರು ಬರೆದ ಪ್ರಸ್ತಾವನೆಯಿಂದ ಮುಂದೆ ವ್ಯಾಖ್ಯಾನಗ್ರಂಥ ರಚನೆ ಪ್ರಾರಂಭವಾಯಿತೆಂದು ಪರಿಗಣಿಸಬಹುದು. ಈ ಪ್ರಸ್ತಾವನೆಯು ಹೊಸ ರಾಷ್ಟ್ರೀಯತಾ ಕಾರ್ಯ ಚಟುವಟಿಕೆಗಳಿಗೆ ಸುಭದ್ರ ತಳಹದಿಯನ್ನು ಒದಗಿಸಿತು.

ಅನುವಾದಗಳ ಮೂಲಕ ಸಂಸ್ಕೃತದ ಎಲ್ಲ ಸಾಹಿತ್ಯಕ ಹಾಗೂ ಸೈದ್ಧಾಂತಿಕ ಕೃತಿಗಳು ಜನರಿಗೆ ಲಭ್ಯವಾದವು. ದೀರ್ಘಕಾಲದಿಂದ ಪವಿತ್ರವೆಂದು ಪರಿಗಣಿಸಲಾಗಿದ್ದ ವೇದಗಳು ಸಾಯಣನ ವ್ಯಾಖ್ಯಾನದೊಡನೆ ಬೆಳಕಿಗೆ ಬಂದು ಅವುಗಳ ಬೇರೆ ಬೇರೆ ಅಂಶಗಳಿಗೆ ಸಂಬಂಧಿಸಿದಂತೆ ಆಧುನಿಕ ಅಧ್ಯಯನಗಳು ನಡೆಯತೊಡಗಿದವು. 'ಧರ್ಮಶಾಸ್ತ್ರ' ಗ್ರಂಥಗಳ ಅನುವಾದಗಳೂ ಪ್ರಕಟವಾದವು. ಬೌದ್ಧಧರ್ಮದ ಪವಿತ್ರ ಗ್ರಂಥಗಳ ಪ್ರಕಟಣೆಯನ್ನು ಪಾಲಿ ಪಠ್ಯಸಮಿತಿಯ ಮುಂದುವರಿಸಿತು. ಇದರಿಂದಾಗಿ, ಹಿಂದೆ ಕಳೆದುಹೋದಂತಹ, ಬೌದ್ಧ ಪರಂಪರೆಯು ಪುನಃ ಭಾರತೀಯ ಜೀವನದ ಒಂದು ಭಾಗವಾಯಿತು. ವಾಸ್ತವವಾಗಿ ಹೇಳುವುದಾದರೆ, ನಾಲ್ಕನೆಯ ಶತಮಾನದ ಗುಪ್ತರ ಕಾಲದ ಶಿಕ್ಷಣತಜ್ಞರು ಹಾಗೂ ಗ್ರಂಥಪರಿಷ್ಕರಣ ತಜ್ಞರು ಮಾಡಿದಂತಹ ಕೆಲಸವನ್ನೇ ಯೂರೋಪಿನ ವಿದ್ವಾಂಸರು ಹಾಗೂ ಅವರ ಭಾರತೀಯ

ಸಹಲೇಖಕರು, ಹಿಂದೂ ಸಾಹಿತ್ಯ, ಧರ್ಮ ಮತ್ತು ತತ್ತ್ವಶಾಸ್ತ್ರಗಳಿಗೆ ಸಂಬಂಧಿಸಿದಂತೆ, ಈ ಕಾಲದಲ್ಲಿ ಮಾಡಿದ್ದಾರೆ. ಸಂಸ್ಕೃತ ಭಾಷೆ–ಸಾಹಿತ್ಯಗಳ ಅಮೂಲ್ಯ ಭಂಡಾರದ ಬಾಗಿಲನ್ನು ತೆರೆದು ಅದರಲ್ಲಿರುವ ಅಮೂಲ್ಯ ನಿಧಿಯನ್ನು ಸಾರ್ವಜನಿಕರಿಗೆ ಒದಗಿಸಿಕೊಟ್ಟಿದ್ದಾರೆ.

ಭಾರತದ ಆದ್ಯಂತ, ಸುಶಿಕ್ಷಿತ ವರ್ಗಕ್ಕೆ ಸೇರಿದ ಜನರಿಗೆ, ಇಂಗ್ಲಿಷ್ ಭಾಷೆಯು ಸಂಪರ್ಕ ಭಾಷೆಯಾಗದೆ ಹೋಗಿದ್ದರೆ, ಭಾಷೆ–ಸಾಹಿತ್ಯಗಳ ಕ್ಷೇತ್ರದಲ್ಲಿ ಇಂಥ ಸಾಧನೆ ಸಾಧ್ಯವಾಗುತ್ತಿರಲಿಲ್ಲ. ಇಂಗ್ಲಿಷ್‌ಮೂಲಕ ಗಳಿಸಿದ ಜ್ಞಾನವು ಪ್ರಾದೇಶಿಕ ಭಾಷೆಗಳಿಂದ ಶೋಧಿಸಲ್ಪಟ್ಟು, ಹಿಂದೆಂದೂ ದೊರಕದ ರೀತಿಯಲ್ಲಿ ಅಧಿಕ ಸಂಖ್ಯಾತ ಜನರಿಗೆ ಲಭ್ಯವಾಯಿತು. ಸಂಸ್ಕೃತ ಅಧ್ಯಯನಗಳ ಪುನರುತ್ಥಾನವು ಇಂಗ್ಲಿಷ್ ಭಾಷೆಯ ಮೂಲಕವೇ ಆಯಿತು ಎನ್ನಬಹುದು. ಉದಾಹರಣೆಗೆ, ಹಿಂದೂ ತತ್ತ್ವಶಾಸ್ತ್ರಕ್ಕೆ ಸಂಬಂಧಪಟ್ಟಂತೆ, ರಾಧಾಕೃಷ್ಣನ್ ಮತ್ತು ದಾಸಗುಪ್ತರು ನೀತಿಕಥೆಗಳನ್ನು ಬರೆದದ್ದು, ಇಂಗ್ಲಿಷಿಯಲ್ಲಿಯೇ; ಕಾಣೆಯವರ ಅತ್ಯುತ್ಕೃಷ್ಟ ಕೃತಿಯಾಗಿರುವ 'ಧರ್ಮಶಾಸ್ತ್ರದ ಇತಿಹಾಸ'(*History of Dharma Sastra*)ದ ಅನೇಕ ಸಂಪುಟಗಳು ಪ್ರಕಟವಾದದ್ದೂ ಇಂಗ್ಲಿಷಿನಲ್ಲಿಯೇ. ಬಹುಶಃ ಉಳಿದೆಲ್ಲ ಕೃತಿಗಳಿಗಿಂತ ಹೆಚ್ಚಾಗಿ ಹಿಂದೂ ಚಿಂತನೆಗಳ ಮೇಲೆ ಪ್ರಭಾವ ಬೀರಿದಂತಹ ಪವಿತ್ರ ಗ್ರಂಥವಾದ 'ಭಗವದ್ಗೀತೆ'ಯ ಆಧುನಿಕ ವ್ಯಾಖ್ಯಾನಗಳು ಮೊತ್ತಮೊದಲು ಹೊರಬಂದದ್ದು ಕೂಡ ಇಂಗ್ಲಿಷ್ ಭಾಷೆಯಲ್ಲಿಯೇ. ಮೂಲತಃ ಮರಾಠಿಯಲ್ಲಿ ಬರೆಯಲ್ಪಟ್ಟ ತಿಲಕರ 'ಗೀತಾರಹಸ್ಯ'ವು ಅದರ ಇಂಗ್ಲಿಷ್ ಭಾಷಾಂತರದ ಮೂಲಕವಾಗಿಯೇ ಅಖಿಲ–ಭಾರತ ಪ್ರಭಾವವನ್ನು ಬೀರಿತು. ಶ್ರೀ ಅರವಿಂದರು, ಡಾ. ರಾಧಾಕೃಷ್ಣನ್ ಮತ್ತಿತರ ಅಗ್ರಗಣ್ಯ ಹಿಂದೂ ಚಿಂತಕರು 'ಗೀತಾ' ಸಂದೇಶವನ್ನು ಇಂಗ್ಲಿಷ್ ಮಾಧ್ಯಮದ ಮೂಲಕವೇ ಭಾರತದ ಮಧ್ಯಮ ವರ್ಗದವರಿಗೆ ತಿಳಿಸಿದರು. ವಾಸ್ತವವಾಗಿ ಹೇಳುವುದಾದರೆ, ರಾಜಾರಾಮ್ ಮೋಹನರಾಯ್ ಅವರ *Precepts of Jesus* ಕೃತಿಯಿಂದ ಪ್ರಾರಂಭವಾಗಿ, ರಾಧಾಕೃಷ್ಣನ್ ಅವರ 'ಗೀತೆ'ಯ ಅನುವಾದದವರೆಗೂ ಹಿಂದೂ ಪುನರುತ್ಥಾನದ ಅಧಿಕೃತ ಭಾಷೆ ಇಂಗ್ಲಿಷೇ ಆಗಿತ್ತು ಎಂದರೆ ಅದು ಉತ್ಪ್ರೇಕ್ಷೆಯಾಗಲಾರದು.

ಆಧುನಿಕ ಯುಗದ ವೈಲಕ್ಷಣ್ಯಗಳನ್ನು ನಿರ್ಧರಿಸುವಲ್ಲಿ ಮೇಲೆ ಹೇಳಲಾದ ವಾಸ್ತವಾಂಶಕ್ಕೆ ಪರಿಗಣನಾರ್ಹವಾದ ಪ್ರಾಮುಖ್ಯವಿದೆ. ೧೯ನೆಯ ಶತಮಾನದಲ್ಲಿ ಇಂಗ್ಲಿಷ್ ಭಾಷೆಯೇ ಬಹುತೇಕ ಪ್ರೌಢ ರಾಜಕೀಯ ಹಾಗೂ ಸಾಮಾಜಿಕ ಚಿಂತನೆಗಳ ಮುಖ್ಯ ವಾಹಕವಾಗಿತ್ತು. ಅಲ್ಲದೆ, ಶಿಕ್ಷಣ ಮಾಧ್ಯಮವಾಗಿ ಮತ್ತು ಅಖಿಲಭಾರತದ ಸಂಪರ್ಕ ಮಾಧ್ಯಮವಾಗಿ ಕೂಡ, ಇಂಗ್ಲಿಷ್ ಭಾಷೆಯು ಬಳಕೆಗೆ ಬಂದುದರಿಮದ, ಭಾರತೀಯರಿಗೆ ಹೊಸ ಸಾಮಾಜಿಕ ಹಾಗೂ ರಾಜಕೀಯ ಸಿದ್ಧಾಂತಗಳ

ಪರಿಚಯವುಂಟಾಯಿತು. ರಾಜಕೀಯ ಸಂಘಟನೆ, ಆರ್ಥಿಕ ಅಭಿವೃದ್ಧಿ, ಸಾಮಾಜಿಕ ನ್ಯಾಯ ಮತ್ತು ಆಧುನಿಕ ನ್ಯಾಯಶಾಸ್ತ್ರಗಳಿಗೆ ಸಂಬಂಧಿಸಿದ ಹೊಸ ಹೊಸ ವಿಷಯಗಳ ಪರಿಚಯವೂ ಭಾರತೀಯರಿಗೆ ಉಂಟಾಯಿತು. ಯೂರೋಪಿನಲ್ಲಿ ಹೊಸ ಹೊಸ ವಿಚಾರಧಾರೆಗಳೂ ಸಿದ್ಧಾಂತಗಳೂ ರೂಪುಗೊಳ್ಳುತ್ತಿದ್ದ ಕಾಲದಲ್ಲಿಯೇ ಭಾರತೀಯರು ಅವುಗಳನ್ನು ತಿಳಿದುಕೊಳ್ಳಲು ಇಂಗ್ಲಿಷ್ ಭಾಷೆ ಸಹಕರಿಸಿತು. ಉದಾಹರಣೆಗೆ, ಮೆಕಾಲೆ ಅವರ 'ದಂಡಸಂಹಿತೆ'ಯು ಆ ಕಾಲದಲ್ಲಿ ಇಂಗ್ಲೆಂಡಿನ ನ್ಯಾಯಶಾಸ್ತ್ರ ಕ್ಷೇತ್ರದಲ್ಲಿ ಅತ್ಯಂತ ಪ್ರೌಢವಾದ ಕೃತಿಯಾಗಿತ್ತು. ಕಾಯ್ದೆಯ ಸಮಕ್ಷಮದಲ್ಲಿ ಎಲ್ಲರೂ ಸರಿಸಮಾನರು, ನಿರಪರಾಧಿಗಳಿಗೆ ಶಿಕ್ಷೆಯನ್ನು ವಿಧಿಸಲಾಗದು. ಇವೇ ಮೊದಲಾದ ಅಂಶಗಳನ್ನು ಪ್ರತಿಪಾದಿಸುವ ಆ 'ದಂಡ ಸಂಹಿತೆ'ಯನ್ನು ಭಾರತವೂ ಅನುಸರಿಸತೊಡಗಿತು. ರಾಜಕೀಯ ಹಾಗೂ ಆರ್ಥಿಕ ಚಿಂತನೆಗಳ ಮೇಲೆ ಕೂಡ, ಬ್ರಿಟಿಷರು ಇಂತಹ ಪ್ರಭಾವವನ್ನು ಬೀರಿದ್ದಾರೆ. ಪ್ರಾತಿನಿಧಿಕ ಸರ್ಕಾರದ ಸಿದ್ಧಾಂತಗಳು, ಚುನಾವಣಾ ಪದ್ಧತಿ ಮತ್ತು ಪಾರ್ಲಿಮೆಂಟರಿ (ಸಂಸದೀಯ) ಪ್ರಜಾಪ್ರಭುತ್ವ– ಇವೂ ಇಂಗ್ಲಿಷ್ ಭಾಷೆಯ ಪ್ರಸಾದದ ಪರಿಣಾಮವಾಗಿ, ೧೯ನೆಯ ಶತಮಾನದಲ್ಲಿ, ಭಾರತೀಯ ರಾಷ್ಟ್ರೀಯತೆಯ ಅವಿಭಾಜ್ಯ ಅಂಗಗಳಾದವು. ಸಂಕ್ಷಿಪ್ತವಾಗಿ ಹೇಳುವುದಾದರೆ, ಭಾರತದ ಮೇಲೆ ಅಗಾಧವಾದ ಪ್ರಭಾವವನ್ನು ಬೀರಿ, ಭಾರತೀಯ ಸಮಾಜದ ಭವಿಷ್ಯಕ್ಕೆ ಸುಭದ್ರವಾದ ಅಡಿಪಾಯವನ್ನು ಹಾಕಿದ ಆಧುನಿಕೀಕರಣದ ಸಿದ್ಧಾಂತಗಳೂ ಪರಿಶೀಲನೆಯಲ್ಲಿರುವ ಈ ನಿರ್ಣಾಯಕ ಕಾಲಾವಧಿಯಲ್ಲಿ, ಭಾರತೀಯ ಚಿಂತನೆಯಲ್ಲಿ ಬೆಳೆದುಬಂದವು.

ಇಲ್ಲಿ ನಾವು ಈ ಕಾಲದ ಕೆಲವು ವಿಶೇಷ ಲಕ್ಷಣಗಳ ಬಗ್ಗೆ ಕೂಡ ವಿವರಿಸಬೇಕು. 'ಕ್ರಾಂತಿಕಾರಕ ಪ್ರಭಾವವನ್ನು ಹೊಂದಿದ ಇವುಗಳನ್ನು ಕುರಿತಂತೆ ವಿಸ್ತೃತವಾಗಿ ಚರ್ಚಿಸಲು ಇಲ್ಲಿ ಸಾಧ್ಯವಿಲ್ಲ. ಆದಾಗ್ಯೂ ಕೆಲವು ಪ್ರಮುಖ ಅಂಶಗಳನ್ನು ತಿಳಿಸಲೇಬೇಕು. ಈ ಕಾಲದಲ್ಲಿ ಭಾರತದ ಆರ್ಥಿಕ ಕ್ಷೇತ್ರಗಳಲ್ಲಿ ಮಹಾ ಪರಿವರ್ತನೆಯು ಆಯಿತು. ಕರಕುಶಲ ಕಸುಬುಗಳು ಅದೃಶ್ಯವಾಗತೊಡಗಿದವು; ಭಾರೀ ಪ್ರಮಾಣದ ಉದ್ಯಮಗಳು ಪ್ರಾರಂಭವಾದವು. ಪರಿಣಾಮವಾಗಿ ಸಾಂಪ್ರದಾಯಿಕವೂ ಸ್ವಾವಲಂಬಿಯೂ ಆದ ಭಾರತೀಯ ಗ್ರಾಮೀಣ ಸಮಾಜಗಳು ಶಿಥಿಲವಾಗ ತೊಡಗಿದವು. ಭಾರತೀಯರೆಲ್ಲ ಸರಿಸಮಾನರು ಎಂಬ ಸಮಾನತಾ ಸಿದ್ಧಾಂತವನ್ನು ಮಂಡಿಸಿದ ಭಾರತೀಯ 'ದಂಡ ಸಂಹಿತೆ'ಯನ್ನು ಇಲ್ಲಿ ವಿಶೇಷವಾಗಿ ಗಮನಿಸಬೇಕು. ಪ್ರಾಚೀನ ಕಾಲದಿಂದಲೂ ಭಾರತ ಹಾಗೂ ಹಿಂದೂ ಧರ್ಮವು ಗುರುತಿಸಿದ್ದ ಜಾತಿ ಪದ್ಧತಿಯ ಬಹುಮಟ್ಟಿಗೆ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡಿತು. ಇದಕ್ಕಿಂತಲೂ ಮುಖ್ಯವಾದ ಇನ್ನೊಂದು ಅಂಶವೆಂದರೆ, ಸರ್ವಸಮಾನತಾ ಭಾವನೆ ಹಾಗೂ ಪ್ರಜಾಪ್ರಭುತ್ವದ ರಾಜಕೀಯ ಸಿದ್ಧಾಂತ– ಇವು ಹಿಂದುಳಿದ ಜಾತಿಗಳಿಗೆ, ದಲಿತ

ವರ್ಗಗಳಿಗೆ ಹಾಗೂ ಅನುಸೂಚಿತ ಪಂಗಡಗಳಿಗೆ ಸೇರಿಸ ಅಸಂಖ್ಯಾತ ಜನರಿಗೆ ಸೂಕ್ತ ರಕ್ಷಣೆ ನೀಡಿ, ಅವರೂ ಭಾರತೀಯ ಸಮಾಜದಲ್ಲಿ ಇತರರೊಂದಿಗೆ ಕೂಡಿ ಬಾಳುವಂತಾಯಿತು. ಹಿಂದೆ ಹಿಂದೂ ಸಮಾಜದಲ್ಲಿ ಅನುಕ್ರಮ (ಕ್ರಮಬದ್ಧ) ಶ್ರೇಣಿಯ ವ್ಯವಸ್ಥೆ ರೂಢಿಯಲ್ಲಿತ್ತು. ಮೇಲ್ಜಾತಿಗಳಿಗೆ ಸೇರಿದವರೇ ಹಿಂದೂ ಸಂಪ್ರದಾಯಗಳ ಸಂಪೂರ್ಣ ಉತ್ತರಾಧಿಕಾರಿಗಳಾಗಿದ್ದರು. ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದವರಷ್ಟೇ ಅಲ್ಲದೆ, ಹಿಂದುಳಿದ ವರ್ಗಗಳಿಗೆ ಸೇರಿದವರೆಂದು ಭಾವಿಸಲಾದವರು ಕೂಡ, ಹಿಂದೂ ಸಂಸ್ಕೃತಿಯಲ್ಲಿ ಯಾವುದೇ ಪಾಲನ್ನೂ ಹೊಂದಿರಲಿಲ್ಲ. ಹಿಂದೂ ಸಮಾಜದಲ್ಲಿ ಅವರಿಗೆ ಯಾವ ಮಾನ್ಯತೆಯೂ ಇರಲಿಲ್ಲ. ಸಮಾನತೆ ಹಾಗೂ ಪ್ರಜಾಪ್ರಭುತ್ವಗಳಿಗೆ ಸಂಬಂಧಿಸಿದ ಹೊಸ ಚಿಂತನೆಗಳಿಂದ ಸಮಾಜದಲ್ಲಿ ಮಹಾಪರಿವರ್ತನೆಯುಂಟಾಯಿತು. ಆವರೆಗೆ ಹಿಂದೂ ಸಮಾಜಕ್ಕೆ ಸೇರದವರು ಎಂದು ಪರಿಗಣಿಸಲಾಗಿದ್ದ ಲಕ್ಷಾಂತರ ಜನರು ಬಂಡೆದ್ದುದೇ ಹತ್ತೊಂಬತ್ತನೆಯ ಶತಮಾನದ ಚಳವಳಿಗಳ ಮೂಲಕಾರಣವೆನ್ನ ಬಹುದು. ಹೀಗೆ ಭಾರತೀಯ ಜೀವನದಲ್ಲಿ ಕ್ರಾಂತಿಕಾರಕವಾದ ಬದಲಾವಣೆಗಳು ಉಂಟಾದವು. ಭಾರತದ ಆದ್ಯಂತ ಇರುವ ಬ್ರಾಹ್ಮಣರಿಂದ ಹಿಡಿದು ಅಸ್ಪೃಶ್ಯರವರೆಗಿನ ಎಲ್ಲ ಜನರೂ ಸೇರಿದಂತೆ ರಾಜಕೀಯ ಹಾಗೂ ಸಾಮಾಜಿಕ ಭಾರತವನ್ನು ಗುರುತಿಸುವಂತಾಯಿತು. ಇದರಿಂದಾಗಿ ಆಧುನಿಕ ಭಾರತವು ಹೊಸ ರೂಪವನ್ನು ತಳೆಯಿತು. ೧೯ನೆಯ ಶತಮಾನದಲ್ಲಿ ವಿವಿಧ ಕ್ಷೇತ್ರಗಳಲ್ಲಿ ನಡೆದ ಅಭಿವೃದ್ಧಿ ಕಾರ್ಯಕ್ರಮಗಳೇ ಇದಕ್ಕೆಲ್ಲ ಮುಖ್ಯ ಕಾರಣ.

ವಿಜ್ಞಾನ ಹಾಗೂ ತಂತ್ರಜ್ಞಾನಗಳ ಪರಿಚಯ, ಭಾರತವನ್ನು ಒಂದಾಗಿ ಬೆಸೆಯಲು ನೆರವಾದಂತಹ ಆಧುನಿಕ ಸಂಪರ್ಕ ಸಾಧನಗಳಲ್ಲಿ, ರೈಲ್ವೆ, ಟೆಲಿಗ್ರಾಫ್, ಅಂಚೆ ವ್ಯವಸ್ಥೆಗಳಲ್ಲಿ ಉಂಟಾದ ಅಭಿವೃದ್ಧಿ, ಶಿಕ್ಷಣ, ನ್ಯಾಯಾಂಗಗಳೇ ಮೊದಲಾದ ರಂಗಗಳಲ್ಲಿ ಕಂಡುಬರತೊಡಗಿದ ಏಕರೂಪದ ಪದ್ಧತಿಗಳು, ನಮ್ಮ ಆಧುನಿಕ ಯುಗದ ವಿಶಿಷ್ಟ ಜೀವನ ಶೈಲಿಯನ್ನು ರೂಪಿಸಿದ ಇತರ ಅಂಶಗಳಾಗಿವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ೧೮೧೮ ಮತ್ತು ೧೯೧೮ರ ನಡುವಣ ಕಾಲಾವಧಿಯಲ್ಲಿ ನಡೆದ ಅಭಿವೃದ್ಧಿಗಳೇ ಮುಂದೆ ಭಾರತವು ಸಾಗಬೇಕಾದ ಪ್ರಗತಿಪಥವನ್ನು ನಿರ್ಧರಿಸಿದವು ಎಂಬುದು ಸ್ಪಷ್ಟ. ಮುಂದೆ ಭಾರತದ ಸಾಮಾಜಿಕ ಸಂರಚನೆ, ಆರ್ಥಿಕ ಅಭಿವೃದ್ಧಿ, ರಾಜಕೀಯ ಸ್ವರೂಪಗಳೇ ಮುಂತಾದ ಕ್ಷೇತ್ರಗಳಲ್ಲಿ, ಉಂಟಾದ ಭಾರೀ ಬೆಳವಣಿಗೆಗಳಿಗೆ, ಈ ಅವಧಿಯಲ್ಲಿ ಬಿತ್ತಿದ ಬೀಜಗಳೇ ಕಾರಣ. ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಭಾರತದಲ್ಲಿ ಪ್ರಾರಂಭವಾಗತೊಡಗಿದ ಅಭಿವೃದ್ಧಿ ಕಾರ್ಯಕ್ರಮಗಳೇ ಈ ಮಾತಿಗೆ ಸಾಕ್ಷ್ಯವನ್ನು ಒದಗಿಸುತ್ತವೆ. ರಾಜಾರಾಮ್ ಮೋಹನ್ ರಾಯ್ ಅವರು ಪ್ರಾರಂಭಿಸಿದ ಸಾಮಾಜಿಕ ಸಾಧಾರಣ ಚಳವಳಿಗಳ ಪರಿಣಾಮವಾಗಿ,

ಸಾಮಾಜಿಕ ಶಾಸನ ವ್ಯವಸ್ಥೆ ಚಾಲ್ತಿಗೆ ಬಂದು, ಹಿಂದೂ ಜೀವನ ಶೈಲಿಯನ್ನು ನವೀಕರಿಸಿತು. ವಿವಾಹ ಮತ್ತು ಉತ್ತರಾಧಿಕಾರಗಳಿಗೆ ಸಂಬಂಧಿಸಿದ ಏಕರೂಪವಾದ ಹಾಗೂ ಪ್ರಗತಿಪರವಾದ ಕಾಯ್ದೆಗಳು ಅನುಷ್ಠಾನಕ್ಕೆ ಬಂದುದರಿಂದ ಭಾರತದಲ್ಲಿ ಜಾತಿ ಪಂಥಗಳ ಪ್ರತ್ಯೇಕತೆಯಿಲ್ಲದ ಏಕಮಾತ್ರ ಸಮಾಜ ವ್ಯವಸ್ಥೆಯು ಕಂಡು ಬರತೊಡಗಿತು. ೧೯ನೆಯ ಶತಮಾನದ ಕೊನೆಯ ಐವತ್ತು ವರ್ಷಗಳ ಅವಧಿಯಲ್ಲಿ ಆರ್ಥಿಕ ಕ್ಷೇತ್ರದಲ್ಲಿ ಉಂಟಾದ ಬದಲಾವಣೆಗಳನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಸಣ್ಣಪುಟ್ಟ ಕೈಕಸಬುಗಳು ಕಣ್ಮರೆಯಾಗಿ, ಬೃಹದುದ್ಯಮಗಳು ಪ್ರಾರಂಭವಾಗ ತೊಡಗಿದವು. ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಶಾಲೆ–ಕಾಲೇಜುಗಳು ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾಗಿ, ಭಾರತದಲ್ಲಿ ನಡೆದ ಒಂದು ಬಗೆಯ ಬೌದ್ಧಿಕ ಕ್ರಾಂತಿಯನ್ನು ೧೯೧೮ರ ಸ್ಯಾಡ್ಲರ್ ಶೈಕ್ಷಣಿಕ ಆಯೋಗವು ಗಮನಕ್ಕೆ ತೆಗೆದುಕೊಂಡಿದೆ. ಈ ಕಾಲದಲ್ಲಿ ಭಾರತಕ್ಕೆ ಪರಿಚಯವಾದಂತಹ ಹೊಸ ರಾಜಕೀಯ ಮನೋಭಾವಗಳು ಹೊಸ ರಾಜಕೀಯ ಆಡಳಿತ ಪದ್ಧತಿಯನ್ನು ರೂಪಿಸಿಕೊಳ್ಳಲು ನಮಗೆ ನೆರವಾಗಿವೆ. ನಮ್ಮ ಸಂವಿಧಾನವೂ ಸಮಾನತೆ, ಸ್ವಾತಂತ್ರ್ಯ, ಸಹೋದರತ್ವ ಹಾಗೂ ಸಾಮಾಜಿಕ ನ್ಯಾಯಗಳ ಸಿದ್ಧಾಂತಗಳನ್ನು ಆಧರಿಸಿದೆ. ಈ ಸಿದ್ಧಾಂತಗಳ ಅನುಸರಣೆಯು ಭಾರತೀಯ ಸಮಾಜದ ಒಂದು ಅವಿಭಾಜ್ಯ ಅಂಗವಾದದ್ದು ಕೂಡ ೧೯ನೆಯ ಶತಮಾನದಲ್ಲಿಯೇ.

ಹೀಗೆ, ೧೯ನೆಯ ಶತಮಾನದಲ್ಲಿ ವಿವಿಧ ರಂಗಗಳಲ್ಲಿ ನಡೆದ ಅಭಿವೃದ್ಧಿ ಕಾರ್ಯಕ್ರಮಗಳಿಂದಾಗಿ, ನಮ್ಮ ಪ್ರಾಚೀನ ಹಿಂದೂ ಸಮಾಜವು ಸಮರ್ಥವಾದ, ದೂರದೃಷ್ಟಿಯಿಂದ ಕೂಡಿದ ಒಂದು ಹೊಸ ರಾಷ್ಟ್ರವಾಗಿ ರೂಪಾಂತರ ಹೊಂದಿತು. ಆದುದರಿಂದ ೧೮೧೮ ಮತ್ತು ೧೯೧೮ರ ನಡುವಣ ಕಾಲವು, ಭಾರತದ ಸುದೀರ್ಘ ಇತಿಹಾಸದಲ್ಲಿಯೇ ಅತ್ಯಂತ ಮುಖ್ಯವಾದ ನಿರ್ಣಾಯಕ ಕಾಲಾವಧಿಯಾಗಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದು.

ಕೊನೆಯದಾಗಿ, ಈ ಮೂರು ನಿರ್ಣಾಯಕ ಕಾಲಾವಧಿಗಳನ್ನು ಕುರಿತಂತೆ ಸಂಕ್ಷಿಪ್ತವಾಗಿ ಕೆಲವು ಮಾತುಗಳನ್ನು ಹೇಳಬಹುದು. ನಂದರು ಮತ್ತು ಮೌರ್ಯರ ರಾಜ್ಯಭಾರದ ಅವಧಿಯಲ್ಲಿ (ಕ್ರಿ.ಪೂ. ೩೫೦–೨೫೦) ಮೊತ್ತಮೊದಲ ಬಾರಿಗೆ ಒಗ್ಗಟ್ಟು ಮೂಡಿ, ಗಂಗಾನದೀ ಕಣಿವೆ ಪ್ರದೇಶಗಳನ್ನು ದಕ್ಷಿಣ ಮತ್ತು ದಕ್ಷಿಣ ಭಾರತಗಳೊಂದಿಗೆ ಬೆಸೆಯುವಂತಹ ಸಾಮ್ರಾಜ್ಯ ಸಂಪ್ರದಾಯವು ರೂಪುಗೊಂಡಿತು. ಅಲ್ಲದೆ, ಭಾರತೀಯರ ಐಕಮತ್ಯಕ್ಕೆ ಕಾರಣವಾದಂತಹ, ಸಂಸ್ಕೃತಿ ಹಾಗೂ ಸಂಪರ್ಕಗಳ ಏಕಮಾತ್ರ ಭಾಷೆಯಾಗಿ ಸಂಸ್ಕೃತವು ವಿಜಯವನ್ನು ಸಾಧಿಸಿತು. ಎರಡನೆಯ ನಿರ್ಣಾಯಕ ಕಾಲಾವಧಿಯಲ್ಲಿ (೧೩೩೦–೧೪೩೦) ಬಹುಸಮಾಜ ವ್ಯವಸ್ಥೆಯ ಒಂದು ಮುಖ್ಯ ಅಂಶವಾಗಿ ಹಿಂದೂ ಸಂಪ್ರದಾಯವು ನಿರಾತಂಕವಾಗಿ

ಮುಂದುವರಿಯುವುದು ಸಾಧ್ಯವಾಯಿತು. ಇಸ್ಲಾಮ್ ಧರ್ಮಕ್ಕೆ ಆಶ್ರಯ ದೊರೆಯಿತಾದರೂ, ಹಿಂದೂ ಧರ್ಮದ ಸಂಘಟನೆ ಹಾಗೂ ಸಂಪ್ರದಾಯಗಳನ್ನು ಆಧರಿಸಿದ ಭಾರತದ ಅನನ್ಯತೆಗೆ ಯಾವುದೇ ಹಾನಿಯುಂಟಾಗಲಿಲ್ಲ. ಮುಸ್ಲಿಮರ ಧಾರ್ಮಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಪ್ರಾಬಲ್ಯದಿಂದ, ಈಜಿಪ್ತ್, ಇರಾನ್ ಮತ್ತು ಇತರ ಪ್ರಾಚೀನ ನಾಗರಿಕತೆಗಳು ಉಸಿರುಗಟ್ಟಿ ನಾಶವಾಗಿಹೋಗಿದ್ದವು. ಆದರೆ ಭಾರತದಲ್ಲಿ ಹೀಗಾಗಲಿಲ್ಲ. ಬದಲಾಗಿ ಹಿಂದೂ ಧರ್ಮವು ಇನ್ನಷ್ಟು ಬಲಗೊಂಡಿತು. ಈ ಕಾಲದ ಬೆಳವಣಿಗೆಗಳ ಪರಿಣಾಮವಾಗಿ, ಇಸ್ಲಾಂ ಧರ್ಮವನ್ನೂ ತನ್ನ ಬಹು–ಸಮಾಜದ ಮುಖ್ಯ ಭಾಗಗಳಲ್ಲಿ ಒಂದಾಗಿ ಒಪ್ಪಿಕೊಂಡ ಭಾರತವು ತನ್ನ ಪ್ರಮುಖ ಹಿಂದೂ ಗುಣಲಕ್ಷಣಗಳನ್ನು ಉಳಿಸಿಕೊಳ್ಳಲು ಸಮರ್ಥವಾಯಿತು. ಮೂರನೆಯ ಕಾಲಾವಧಿಯಲ್ಲಿ (೧೮೧೮–೧೯೧೮) ಪ್ರಬಲ ಪಾಶ್ಚಾತ್ಯ ನಾಗರಿಕತೆಯೊಂದಿಗೆ ಮುಖಾಮುಖಿಯಾಗಬೇಕಾಗಿ ಬಂದಾಗ್ಯೂ, ಅದರ ಕೆಲವು ಅಂಶಗಳನ್ನು ಸ್ವೀಕರಿಸುವ ಹಾಗೂ ಇನ್ನೂ ಕೆಲವು ಅಂಶಗಳನ್ನು ನಿರಾಕರಿಸುವ ಮೂಲಕ, ಭಾರತವು ಸೂಕ್ತ ಪ್ರತಿಕ್ರಿಯೆಯನ್ನು ತೋರಿಸಿತು. ತನ್ನ ಹಿಂಧೂಧರ್ಮ, ತತ್ತ್ವಶಾಸ್ತ್ರ ಹಾಗೂ ಸೌಂದರ್ಯಪ್ರಜ್ಞೆಗಳ ಮೇಲೆ ಪಾಶ್ಚಾತ್ಯ ನಾಗರಿಕತೆಯ ಪ್ರಭಾವ ಬೀರುವಂತೆ ಎಚ್ಚರವಹಿಸಿತು. ಪರಿಣಾಮವಾಗಿ ಭಾರತದಲ್ಲಿ ತನ್ನದೇ ಪ್ರಾಚೀನ ಸಂಪ್ರದಾಯಗಳಲ್ಲಿ ಭದ್ರವಾಗಿ ಬೇರೂರಿದ ನವನಾಗರಿಕತೆಯೊಂದರ ಉದಯವಾಯಿತು. ಪಾಶ್ಚಾತ್ಯ ನಾಗರಿಕತೆಯ ಅನೇಕ ಒಳ್ಳೆಯ ಅಂಶಗಳನ್ನು ಭಾರತದ ಆಧುನಿಕ ಜೀವನ ಶೈಲಿ ತನ್ನಲ್ಲಿ ಸೇರಿಸಿಕೊಂಡಿದೆ. ಆದುದರಿಂದ ೧೯ನೆಯ ಶತಮಾನದಲ್ಲಿಯೇ ಭಾರತದ ಆಧುನಿಕ ನಾಗರಿಕತೆಯು ಚಿಗುರೊಡೆದು ಈಗ ಹೆಮ್ಮರವಾಗಿ ಬೆಳೆದಿದೆ. ಹೀಗೆ ಈ ಮೂರು ನಿರ್ಣಾಯಕ ಕಾಲಾವಧಿಗಳು ಭಾರತದ, ಮತ್ತು ಭಾರತೀಯರ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ. ಈಗ ನಾವು ಹೀಗಿರಲು, ಈ ಕಾಲಾವಧಿಗಳಲ್ಲಿ ನಡೆದ ಕಾರ್ಯಚಟುವಟಿಕೆಗಳೇ ಕಾರಣವೆಂಬುದರಲ್ಲಿ ಸಂಶಯವಿಲ್ಲ.

* * * *